2 P.M.

BUDGET ESTIMATES FOR 1963-64—DEMANDS FOR GRANTS

Demand No. 10.—19. General Administration.

Sri B. D. JATTI (Minister for Finance).—Sir, on the recommendation of the Governor of Mysore, I beg to move :

> "That a sum not exceeding Rs. 2,75,60,000 be granted to the Government to defray the charges which will come in course of payment during the financial year for the period ending 31st day of March 1964 in respect of "General Administration"."

Mr. SPEAKER.—Motion moved :

> "That a sum not exceeding Rs. 2,75,60,000 be granted to the Government to defray the charges which will come in course of payment during the financial year for the period ending 31st day of March 1964, in respect of "General Administration"."

I take that the other Demand (No. 9) is also moved.
Both the Demands are before the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ತಾವು ಒಂದು ಅನುಕೂಲವನ್ನು ಕಲ್ಪನೆ ಮಾಡಿಕೊಡಬೇಕೆಂದು ಕೇಳುತ್ತೇನೆ. ಇದರಲ್ಲಿ ಯಾವುದರ ಮೇಲೆ ಮಾತನಾಡಬಹುದು, ಯಾವುದರ ಮೇಲೆ ಮಾತನಾಡಬಾರದು ಎಂದು ತಿಳಿಸಬೇಕು. ಯಾವುದರ ಮೇಲೆ, ಹೇಗೆ ಮಾತನಾಡಬೇಕು ಎನ್ನುವುದು ಗೊತ್ತಾಗಿಲ್ಲ. ಇದನ್ನು ತಾವು ತಿಳಿಸಿದರೆ ಮಾತನಾಡುವಾಗ ತೊಂದರೆ ಕಡಮೆಯಾಗುತ್ತದೆಂದು ಹೇಳುತ್ತೇನೆ.

(Sri S. Sivappa stood)

Mr. SPEAKER.—Is it possible for me to go on explaining on what things Member should speak and on what points they should not? If there is anything to show that they are transgressing the limit, I will point out. That apart, Sri Sivappa is on his legs; if he does not yield, the Hon'ble Member will have to resume his seat.

Sri S. SIVAPPA (Sravanabelagola).—If he is asking for any point of procedure, I will yield.

Sri C. J. MUCKANNAPPA.—Sir, yesterday, after we heard some speeches, an apprehension is working in our minds as to on what to speak and on what not to speak.

Mr. SPEAKER.—The Hon'ble Member should have come to my Chambers and asked for all these clarifications instead of engaging the House here. Am I to go on delivering a lecture on this point here ?

Sri C. J. MUCKANNAPPA.—Sir, if I were injured, then I would have come to you and requested you to give me protection. But, this is about the right of the Hon'ble House. If you say that this House has not a right to discuss such and such a thing and not discuss such and such a thing, then I will agree.

Mr. SPEAKER.—This is a very complicated matter. I will coolly think over it and try to be of as much help as possible. The debate will now continue.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ ಸಾಮಾನ್ಯ ಆಡಳಿತದ ಡಿಮಾಂಡ್ ಬಗ್ಗೆ ಮಾತನಾಡುತ್ತ ಕೆಲವು ವಿಷಯಗಳನ್ನು ಹೇಳುತ್ತೇನೆ. ಈ General Administration, Demand No. 10, ಏನಿದೆ ಅದಕ್ಕೆ ಸಂಬಂಧಪಟ್ಟ ಇಲಾಖೆ ಮಾತ್ರವೇ ನಮ್ಮ ದೇಶದಲ್ಲಿ ಇವೊತ್ತಿನ ದಿವಸ ಆಡಳಿತ ನಡೆಸುತ್ತಿದೆ. ಸರ್ಕಾರದ ಆಡಳಿತ ದಕ್ಷತೆಯಾಗಿ ಅಥವಾ ದಕ್ಷತೆ ವಿಹೀನವಾಗಿ ಇದ್ದರೆ ಅದು ಸರ್ಕಾರವನ್ನು ನಡೆಸತಕ್ಕವರ ಮೇಲೆ ಅವಲಂಬಿಸುತ್ತದೆ. ಸರ್ಕಾರದ ಆಡಳಿತದ ಬಗ್ಗೆ ಅವರೇ ನೇಮಿಸಿದ್ದಂಥ Economy and Resources Committee ಯವರು ಈ ಸರ್ಕಾರದ ಆಡಳಿತ ಎಷ್ಟರ ಮಟ್ಟಿಗೆ ನಮ್ಮ ದೇಶದಲ್ಲಿ ನಡೆಯುತ್ತಿದೆ ಎನ್ನುವುದನ್ನು ಬಹಳ ದೀರ್ಘವಾಗಿ ವಿಮರ್ಶೆ ಮಾಡಿ ಅನೇಕ ಅತಿ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು administration reorganisation ಮಾಡುವ ವಿಚಾರವಾಗಿ ಒಂದು ಮಾತನ್ನು ಹೇಳುತ್ತಾರೆ. ಅದು ನಮ್ಮ ಮಾತಲ್ಲ. ಸರ್ಕಾರ ಯಾವ ಒಂದು ಕಮಿಟಿಯನ್ನು, ಒಳ್ಳೆಯ ಸಲಹೆಗಳನ್ನು ಕೊಡ ಬೇಕೆಂದು ನೇಮಕ ಮಾಡಿತ್ತೋ ಆ ಸಮಿತಿಯವರು ಈ ರೀತಿ ಹೇಳುತ್ತಾರೆ.

> "As the administrative work has grown it has tended to become slower in action......The public feeling in the State is that the administrative machinery is moving slow and not sufficiently responsive to the needs and aspirations of the people"

ಅವರು ಎರಡೇ ಮಾತಿನಲ್ಲಿ ಹೀಗೆ ಹೇಳುತ್ತಾರೆ. ನಮ್ಮ ದೇಶದ ಸರ್ಕಾರಿ ಆಡಳಿತದ ಇಲಾಖೆ ಎಷ್ಟರ ಮಟ್ಟಿಗೆ ಇವೊತ್ತಿನ ದಿವಸ ಜನತೆಯ ಆಶೋತ್ತರಗಳನ್ನೂ ಈಡೇರಿಸುವುದಕ್ಕೆ ದಕ್ಷತೆಯನ್ನು ಹೊಂದಿದೆ ಅಥವಾ ಇಲ್ಲವೆನ್ನುವುದನ್ನು ಅವರ ವರದಿಯಲ್ಲಿ ಬಹಳ ಚೆನ್ನಾಗಿಬರೆದಿದ್ದಾರೆ. ಅದೇ ರೀತಿ ಗೋರಪಾಲ ಕಮಿಟಿ, ಸರ್ಕಾರದವರೇ ನೇಮಕ ಮಾಡಿದಂಥ ಕಮಿಟಿ, ಕೂಡ ಬಹಳ ಕಟ್ಟು ನಿಟ್ಟಾಗಿ ತೀರ್ಮಾನ ಕೊಟ್ಟಿದೆ. ಈ ದೇಶದಲ್ಲಿ ಕೆಲಸ ಮಾಡುವ ಸರ್ಕಾರದ machinery ಬಹಳ ಹಳೆಯ ಕಾಲದ್ದಾಗಿದ್ದು. ಮೊನ್ನೆ ತಾನೇ ನೀವೇ ಹೇಳಿದ ಹಾಗೆ ತುಕ್ಕು ಹಿಡಿದು ಹೋಗಿದೆ; ಅದನ್ನೂ ಬಿಸಾಕಬೇಕು. ಅಂಥದ್ದನ್ನು ತೆಗೆದುಕೊಂಡು ಸರಿಮಾಡಿ "ಢಕಲೋಮಾಡಲ್" ಎನ್ನು ವಂತೆ ತಳ್ಳಿಕೊಂಡು ಹೋಗುತ್ತಿದ್ದೀರಿ. ಇವೊತ್ತಿನ ದಿವಸ ಹೊಸ ಸಮಾಜವನ್ನು ನಿರ್ಮಾಣ ಮಾಡ ಬೇಕು ಎಂದು ಹೇಳತಕ್ಕ ಕಾಲದಲ್ಲಿ ನೀವು ಹಳೆಯ ಕಾಲದ, ಓಬೀರಾಯನ ಕಾಲದಲ್ಲ, ಇಂಗ್ಲಿಷರು ಈ ದೇಶವನ್ನು ಆಳುತ್ತಿದ್ದ ಕಾಲದಲ್ಲಿದ್ದ ಅಧಿಕಾರಿ ಚೌಕಟ್ಟನ್ನೇ ಮುಂದುವರಿಸಿಕೊಂಡು ಹೋದರೆ, ಯಾವ ಒಂದು ಉದ್ದೇಶದಿಂದ ಅಧಿಕಾರಕ್ಕೆ ಬಂದಿರೋ ಅದು ಸಾಧನೆಯಾಗುವುದಿಲ್ಲ. ಅಧಿಕಾರಿ ಗಳ ಕೇಡರ್, ಸೆಕ್ರೇಟೇರಿಯಾಟ್ ; ಡೆಪ್ಯುಟಿ ಕಮಿಷನರುಗಳು, ಸಾಹೇಬರುಗಳು ಇಂಥ ಹುದ್ದೆ ಗಳನ್ನು ನಿರ್ಮಾಣ ಮಾಡತಕ್ಕ ಉದ್ಯಮದಲ್ಲಿ ಪ್ರವೀಣರಾಗಿ, ಬ್ರಿಟಿಷರ ಕಾಲದ ಆಡಳಿತದ ಚೌಕ ಟ್ಟನ್ನೇ ತಾವೂ ಮುಂದುವರಿಸಿಕೊಂಡು ಹೋಗುವುದನ್ನು ನೋಡಿದರೆ, ನಮಗೆ ನಿಜವಾಗಿಯೂ ದೇಶವನ್ನು ಆಳಬೇಕೆನ್ನುವ ಮನೋಭಾವವಿದೆಯೇ ಹೊರತು ದೇಶದ ಜನತೆಯ ಸೇವೆ ಮಾಡಬೇಕು ಎನ್ನುವ ಮನೋಭಾವವಿದ್ದಂತೆ ಕಾಣುವುದಿಲ್ಲ. ಅದನ್ನು ಕಾರ್ಯತಃ ತೋರಿಸಿಲ್ಲ. ಇದು ನಿಜ ವಾಗಿಯೂ ತುಂಬ ವಿಷಾದನೀಯ. ಸುಖೀ ರಾಜ್ಯವನ್ನು ಸ್ಥಾಪನೆ ಮಾಡಬೇಕು, ಸಮಾಜವಾದದ ಮಾದರಿಯಲ್ಲಿ ಈ ದೇಶದ ಸರ್ಕಾರವನ್ನು ರಚನೆ ಮಾಡಬೇಕು ಎನ್ನುವ ಭಾವನೆಯನ್ನು ಹೊಂದಿರುವ ನೀವು ಇವೊತ್ತಿನ ದಿವಸ ಹಳೆಯ ಕಾಲದ ಆಡಳಿತದ ಚೌಕಟ್ಟನ್ನು ಮುಂದುವರಿಸಿಕೊಂಡು ಹೋದರೆ, ನಿಮ್ಮ ಗುರಿ ಸಾಧನೆ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕಾಗಿದೆ. ಈಗಿನ ಹಳೆಯ ಆಡಳಿತ ವರ್ಗದಲ್ಲಿ ಸಾಕಷ್ಟು ರೀತಿಯಿಂದ, ಚೈತನ್ಯ ಪೂರ್ವಕವಾದ, ಕ್ರಾಂತಿಕಾರಕವಾದ ಬದಲಾವಣೆಯಾಗದೆ ಇದ್ದ ಪಕ್ಷದಲ್ಲಿ, ದೇಶದಲ್ಲಿ ಏನು ಉದ್ದೇಶ ಸಾಧನೆ ಮಾಡಬೇಕು, ಪಂಚವಾ ರ್ಷಿಕ ಯೋಜನೆಗಳನ್ನೂ ಕಾರ್ಯಗತ ಮಾಡಬೇಕು, ಎಂದು ತಾವು ಹೊರಟಿದ್ದೀರಿ ಅದು ನಿಜ ವಾಗಿಯೂ ಕಾರ್ಯ ರೂಪಕ್ಕೆ ಬರಲಾರದು.

ಹಿಂದೆ Economy and Resources Committee ರಿಪೋರ್ಟನ್ನು ಈ ಸಭೆಯ ಮುಂದೆ ಇಟ್ಟಾಗ, ವಿಧಾನ ಸೌಧದಲ್ಲಿರುವ Secretariat ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ, ಅಲ್ಲಿ ಕೆಲಸ ಎಷ್ಟರ ಮಟ್ಟಿಗೆ ಚುರುಕಾಗಿ ನಡೆಯುತ್ತಿದೆ ಎನ್ನುವುದನ್ನು ಅಂಕಿ ಅಂಶಗಳ ಮುಖಾಂತರ ಈ ಸಭೆಯಲ್ಲಿ ಹಿಂದೆಯೇ ಹೇಳಿದ್ದೇವೆ. ಈ ರಿಪೋರ್ಟಿನಲ್ಲಾದರೂ ಅವರು ಬಹಳ ಚೆನ್ನಾಗಿ ಹೇಳಿ

ದ್ದಾರೆ. ನಮ್ಮ ಸೆಕ್ರೆಟೇರಿಯಟ್ಟಿಗೆ ಒಂದು ಕಾಗದ ಬಂದರೆ ಅದು ಸರಿಯಾಗಿ ಇತ್ಯರ್ಥವಾಗ ಬೇಕಾದರೆ ಎಷ್ಟು ದಿವಸ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಅವರು ವರದಿಯಲ್ಲಿ ಉಲ್ಲೇಖಿಸಿ ದ್ದಾರೆ. ನಿಮ್ಮ ಮೂಗಿನ ಕೆಳಗೆ ಇರತಕ್ಕ ಸೆಕ್ರೆಟೇರಿಯಟ್; ನಿಮ್ಮ ಕಣ್ಣೆದುರಿಗೇ ಇರುವ ಸೆಕ್ರೆಟೇರಿಯಟ್ ಒಂದು ಅರ್ಜಿ ಬಂದು ಅದು ಇತ್ಯರ್ಥವಾಗಿ ಸೆಕ್ರೆಟೇರಿಯಟ್ ಬಾಗಿಲಿನಿಂದ ಹೊರಗೆ ಬರಬೇಕಾದರೆ 300 ದಿವಸ,400 ದಿವಸ, 500 ದಿವಸ ಹೀಗೆ ಆಗುತ್ತದೆ. ಒಂದು ಕಾಗದ 1,300 ದಿವಸ ತೆಗೆದುಕೊಂಡಿದೆ. 1,023 ದಿವಸ ಒಂದು ಕಾಗದ ತೆಗೆದುಕೊಂಡಿದೆ.

ಹೀಗೆ ನಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಅಷ್ಟು ತ್ವರಿತವಾಗಿ ಕೆಲಸ ಮಾಡಿಲ್ಲ ಎಂದು ಈ ರಿಸೋರ್ಸಸ್ ಕಮಿಟಿಯವರು ಬಹಳ ಚೆನ್ನಾಗಿ ನಿರೂಪಣೆ ಮಾಡಿದ್ದಾರೆ. ಅವರು ಒಳ್ಳೆಯ ಕೆಲಸವಾಗ ಬೇಕಾದರೆ ಕೆಲಸ ಕಾರ್ಯಗಳ ಕಾಗದಗಳು ಮೊದಲು ಕೇಸು ವರ್ಕರು ಹತ್ತಿರ, ಅನಂತರ ಸೂಪರಿಂಟೆಂಡಂಟ್‌ರವರ ಹತ್ತಿರ, ಆ ನಂತರ ಅವರ ಮೇಲಿನ ಅಧಿಕಾರಿಗಳಿಗೆ ಹೀಗೆ ಹೋಗುತ್ತಿರುವ ವಿವರಣೆಯನ್ನೆಲ್ಲಾ ಕೊಟ್ಟಿರುತ್ತಾರೆ. ಆದರೂ ಮಾಡಿರತಕ್ಕದ್ದು ವ್ಯವಹಾರದ ದೃಷ್ಟಿಯಿಂದ ಸಮಂಜಸ ವಲ್ಲ. ನಮ್ಮ ದೇಶದಲ್ಲಿ ಶೀಘ್ರವಾಗಿ ಕೆಲಸ ನಡೆಯಬೇಕಾದರೆ, Red Tapism ಎಂದರೆ ಕೆಂಪು ತುಂಡಿನ ದಾರದಿಂದ ಕೂಡಿರತಕ್ಕ ಪದ್ಧತಿ ಇರುವುದು ಹೋಗಬೇಕು. ಯಾವನಾದರೂ ಅರ್ಜಿದಾರ ಸರಕಾರಕ್ಕೆ ಬಂದರೆ ಅವನ ಕೆಲಸ ಬೇಗ, ಸುಲಲಿತವಾಗಿ, ಯಶಸ್ವಿಯಾಗುವ ರೀತಿಯಲ್ಲಿ ಅವನ ಕಷ್ಟ ಗಳನ್ನೂ ಪರಿಹರಿಸಲು ಅನುಕೂಲ ಮಾಡಿಕೊಡಬೇಕು. ಈಗ ಆ ರೀತಿ ಶೀಘ್ರವಾಗಿ ಅರ್ಜಿದಾರ ನಿಗೆ ತಕ್ಕಂತಹ ಕೆಲಸಗಳು ಈ ದೇಶದಲ್ಲಿ ನಡೆಯುತ್ತಿಲ್ಲ ಎಂದು ಬಹಳ ದಿವಸಗಳಿಂದಲೂ ಹೇಳುತ್ತಲೆ ಬಂದಿದ್ದೇವೆ ಆದರೂ ಕೂಡ ಈ ಬಗ್ಗೆ ಸರಕಾರದವರು ಯಾವ ಯಶಸ್ವಿಯಾದ ಕಾರ್ಯಕ್ರಮವನ್ನೂ ಶೀಘ್ರವಾಗಿ ನಡೆಸಲು ಪ್ರಯತ್ನ ಮಾಡಿಲ್ಲ.

Administration set upನ ಬಗ್ಗೆ ಹೇಳುವುದಾದರೆ ನಮ್ಮ ಸಾಮಾನ್ಯ ಆಡಳಿತದ ಇಲಾಖೆ ಯನ್ನು ಪುನರ್ವಿಮರ್ಶೆ ಮಾಡಬೇಕೆಂದು ಮೊದಲಿಂದಲೂ ಹೇಳುತ್ತಿದ್ದರೂ ಅದನ್ನು ಯೋಚನೆ ಮಾಡಿಲ್ಲ. ಈ ಯೋಚನೆಯನ್ನೆಲ್ಲಾ ಹಳೆಯ ಅಧಿಕಾರಿಗಳಿಗೇ ಬಿಟ್ಟಿದ್ದಾರೆ. ಅದಕ್ಕೋಸ್ಕರ ಇಲ್ಲಿ ನಮ್ಮ ಮುಂದೆ A,B,C,D,E,F, ಎಂದು ಐಟಂಗಳನ್ನು ಹೇಳಿ ಇದಕ್ಕಾಗಿ ಎರಡುಕೋಟಿ ಎಂಬತ್ತುಲಕ್ಷ ರೂಪಾಯಿಗಳಷ್ಟು ಬೇಕೆಂದು ಈ ಸಭೆಯಲ್ಲಿ ಕೇಳುತ್ತಿದ್ದಾರೆ.

ಇವೊತ್ತಿನ ದಿವಸ ಸಾಮಾನ್ಯ ಆಡಳಿತದ ಶಾಖೆಯಾಗಿ ಎರಡುಕೋಟಿ ಎಂಬತ್ತುಲಕ್ಷರೂಪಾಯಿ ಗಳನ್ನು ಕೇಳುತ್ತಿರುವ ಕಾಲದಲ್ಲಿ ನಾನು ಹೇಳುತ್ತಿರುವುದು. ಈ ಹಣವನ್ನೆಲ್ಲಾ ಖರ್ಚುಮಾಡ ತಕ್ಕದ್ದು. ಜಿಲ್ಲೆಯ ಮಟ್ಟದಲ್ಲಿರುವ ಜಿಲ್ಲಾಧಿಕಾರಿಗಳಿಗೋಸ್ಕರ ಎಂದು ಮತ್ತು ಸೆಕ್ರೆಟರಿಗಳಿ ಗೋಸ್ಕರ ಎಂದು ಹೇಳಿ ಎಲ್ಲ ಅಧಿಕಾರಗಳನ್ನೂ ಅವರ ಕೈಗೇ ಕೊಡಲಾಗಿದೆ. ಇವೊತ್ತಿನ ದಿವಸ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದ್ದರೆ ನಿಮ್ಮ ಅಧಿಕಾರದ ವ್ಯಾಪ್ತಿ ಯಾವ ರೀತಿ ಇರಬೇಕೋ ಅದರಂತೆ ಯಾವ ರೀತಿ ಮಾರ್ಪಾಡು ಮಾಡಬೇಕೆಂದು ತಾವು ಯೋಚಿಸು ತ್ತಿಲ್ಲ. ಹಳೆಯ ಕಾಲದಿಂದ ಬಂದಿರತಕ್ಕ ಜಿಲ್ಲಾಧಿಕಾರಿಗಳಿಗೇ ಎಲ್ಲ ಅಧಿಕಾರಗಳನ್ನೂ ಕೊಟ್ಟು ಬಿಟ್ಟಿದ್ದೀರಿ. ಪಂಚಾಯಿತಿಗಳಿಗೆ ಯಾವುದಾದರೂ ಕೆಲಸಕ್ಕೆ ದುಡ್ಡು ಬೇಕಾದರೆ ಅಮಲ್ದಾರರಾಗಳ ರುಜು ಆಗಬೇಕು. ಡೆವಲೆಪ್‌ಮೆಂಟು ಕಮಿಟಿಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರೂ ಅಲ್ಲಿ ಹಣ ಖರ್ಚುಮಾಡಬೇಕಾದರೆ ಅಮಲ್ದಾರವರ ರುಜು ಆಗಬೇಕು. ಮತ್ತೆ ಡಿಸ್ಟ್ರಿಕ್ಟು ಡೆವೆಲಪ್‌ಮೆಂಟು ಕಮಿಟಿಗೆ ಛೇರ್ಮನ್ನರಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿರುವುದು ಈ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡುವಂತಹುದು. ಈ ತರಹ ಯಾವ ದೇಶದಲ್ಲೂ ಇಲ್ಲ. ಡೆವೆಲಪ್‌ಮೆಂಟು ಕೌನ್ಸಿಲ್ಲಿಗೆ ಒಬ್ಬರು ಸರಕಾರಿ ಅಧಿಕಾರಿಯನ್ನು ಅಧ್ಯಕ್ಷರನ್ನಾಗಿ ಮಾಡಿ, ಅವರ ಕೈಕೆಳಗೆ ಶಾಸನಸಭೆಯ ಸದಸ್ಯರು ಇರಬೇಕು, ತಾಲ್ಲೂಕುಬೋರ್ಡುಗಳ ಅಧ್ಯಕ್ಷರು ಇರಬೇಕು ಎನ್ನುವುದು ಎಂತಹ ಪ್ರಜಾ ಪ್ರಭುತ್ವದ ನೀತಿ ? ಇದು ಅಧಿಕಾರದ ವಿಕೇಂದ್ರೀಕರಣವೇ ಎಂದು ಸರಕಾರವನ್ನು ಪ್ರಶ್ನಿಸಬೇಕಾ ಗಿದೆ. ಯೋಜನೆಗಳ ಮೂಲಭೂತವಾದ ಗುರಿ, ಪ್ರತಿಯೊಂದು ಪ್ರದೇಶದಲ್ಲಿರುವ ಜನಗಳ, ಹಳ್ಳಿ ಗಳಲ್ಲಿರುವ ಜನಗಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಸರಿಯಾದ ಆಡಳಿತ ಕಾರ್ಯಕ್ರಮಗಳನ್ನು ಕೈಗೊಂಡು ಎಲ್ಲ ಜನರಿಗೂ ಅನುಕೂಲವಾಗುವಂತೆ ಸಮರ್ಪಕವಾದ ಕೆಲಸಗಳನ್ನು ಮಾಡಬೇಕು. ಅದಕ್ಕೆ ತಕ್ಕಂತೆ ಮಾರ್ಪಾಡು ತಾಲ್ಲೂಕು ಬೋರ್ಡುಗಳಲ್ಲಿ ಪ್ರಾಶಸ್ತ್ಯ ಕೊಟ್ಟು ಮಾಡಬೇಕು ಅದರಂತೆ ಅಧಿಕಾರದ ವಿಕೇಂದ್ರೀಕರಣವಾಗಬೇಕು ಎನ್ನುವುದು ನಮ್ಮ ಸಮಾಜವಾದದ ಮೂಲಭೂತ ಉದ್ದೇಶ. ಇದು ಸಾಧನೆಯಾಗಬೇಕಾಗಿದ್ದರೆ, ಈಗ ಯಾವ ಯಾವ ಮಟ್ಟದಲ್ಲಿ ವಿಕೇಂದ್ರೀಕರಣ ವಾಗಬೇಕು ಎನ್ನುವುದರ ಕಡೆಗೆ ಗಮನ ಕೊಟ್ಟಿಲ್ಲ. ಜಿಲ್ಲಾಮಟ್ಟದಲ್ಲಿ ಒಬ್ಬರು ಜಿಲ್ಲಾಧಿಕಾರಿ ಗಳನ್ನು ಮಾಡಿದ್ದೀರಿ. ತಾಲ್ಲೂಕು ಮಟ್ಟದಲ್ಲಿ ಒಬ್ಬರು ತಹಶೀಲುದಾರರಿದ್ದಾರೆ, ಒಬ್ಬರು ಬ್ಲಾಕು ಡೆವೆಲಪ್‌ಮೆಂಟ್ ಅಧಿಕಾರಿಗಳಿದ್ದಾರೆ, ಮತ್ತು N.E.S.ಗೆ ಬೇರೆ ಒಬ್ಬರಿದ್ದಾರೆ. ಹೀಗೆ ತಹಶೀಲುದಾರರೂ ಸೇರಿ ಒಂದು ತಾಲ್ಲೂಕಿನಲ್ಲಿ ಮೂರುಜನ ಅಧಿಕಾರಿಗಳಿದ್ದಾರೆ. ಹೀಗೆ ನಿಮ್ಮ

(ಶ್ರೀ ಎಸ್. ಶಿವಪ್ಪ)

ಒಂದು ನೀತಿಯನ್ನು ಬದಲಾಯಿಸಲು ಅಧಿಕಾರಿಗಳ ಮಟ್ಟದಲ್ಲಿ ಇವೊತ್ತಿನ ದಿನ ಇನ್ನೂ ಸರಿಯಾದ ವಾತಾವರಣವನ್ನು create ಮಾಡಿಲ್ಲ. ಇಷ್ಟು ಮಟ್ಟಿಗಿದ್ದರೆ ವಿಕೇಂದ್ರೀಕರಣ ನೀತಿಯನ್ನು ಹೇಗೆ ಸಾಧನೆ ಮಾಡುತ್ತೀರಿ ಎಂದು ನಾನು ಕೇಳುತ್ತೇನೆ. ನಿಮ್ಮ ಮನಸ್ಸಿಗೆ ಬಂದಂತೆ ಅಧಿಕಾರಿಗಳನ್ನು ನಿರ್ಮಾಣ ಮಾಡುತ್ತೀರಿ. ಒಂದು ತಾಲ್ಲೂಕಿಗೆ ಒಂದೇ ಕೆಲಸ ಮಾಡಲು ಎರಡೂ ಮೂರು ಅಧಿಕಾರಿಗಳಿದ್ದಾರೆ, ತಹಶೀಲುದಾರರಿದ್ದಾರೆ, ಬಿ.ಡಿ.ಓ.ಗಳಿದ್ದಾರೆ, ಎನ್.ಇ.ಎಸ್. ಅಧಿಕಾರಿಗಳಿದ್ದಾರೆ. ಒಂದೇ ತರಹದ ಕೆಲಸಗಳನ್ನು ಮಾಡಲು ಈ ಅಧಿಕಾರಿಗಳಿದ್ದಾರೆ. ಬಿ.ಡಿ.ಓ.ಗಳಿಗಾಗಿ ಎರಡು ಮೂರು ಜೀಪುಗಳನ್ನು ಕೊಟ್ಟಿದ್ದೀರಿ. ಅವರೂ ಪೆಟ್ರೋಲು ಸುಟ್ಟುಕೊಂಡು ಪ್ರತಿ ಹಳ್ಳಿಗೂ ಹೋಗಿ ಪಂಚಾಯಿತಿಗಳಿಗೆ ಹೋಗಿ ಅವರ ಕಾರ್ಯದ ಬಗ್ಗೆ ಸಲಹೆಗಳನ್ನು ಕೊಟ್ಟು ಬರುತ್ತಾರೆ. ಇದೇ ಕೆಲಸವನ್ನು ತಹಶೀಲುದಾರರೂ ಮಾಡುತ್ತಾರೆ. ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳನ್ನು ನೇಮಕ ಮಾಡಿದ್ದೀರಿ. ಅವನ ಹತ್ತಿರ ಹೋಗಿ ಇಂತಿಂತಹ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಹೀಗೆ ಅಧಿಕಾರಿಗಳನ್ನು Top Heavy ಎಂದರೆ ತಲೆ ಶಿರೋಭಾರದಂತೆ ಹೆಚ್ಚು ಮಾಡಿದರೆ, ಈ ದೇಶದಲ್ಲಿ ಸಮಾಜವಾದವನ್ನು ನಿರ್ಮಾಣ ಮಾಡಿದಂತಾಯಿತೇ? ಇದು ನಿಜವಾಗಿಯೂ ನಿಮ್ಮ ಒಂದು ಕ್ಷುಲ್ಲಕ ನೀತಿ. ನಿಮಗೆ ನಿಮ್ಮ ಗುರಿ ಸಾಧನೆ ಮಾಡಬೇಕೆಂದು ಇದ್ದ ಪಕ್ಷದಲ್ಲಿ ಈ ರೀತಿ ಹೆಚ್ಚಿಗೆ ಅಧಿಕಾರಿಗಳನ್ನೇಕೆ ನಿರ್ಮಾಣ ಮಾಡಬೇಕು? All India Scheme ಬಂದಿದೆ ಎಂದು ಅದನ್ನು ಚಾಚೂ ತಪ್ಪದಂತೆ ಮಾಡಬೇಕೆಂದು ಹೇಳಿ ನಾವೂ ಮಾಡೋಣ ಎಂದು ಇಲ್ಲಿ ಇಟ್ಟುಕೊಂಡಿದ್ದಾರೆ. ನಮ್ಮ ದೇಶದಲ್ಲಿ ತಾಲ್ಲೂಕು ಮಟ್ಟದಲ್ಲಾಗಲೀ, ಅಥವಾ ಪಂಚಾಯಿತಿ ಮಟ್ಟದಲ್ಲಾಗಲೀ, ಯಾವ ತರಹ ವಿಕೇಂದ್ರೀಕರಣ ಮಾಡಬೇಕು, ಅವರಿಗೆ ಎಷ್ಟು ಅಧಿಕಾರವನ್ನು ಕೊಡಬೇಕು ಅದಕ್ಕೆ ಅಧಿಕಾರಿಗಳನ್ನು ಯಾವ ರೀತಿ ಉಪಯೋಗಿಸಿಕೊಂಡು ಕೆಲಸ ಮಾಡಬೇಕೆನ್ನುವುದನ್ನು ಶಾಸ್ತ್ರೀಯವಾಗಿ ಯೋಚನೆ ಮಾಡಿಲ್ಲ. ಹಾಗೆ ಶಾಸ್ತ್ರೀಯವಾಗಿ ಯೋಚನೆ ಮಾಡತಕ್ಕ ಸಂದರ್ಭದಲ್ಲಿ Equity ನೋಡಿಕೊಂಡು ಕೆಲಸ ಮಾಡಬೇಕೆಂದು ರಿಸೋರ್ಸಸ್ ಮತ್ತು ಎಕಾನಮಿ ಕಮಿಟಿ ರಿಪೋರ್ಟಿನಲ್ಲಿ ರೆಕಮೆಂಡು ಮಾಡಿದ್ದಾರೆ. ಮೈಸೂರು ದೇಶಕ್ಕೆ ಅದಷ್ಟು ಮಟ್ಟಿಗೆ ಒಂದು Compactness ಇರಬೇಕೆಂದು ಯಾವ ಒಂದು ಕಮಿಟಿ ಮಾಡಿದರೂ ಅದರೊಳಗೆ, ಇಷ್ಟು ಜನಸಂಖ್ಯೆ ಇದೆ, ಅಮಲ್ದಾರರುಗಳನ್ನು ಜಾಸ್ತಿ ಮಾಡಲಿಲ್ಲ. ಜಿಲ್ಲೆಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು, ಎಂದು ಮೈಸೂರುದೇಶದಲ್ಲೆಲ್ಲಾ ಸಂಚಾರ ಮಾಡಿ ಅವರಿಗೆ ಹಣವನ್ನು ಕೊಟ್ಟು ಖರ್ಚುಮಾಡಿದ್ದಾರೆ. ಮೈಸೂರು ದೇಶಕ್ಕೆ ಈಗ ೧೯ ಜಿಲ್ಲೆಗಳಿರುವುದನ್ನು ೨೧ ಜಿಲ್ಲೆಗಳಷ್ಟು ಮಾಡಿ ಈಗಿರತಕ್ಕ ನಾಲ್ಕು ಡಿವಿಜನ್ನುಗಳನ್ನು ಆರು ಡಿವಿಜನ್ನುಗಳಾಗಿ ಮಾಡಿ, ಹಾಗೆಂದು ಸಲಹೆ ಮಾಡಿದ್ದಾರೆ. ಅದೇ ರೀತಿ ಗೋರವಾಲ ಕಮಿಟಿಯವರು ೧೯ ಜಿಲ್ಲೆಗಳಿರುವುದನ್ನು ೧೫ ಜಿಲ್ಲೆಗಳಿಗೆ ಇಳಿಸಬೇಕು, ನಾಲ್ಕು ಡಿವಿಜನ್ನುಗಳನ್ನು ಮೂರು ಡಿವಿಜನ್ನುಗಳಿಗೆ ಇಳಿಸ ಬೇಕು ಎಂದು ಹೀಗೆ ಒಬ್ಬೊಬ್ಬರು ಒಂದೊಂದು ಕಮಿಟಿ ಮಾಡಿದಾಗಲೂ ಅವರ ಮನಸ್ಸಿಗೆ ಬಂದಂತೆ ರಿಪೋರ್ಟು ಕೊಟ್ಟು ಶಾಸ್ತ್ರೀಯವಾಗಿ ನಮ್ಮ ಮೈಸೂರು ದೇಶಕ್ಕೆ ಯಾವರೀತಿಯಾಗಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು, ಯಾವರೀತಿ ಜಿಲ್ಲೆಗಳ ಅಧಿಕಾರವನ್ನೂ ನಿರ್ಮಾಣ ಮಾಡಬೇಕು. ಯಾವರೀತಿ ತಾಲ್ಲೂಕುಗಳಲ್ಲಿ ಅಧಿಕಾರವನ್ನು ನಿರ್ಮಾಣ ಮಾಡಬೇಕು ಎನ್ನುವುದನ್ನು ಯಾರೂ ಯೋಚನೆ ಮಾಡಲಿಲ್ಲ. ಯಾರೂ ಸರಿಯಾಗಿ ಪರಿಶೀಲನೆ ಮಾಡಿಲ್ಲ ಎಂದರೆ ಅದಕ್ಕೆ ಒಂದು ಕಮಿಟಿ ಮಾಡಿ ಅವರು ರೀಸರ್ಚು ಮಾಡಲು ಅವರಿಗೆ ಸಂಚಾರ ಭತ್ಯ ಕೊಟ್ಟು, ಅವರು ಊರೂರುಗಳನ್ನೆಲ್ಲಾ ಸಂಚಾರ ಮಾಡಿ ಒಂದು ರಿಪೋರ್ಟು ಕೊಡುತ್ತಾರೆ. ಆ ರಿಪೋರ್ಟು ಎಲ್ಲಿದೆಯೋ ಗೊತ್ತಿಲ್ಲ. They are all in cold storage. ಈ ಸಭೆಯಲ್ಲಿ ಇಂತಿಂತಹ ಕಮಿಟಿಗಳನ್ನು ನಿರ್ಮಾಣ ಮಾಡಿದ್ದೇವೆ ಇಂತಿಂತಹ ಕಮಿಟಿಗಳ ರಿಪೋರ್ಟುಗಳನ್ನು ತರಿಸಿದ್ದೇವೆ ಎಂದು ಹೇಳುತ್ತಾ ಅಷ್ಟು ಮಾತ್ರಕ್ಕೆ ನೀವು ನಿಮ್ಮ ಭುಜವನ್ನು ತಟ್ಟಿಕೊಂಡು ಹೇಳಬಹುದು. ಈ ದೇಶಕ್ಕೆ ತಮ್ಮದೇ ಆದ ಒಂದು ಅಧಿಕಾರವನ್ನು ಯಾವ ರೀತಿ ಸೃಷ್ಟಿ ಮಾಡಬಹುದು ಎನ್ನುವ ವಾತಾವರಣದಲ್ಲಿ ನಿಮ್ಮದೇ ಆದ ಒಂದು ತೀರ್ಮಾನವನ್ನೂ ಇದುವರೆಗೂ ಕೊಡುತ್ತಾ ಬಂದಿದ್ದೀರಿ. ಯಾವುದೇ ಬರಲಿ ಅದನ್ನು ಫೈನಲ್ಲೈಸು ಆಗಿ ವಿಚಾರ ಮಾಡತಕ್ಕದ್ದು ನಮ್ಮ ದೇಶದಲ್ಲಿಲ್ಲದೇ ಹೋದರೆ ಎಫಿಷಿಯೆನ್ಸಿ ಎಲ್ಲಿಂದ ಬರಬೇಕು. ಇದರಿಂದ ಏನನ್ನು ಸಾಧನೆ ಮಾಡಬೇಕೆಂದು ಹೊರಟರೋ ಅದನ್ನು ಖಂಡಿತ ಸಾಧನೆ ಮಾಡಲು ಸಾಧ್ಯವಿಲ್ಲ. ಸತ್ಯದಿಂದ, ನಿಷ್ಠೆಯಿಂದ, ಈ ದೇಶದಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಲೇ ಬೇಕು ಎಂದು ಹೇಳುತ್ತೇನೆ.

ಮತ್ತೆ ಇಂಟೆಗ್ರೇಷನ್ನಿನ ವಿಚಾರ ನಮ್ಮ ದೇಶ ವಿಸ್ತಾರವಾಗಲು ಐದು ದೇಶಗಳ ವಿವಿಧ ಭಾಗಗಳು ಮೈಸೂರಿಗೆ ಬಂದು ಸೇರಿ ವಿಶಾಲ ಮೈಸೂರಾಯಿತು. ಇದಕ್ಕೆ ಹೈದರಾಬಾದು

ಕರ್ನಾಟಕದ ಕೆಲವು ಭಾಗ, ಬೊಂಬಾಯಿ ಕರ್ನಾಟಕದ ಕೆಲವು ಭಾಗ, ಮದರಾಸಿನ ಕೆಲವು ಪ್ರದೇಶಗಳು, ಕೊಡಗಿನ ಕೆಲವು ಪ್ರದೇಶಗಳು ಹೀಗೆ ಬಂದು ಐದು ತರಹದ ಕಾನೂನುಗಳು, ಐದು ತರಹದ ಅಧಿಕಾರಿಗಳು ಈ ದೇಶಕ್ಕೆ ಬಂದು ಹೊಸ ಮೈಸೂರಾಗಿದೆ. ಮೈಸೂರಿನಲ್ಲಿರುವ ಅಧಿಕಾರವರ್ಗಕ್ಕೆ ಹಾಗೂ ಇತರ ಭಾಗಗಳಿಂದ ಬಂದಿರುವ ಅಧಿಕಾರಿಗಳ ವರ್ಗಕ್ಕೆ ಅಂತರ ಮತ್ತು ಸಂಬಳಗಳಲ್ಲಿ ವ್ಯತ್ಯಾಸಗಳು ಇವೆ. ಇಂತಿಂತಹ ಭಾಗದ ಜನಗಳಿಗೆ ಒಂದು ರೀತಿಯ ಸಂಬಳ ಮತ್ತು ಕೆಲಸದಲ್ಲಿ ಅಂತರ ಹೀಗೆಲ್ಲಾ ನಿರ್ಮಾಣ ಮಾಡಿ. ಕೆಲವರ ಪ್ರಸಂಗಗಳನ್ನೂ ಇನ್ನೂ ಇತ್ಯರ್ಥ ಮಾಡದೇ ಇರುವ ಪ್ರಸಂಗಗಳು ಇವೆ. ಇಷ್ಟು ದಿವಸವಾದರೂ ಹೊಸ ಮೈಸೂರು ನಿರ್ಮಾಣವಾಗಿ ಏಳು ವರ್ಷಗಳಾದರೂ ಇದುವರೆಗೆ Inter-state Seniority ವಿಷಯದ ಬಗ್ಗೆ ಇನ್ನೂ ಲಿಸ್ಟನ್ನು ಪೂರ್ತಿಮಾಡಿಲ್ಲ. ಏತಕ್ಕೋಸ್ಕರ ಇನ್ನೂ ನಿಧಾನ ಮಾಡುತ್ತಿದ್ದೀರಿ ! ನಮ್ಮ ಅಧಿಕಾರಿಗಳಿಗೆ ಯಾವ ರೀತಿಯ ಕೆಲಸ ಕೊಟ್ಟಿದ್ದರೂ ಅವರಿಗೆ ದೊರಕತಕ್ಕಂತಹ ಸಾಮಾನ್ಯ ನ್ಯಾಯವನ್ನು ಕೂಡ ದೊರಕಿಸಿ ಕೊಡದೇ ಹೋದರೆ ಅವರಿಗೆ ಏನು ಸಹಾಯ ಮಾಡಿದಂತಾಗುತ್ತದೆ. ಅವರು ಏನು ಪ್ರೀತಿ, ವಿಶ್ವಾಸದಿಂದ ಕೆಲಸ ಮಾಡಬಲ್ಲರು, ಸರಕಾರದ ಸೇವೆ ಹೇಗೆ ಮಾಡುತ್ತಾರೆ? ಎನ್ನುವುದನ್ನು ತಾವು ಯೋಚನೆ ಮಾಡಬೇಡವೇ. ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ನ್ಯಾಯ ಸಲ್ಲಬೇಕೆಂದು ಏಳು ವರ್ಷಗಳಾದರೂ ಇನ್ನೂ ಅವರಿಗೆ ಯಾವ ಸುಧಿನ ಅವರಿಗೆ ಇದೆ ಎನ್ನುವುದನ್ನು ತಿಳಿಯಲಾಗುತ್ತಿಲ್ಲ. ಹೀಗಾದರೆ ನಿಜವಾಗಿಯೂ ಇಲ್ಲಿ ಎಷ್ಟುಮಟ್ಟಿಗೆ ದಕ್ಷತೆ ಬರುತ್ತದೆ ಎನ್ನುವುದನ್ನು ಸರಕಾರ ಇನ್ನೂ ಯೋಚನೆ ಮಾಡದೆ ಇರತಕ್ಕದ್ದು ತುಂಬಾ ಶೋಚನೀಯ.

ಇದರಿಂದ ಏನಾಗಿದೆ ಎಂದರೆ ಅಧಿಕಾರಿಗಳು ಪ್ರೀತಿಯಿಂದ ನಿಷ್ಠೆಯಿಂದ, ಕೆಲಸ ಮಾಡುತ್ತಿಲ್ಲ. ಅವರ ಮನಸ್ಸು ನೊಂದಿದೆ. ಅವರಿಗೆ ನ್ಯಾಯ ದೋರಕಿಸಿ ಕೊಡಬೇಕಾದುದು ಸರಕಾರದ ಕರ್ತವ್ಯ ಎಂದು ಹೇಳಬೇಕಾಗಿದೆ. ಇದನ್ನು ನಿರ್ಮಾಣ ಮಾಡತಕ್ಕಂಥ ಕಾಲದಲ್ಲಿ ಒಂದು ಪ್ರಿನ್ಸಿಪಲ್ ಇಟ್ಟು ಕೊಂಡಿರಬೇಕು. A sense of partnership and a sense of equal participation in the work ಇರಬೇಕು. ಆದರೆ ಇದು artificial ಆಗಿ ಬಂದಿದೆ. ಒಂದೇ ರೀತಿಯಾಗಿ ಇಬ್ಬರು ಪದವೀಧರರಾಗಿದ್ದರೂ ಸಹ ಒಂದೇ ಆಫೀಸಿನಲ್ಲಿ ಒಬ್ಬನು ಸೂಟ್, ಟೈ ಹಾಕಿಕೊಂಡು ಸಾಹೇಬನಾಗುತ್ತಾನೆ. ಅಸಿಸ್ಟಂಟ ಕಮಿಷನರ್ ಆಗುತ್ತಾನೆ ಅದೇ ಆಫೀಸಿನಲ್ಲಿ ಇನ್ನೊಬ್ಬನು ಗುಮಾಸ್ತನಾಗುತ್ತಾನೆ. ಇದು ಆರ್ನೆಡೆಂಟಲ್ ಆಗಿ ಆಗುತ್ತದೆ. ಅನೇಕ ಸಂದರ್ಭಗಳಲ್ಲಿ ಈ ರೀತಿ ಒಬ್ಬನು ಅಧಿಕಾರಿಯಾಗಿಯೂ ಇನ್ನೊಬ್ಬನು ಗುಮಾಸ್ತನಾಗಿಯೂ ಕೆಲಸ ಮಾಡುವುದನ್ನು ನೋಡಿದ್ದೇನೆ. ಜಾತೀಯ ಪ್ರಭಾವದಿಂದ ಕೆಲವರು ದೊಡ್ಡ ದೊಡ್ಡ ಅಧಿಕಾರಿಗಳಾಗಿ ಬಿಡುತ್ತಾರೆ. ಜಾತೀಯ ಪ್ರಭಾವದ ದೃಷ್ಟಿಕೋನದಿಂದ ಇಂಥ ನೇಮಕಗಳು ನಡೆದಿವೆ. ಶ್ರೀಮಾನ್ ಜತ್ತಿಯವರ ವಿಜಾಪುರ ಜಿಲ್ಲೆಯವನಾಗಿ ಬಿಟ್ಟರೆ ಅವನು ಕೂಡಲೇ ಪ್ರಭಾವದಿಂದ ದೊಡ್ಡ ಅಧಿಕಾರಿಯಾಗಿ ಬಿಡುತ್ತಾನೆ. ಈ ರೀತಿ ದೇಶದಲ್ಲಿ ಆಗುತ್ತಿದೆ. ಇದರಿಂದ ದೇಶದ ಗತಿ ಏನಾಗುತ್ತದೆ? ಬಹುಶಃ ಒಂದು ಕ್ರಾಂತಿಯಾಗುತ್ತದೆ. ಅಂಥ ಕ್ರಾಂತಿಯಾಗುವುದಕ್ಕೆ ದೇಶ ತೆಗೆದುಕೊಂಡು ಹೋಗುವುದು ಬೇಡ. Merit ಅಂದರೆ ಯೋಗ್ಯತೆಗೆ ಬೆಲೆ ಕೊಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ 3,80,000 ರೂ. ಡಿಮ್ಯಾಂಡ ಹಾಕಿದ್ದೀರಿ. ಈ ಹಣ ನಮ್ಮ ದೇಶದಲ್ಲಿ ಉನ್ನತ ಅಧಿಕಾರಿಗಳನ್ನು ನೇಮಿಸತಕ್ಕಂಥ ದೊಡ್ಡ ಅಧಿಕಾರ ಹೊಂದಿರತಕ್ಕ ಪಬ್ಲಿಕ್ ಸರ್ವಿಸ್ ಕಮಿಷನ್ ಸಲುವಾಗಿ ಇದೆ. ಬಜೆಟ್ಟು ಭಾಷಣ ಮಾಡುತ್ತಾ ಇರುವ ಕಾಲದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಪಬ್ಲಿಕ್ ಸರ್ವಿಸ್ ಕಮಿಷನ್ ಯಾವ ರೀತಿ ಏರ್ಪಾಡು ಮಾಡಿದ್ದೀರಿ ಎನ್ನುವ ವಿಷಯವನ್ನು ಸರಕಾರದ ಗಮನಕ್ಕೆ ತಂದಿದ್ದಾರೆ. ಪಬ್ಲಿಕ್ ಸರ್ವಿಸ್ ಕಮಿಷನ್ ನ್ಯಾಯ ವಿಮರ್ಶೆ ಮಾಡುವ ದೇಗುಲ, ದೇವ ಮಂದಿದಂತೆ ಆಗಿರಬೇಕು. ಇಂಥ ಮಹಾ ಸಂಸ್ಥೆಯಾಗಿರುವ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಯಾರು ಸದಸ್ಯರಾಗಿರಬೇಕು ಎನ್ನುವುದು ಮಹತ್ವದ್ದಾಗಿದೆ. ಈ ಸದಸ್ಯರ ನೇಮಕ ಮಾಡುವಾಗ್ಗೆ ನಿಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಇಂಥ ಮಹಾ ಸಂಸ್ಥೆಗೆ ನೇಮಕ ಮಾಡಿದರೆ ಎಷ್ಟರ ಮಟ್ಟಿಗೆ ನಿಸ್ಪೃಹವಾಗಿ ನ್ಯಾಯ ದೊರಕುತ್ತದೆ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ನಿಮ್ಮ ಪಕ್ಷದ ಜನರನ್ನು ಸರಕಾರಿ ಅಧಿಕಾರಿಗಳನ್ನಾಗಿ ಆರಿಸಿಕೊಳ್ಳುವ ಒಂದು ಏರ್ಪಾಡು ಮಾಡಿದ್ದೀರಿ. ಪಬ್ಲಿಕ್ ಸರ್ವಿಸ್ ಕಮಿಷನ್ ಇದು ಹೈಕೋರ್ಟು ಉಚ್ಚನ್ಯಾಯಾಲಯ ಇದ್ದಹಾಗೆ ಇರಬೇಕು. ಯಾವ ರೀತಿಯಿಂದಲೂ ಟೀಕೆಗೆ ಗುರಿಯಾಗಿರಬಾರದು. ಅಂಥ ಮಹಾ ಸಂಸ್ಥೆಯಲ್ಲಿ ನಿಮ್ಮ ಪಕ್ಷೀಯ ಪ್ರಭಾವ ಬೀರುವುದಕ್ಕೆ ಅವಕಾಶ ಮಾಡಿದ್ದೀರಿ. ಇದರಿಂದ ಟೀಕೆಗೆ ಈ ವಿಷಯ ಒಳಗಾಗಿದೆ. ಇಂಥ ಕಾರ್ಯದಲ್ಲಿ ನಿಮ್ಮ ಪಕ್ಷದ ಹಿತ ಸಾಧನೆಯ ನೋಟವಿರಬಾರದು. ಈ ಸಂಸ್ಥೆಯಲ್ಲಿ ಸದಸ್ಯರ ನೇಮಕಮಾಡುವಾಗ್ಗೆ ನಿಷ್ಪಕ್ಷಪಾತ ಮತ್ತು ಪಕ್ಷಾತೀತ ಮನೋಭಾವ ಇರಬೇಕು. ದೇಶದಲ್ಲಿ ಸುಖೀ ರಾಜ್ಯ ಸ್ಥಾಪನೆ ಮಾಡುವ ಧ್ಯೇಯವಿಟ್ಟು ಕೊಂಡಿರುವಾಗ್ಗೆ ಒಳ್ಳೆ ಅಧಿಕಾರಿಗಳು ಬೇಕು. ತಾರತಮ್ಯ ದೃಷ್ಟಿಯಿಂದ ನೋಡುವ ಮನೋ

(ಶ್ರೀ ಎಸ್. ಶಿವಪ್ಪ)

ಭಾವ ಸರಿಯಲ್ಲ. ಇಂಥ ಪರಿಸ್ಥಿತಿಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಯಾವ ರೀತಿ ಕೆಲಸ ಮಾಡುತ್ತದೆ ಎನ್ನುವುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕು.

Hospitality Grants and Expenses ಬಾಬಿಗೆ 6,69,000 ರೂಪಾಯಿ ಒದಗಿಸಲಾಗಿದೆ ಇದಕ್ಕೆ ಕಾರಣ ಏನು ಕೊಟ್ಟಿದ್ದೀರಿ ಅಂಡರೆ ಅತಿಥಿಗಳಿಗೋಸ್ಕರ, ಗೆಸ್ಟ್ ಹೌಸ್‌ಗೋಸ್ಕರ, ಕಾರುಗಳ ರಿಪೇರಿ ಮಾಡುವುದಕ್ಕೆ. ಅತಿಥಿಸತ್ಕಾರ ಈ ರೀತಿ ಇದೆ. ಈ ಕಾಲವಿಮ್ಮಿನಲ್ಲಿ ಹತ್ತು ಲಕ್ಷ ಸೇರಿಸಿದ್ದೀರಿ, ಇದು ಏತಕ್ಕೆ? ಎಕಾನಮಿ ಮೆಜರ್ಸ ಜಾರಿಗೇ ತರುವದಾದರೆ ಆದಷ್ಟು ಮಟ್ಟಿಗೆ ಖರ್ಚು ಕಡಿಮೆ ಮಾಡಬೇಕು. ಸರಳ ಜೀವನ ನಡೆಸಬೇಕು. ಮೋಟಾರಕಾರು ರಿಪೇರಿಗಾಗಿ $1\frac{1}{2}$ ಲಕ್ಷ ರೂಪಾಯಿ ಖರ್ಚುಮಾಡುವುದು ಇದು ಯಾವ ಸಮಾಜವಾದ? ನೀವು ಒಂದು ಹೊಸ ಸಮಾಜವಾದವನ್ನು ನಿರ್ಮಾಣ ಮಾಡುತ್ತಿದ್ದೀರಿ. ನಿಮ್ಮ ವೈಭವಕ್ಕೆ ನಿಮ್ಮ ಸಿರಿತನದ ಜೀವನಕ್ಕೆ ಹಣ ಖರ್ಚು ಮಾಡುವದಾದರೆ ಮಿತವ್ಯಯ ಎಲ್ಲ ಬಾಬುಗಳಲ್ಲಿ ಹೇಗೆ ಬರುತ್ತದೆ? ಸಣ್ಣ ಪುಟ್ಟ ವಿಷಯಗಳಲ್ಲಿ ಖರ್ಚು ಕಡಿಮೆ ಮಾಡಿರಬಹುದು. ನಿಮ್ಮ ನೇತೃತ್ವದಲ್ಲಿ ಸುಂದರ ಕಾರುಗಳಿಗಾಗಿ ಲಕ್ಷಗಟ್ಟಲೆ ಹಣ ಖರ್ಚು ಮಾಡುವುದರಲ್ಲಿ ಯಾವ ಬದಲಾವಣೆಯಾಗಿಲ್ಲ. ಹಿಂದಿನ ವರ್ಷ ಎಷ್ಟು ಹಣ ಬಜೆಟ್ಟಿನಲ್ಲಿ ಒದಗಿಸಲಾಗಿದ್ದಿತೋ ಅಷ್ಟೇ ಹಣವನ್ನು ಈ ಬಾಬಿಗೆ ಈ ವರ್ಷ ಸಹ ಒದಗಿಸಲಾಗಿದೆ. ಈಗಿನ ಎಮೆರಜನ್ಸಿ ಅಂದರೆ ತುರ್ತು ಪರಿಸ್ಥಿತಿಯಲ್ಲಿ ಏಕಾನಮಿ ಮೆಜರ್ಸ ನಿಮ್ಮಲ್ಲಿ ಇಲ್ಲ. ಎಕಾನಮಿ ಮೆಜರ್ಸ ಜಾರಿ ಮಾಡುವುದು ಮೇಲಿನಿಂದ ಹೊರಡಬೇಕು. ಇಲ್ಲದಿದ್ದರೆ ಎಕಾನಮಿ ಮೇಜರ್ಸ್ ಹೇಗೆ ಆಗುತ್ತದೆ? ಈ ತುರ್ತು ಪರಿಸ್ಥಿತಿಯ ನೇಪಹೇಳಿ ಶೆರಿಗೆ ಹೊರೆ ಹೇರುತ್ತಿದ್ದೀರಿ. ಎಕಾನಮಿ ಮೆಜರ್ಸ ಜಾರಿಗೆ ತರುವುದಕ್ಕಾಗಿ ಮೊದಲು ನಿಮ್ಮ ಖರ್ಚಿನಲ್ಲಿ ಅರ್ಧದಷ್ಟು ಖೋತಾ ಮಾಡಿದರೆ ಖಂಡಿತವಾಗಿ ಅದರಲ್ಲಿ ಅರ್ಥವಿದೆ ಎಂದು ಹೇಳುತ್ತೇನೆ. ನಿಮ್ಮ ಮಂತ್ರಿಗಳಿಂದ ಇದು ಪ್ರಾರಂಭವಾಗಬೇಕು. ಹೋದ ವರ್ಷ ಈ ಬಾಬಿಗೆ $6\frac{1}{2}$ ಲಕ್ಷ ವಿದ್ದುದನ್ನು ಈ ವರ್ಷ $7\frac{1}{2}$ ಲಕ್ಷಕ್ಕೆ ಏರಿಸಿದ್ದೀರಿ. ನಿಮ್ಮ ಖರ್ಚಿಗೆ ಬೇಕಾದ ದುಡ್ಡನ್ನು ಹೆಚ್ಚುಮಾಡಿದ್ದೀರಿ. ಇದು ಏಕೆ? ತುರ್ತುಪರಿಸ್ಥಿತಿಯ ಅರಿವು ನಿಮಗಿಲ್ಲವೇ? ಜನರಿಗೆ ಮಾತ್ರ ಇದನ್ನು ಹೇಳುತ್ತೀರಿ. ಖಂಡಿತವಾಗಿ ನಿಮ್ಮ ಖರ್ಚು ಕಡಿಮೆ ಮಾಡಿಕೊಂಡಿಲ್ಲ. ಆದರೆ ಹೆಚ್ಚು ಮಾಡಿದ್ದೀರಿ. ಇದಕ್ಕೆ ಕಾರಣ ಕೊಡಬೇಕು.

Mr. SPEAKER.—Hospitality to others and not to the Ministers. Hospitality to important guests coming from outside.

ಶ್ರೀ ಎಸ್. ಶಿವಪ್ಪ.—ನೀವು ಹೇಳುವುದು ಹೇಳಿ, ನಾವು ಮಾಡುವುದು ಮಾಡುತ್ತೇವೆ ಎಂಬ ಮನೋಭಾವ ಬಹಳ ದಿವಸ ಇರುವುದಿಲ್ಲ. ಜನತೆಯು ನಿಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದಾರೋ, ಆ ದೃಷ್ಟಿಯಿಂದ ನೀವು ಕೆಲಸ ಮಾಡಲು ಯೋಚನೆ ಮಾಡಬೇಕು. ತಾವು, ತಮಗೆ ಇಲ್ಲಿ 190 ಜನರ ಬಲವಿದೆ, ಯಾವ ರೀತಿ ಡಿಮ್ಯಾಂಡ್ ಇಟ್ಟರೂ ಪಾಸ್ ಮಾಡಿಸತಕ್ಕಂಥ ಶಕ್ತಿ ಇದೆ ಅನ್ನತಕ್ಕಂಥ ದೃಷ್ಟಿಯಿಂದ ಡಿಮ್ಯಾಂಡಿನ ಮೇಲೆ ಮಾತನಾಡುತ್ತಿದ್ದೀರಿ. ಈ ಒಂದು ಧೋರಣೆ ನೀವು ಇಟ್ಟುಕೊಳ್ಳುವವರೆಗೂ ನೀವು ಏನು ಒಂದು ಸಾಧನೆ ಮಾಡುತ್ತೇವೆಂದು ಹೊರಟ್ಟಿದ್ದಿರೋ; ಆ ಸಾಧನೆಗೆ ನಿಮ್ಮ ಧೋರಣೆ ನೆರವಾಗುವುದಿಲ್ಲ.

2-30 P. M.

General Administration ವಿಚಾರವಾಗಿ ಇನ್ನೂ ಸ್ವಲ್ಪ ವಿಚಾರಗಳನ್ನು ಸರ್ಕಾರಕ್ಕೆ ಹೇಳಬೇಕಾಗಿದೆ. ಇವತ್ತು ನಮ್ಮ ದೇಶದ ಎಲ್ಲಾ ಕಡೆಯಲ್ಲಿಯೂ ತಮ್ಮ ಅಧಿಕಾರಿಗಳು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ ಎನ್ನುವುದನ್ನು ಸರ್ಕಾರ ಕಣ್ಣುಬಿಟ್ಟು ನೋಡಬೇಕು. ಯಾವ ಕಡೆಗೇ ಹೋಗಿ. ಜಿಲ್ಲಾ ಮಟ್ಟದಲ್ಲಿಯಾಗಲೀ, ತಾಲ್ಲೂಕು ಮಟ್ಟದಲ್ಲಿಯಾಗಲಿ ನೋಡಿ, ನಿಮ್ಮ ಅಧಿಕಾರಿಗಳು ಇವತ್ತು ಕೇವಲ ಕಾಂಗ್ರೆಸ್ ಅಧಿಕಾರಿಗಳೇ ಎಂಬ ಒಂದು ಭೀತಿ ಮೂಡಿದೆ. ನಿಮ್ಮ ಟೂರ್ ಪ್ರೋಗ್ರಾಂ ಬಂದರೆ, ಕಾಂಗ್ರೆಸ್ ಆಫೀಸಿಗೆ ಹೋಗಿ ವಿಷಯ ಕೊಡತಕ್ಕಂಥ ಜಿಲ್ಲಾಧಿಕಾರಿಗಳಾಗಿದ್ದಾರೆ. ಕಾಂಗ್ರೆಸ್ ಸೆಕ್ರೆಟೆರಿಯವರೂ ಒಬ್ಬ ಅಮಲ್ದಾರರಾಗಿದ್ದಾರೆ. ನಿಜವಾಗಿಯೂ, ಇದು ಸರ್ಕಾರದ ಒಂದು ನೀತಿಯೇ. ನೀವು ಮಂತ್ರಿಗಳು ಜಿಲ್ಲೆಗೆ ಟೂರು ಹೋದಾಗ ಸ್ವಂತ ಕಾರಿನಲ್ಲಿ ಕಾಂಗ್ರೆಸ್ಸಿನ ಕೆಲಸ ಮಾಡಿ, ಬೇಡ ಅಂತ ಹೇಳುವುದಿಲ್ಲ. ಸರ್ಕಾರದ ಕಾರಿನಲ್ಲಿ ಹೋಗಿ, ಸರ್ಕಾರದ ಹಣವನ್ನು ವೆಚ್ಚಮಾಡಿ ಕಾಂಗ್ರೆಸ್ ಸಂಸ್ಥೆಯ ಕೆಲಸ ಮಾಡುವುದು ನ್ಯಾಯವೇ? ಕಾಂಗ್ರೆಸ್ ಅಧ್ಯಕ್ಷರು, ಕಾಂಗ್ರೆಸ್ ಸೆಕ್ರೆಟೆರಿ ಹೋಗಲಿ. ನಾನು ಕೇಳುವುದಿಲ್ಲ.

ಸರ್ಕಾರದ ಮಂತ್ರಿಗಳಾಗಿ, ಸರ್ಕಾರದ ಕಾರಿನಲ್ಲಿ ತಾವು ಕಾಂಗ್ರೆಸ್ ಆಫೀಸಿಗೆ ಹೋಗುವುದು, ನಿಜವಾಗಿ ಪ್ರಜಾ ಪ್ರಭುತ್ವದ ಲಕ್ಷಣವಲ್ಲಾ. ಇದು ನಿಮ್ಮಲ್ಲಿರತಕ್ಕ ಉದ್ಧಟತನ ತೋರಿಸುತ್ತದೆ; ನಮ್ಮ ಸರ್ಕಾರವಿದೆ. ನಾವು ಎಲ್ಲಿಗೇ ಬೇಕಾದರೂ ಹೋಗುತ್ತೇವೆಂದು ಉಡಾಫೆ ಮಾಡಬೇಡಿ. ಇದರಿಂದ ದೇಶದಲ್ಲಿ ಖಂಡಿತವಾಗಿಯೂ ಬಹಳ ಕೆಟ್ಟ ಪರಿಣಾಮ ಉಂಟುಮಾಡುತ್ತದೆ—ನೀವು ಹೋದಾಗ ನಿಮ್ಮ ಕಾರಿನಲ್ಲಿ ಕಾಂಗ್ರೆಸ್ ಸೆಕ್ರೆಟರಿಯೂ ಕೂತುಕೊಂಡು ಮೆರವಣಿಗೆ ಮಾಡಿಕೊಂಡು ಬಿಡುತ್ತಾರೆ. ಸಭಾಪತಿಗಳೆ, ಇದು ದೇಶದಲ್ಲಿರತಕ್ಕ ಅಧಿಕಾರಿಗಳ ಮೇಲೆ ಎಂತಹ ಪ್ರಭಾವ ಉಂಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಮಂತ್ರಿಗಳು ಟೂರು ಬಂದಾಗ ಕಾಂಗ್ರೆಸ್ ಆಫೀಸಿಗೆ ಹೋಗಿಬಿಟ್ಟು, ಕಾಂಗ್ರೆಸ್ ಸೆಕ್ರೆಟರಿಗಳ ಜೊತೆ ಓಡಾಡಿಬಿಡುವುದರಿಂದ, ಅವರು ನಿಮ್ಮ ಹತ್ತಿರ ಹೇಳಿಬಿಟ್ಟಿದ್ದಾರೇ ಎಂದು ಅಧಿಕಾರಿಗಳು ಕಾಂಗ್ರೆಸ್ ಸೆಕ್ರೆಟರಿ ಕಂಡರೆ ಭಯದಿಂದ ನಡೆಗುತ್ತಾರೆ. ಶ್ರೀಮಾನ್ ಕೃಷ್ಣಪ್ಪನವರು ಬಂದಾಗ ಅವರ ಹತ್ತಿರ ಕಾಂಗ್ರೆಸ್ಸಿನವರು ಅಧಿಕಾರಿಗಳ ಮೇಲೆ ಏನು ಚಾಡಿ ಹೇಳಿದ್ದಾರೋ, ಹೇಳುತ್ತಾರೋ ಎಂಬ ಭಯ.

(Sri N. Hutchmasthi Gowda rose)

ಇವತ್ತಿನ ದಿವಸ ಶ್ರೀ ಹುಚ್ಚಮಾಸ್ತಿಗೌಡರೂ ಪ್ರಜಾಪಭುತ್ವವಾದಿಗಳು, ಅವರದ್ದೇ ಸರ್ಕಾರ ಸದಾಕಾಲದಲ್ಲಿಯೂ ಇರುತ್ತದೆ ಎಂಬ ಭಾವನೆ ಇರಕೂಡದು. ಇದು change of cycle ಸರ್ಕಾರ ಬದಲಾವಣೆಯಾಗಿ, ನಾನು ಅಲ್ಲಿಗೆ ಕೂಡ, ನನಗೂ ನಿಮ್ಮ ಹಾಗೆ ಮಾಡುವ ಎದೆಗಾರಿ ಹತ್ತಿದರೆ, ಪ್ರಜಾಪ್ರಭುತ್ವ ನಡೆಯುವುದಿಲ್ಲ. ನಿಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಿ; ಯಾವ ತಾಲ್ಲೂಕಿಗೆ, ಯಾವ ಜಿಲ್ಲೆಗೆ ಹೋದರೂ ನಿಮ್ಮ ವಿಚಾರದಲ್ಲೇ ತಮ್ಮ ಪ್ರಭಾವವನ್ನು ಅಧಿಕಾರಿಗಳ ಮೇಲೆ ಬೀರುವುದಕ್ಕೋಸ್ಕರ ಮಂತ್ರಿಗಳು ತಮ್ಮ ಪ್ರವಾಸವನ್ನು ಉಪಯೋಗಿಸುತ್ತಾರೆಂದು ಜನಗಳು ಹೇಳುತ್ತಾರೆ: ಮಂತ್ರಿಗಳಿಗೆ ಅದು ಗೊತ್ತಿದೆಯೋ ಇಲ್ಲವೋ, ಗೊತ್ತಿಲ್ಲ. ಹೀಗೆ ಮಾಡಿದರೆ ನಿಮ್ಮ ಹಿಂಬಾಲಕರು ಅಧಿಕಾರಿಗಳ ಮೇಲೆ, ಪ್ರಭಾವ ಬೀರುತ್ತಾರೆ. ಅವಕಾಶವನ್ನು ದುರುಪಯೋಗ ಮಾಡುತ್ತಿರುತ್ತಾರೆ ಎನ್ನುವುದನ್ನು ಯೋಚನೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ನಮ್ಮ ದೇಶದ ಅಧಿಕಾರಿಗಳು ಯಾವ ಒಂದು ಪಕ್ಷದ ಪ್ರಭಾವಕ್ಕೆ ಒಳಗಾಗಿರ ಕೂಡದು. ಸರ್ಕಾರದ ಕೆಲಸ ದೇವರ ಕೆಲಸ ಎಂದು ಏನು ಶ್ರೀ ಹನುಮಂತಯ್ಯನವರು ವಿಧಾನಸೌಧದ ಮುಂದೆ ಬರೆಸಿದ್ದರೋ, ಯಾವುದನ್ನು ನೀವು ಅಳಿಸಿ ಹಾಕಿ ಬಿಟ್ಟರೋ, ಆ ನುಡಿಯಂತೆ ನಿಜವಾಗಿ ಸರ್ಕಾರದ ಕೆಲಸ ಮಾಡತಕ್ಕಂಥ ಕಾಲದಲ್ಲಿ, ಅಧಿಕಾರಿಗಳು ನಿಷ್ಪಕ್ಷಪಾತವಾಗಿರಬೇಕು. ನಿಮ್ಮ ಪಕ್ಷದವರು ಹೇಳಿದಹಾಗೆ ಕೆಲಸ ಮಾಡಬೇಕೆಂಬ ಭಾವನೆ ಅವರಲ್ಲಿ ಮೂಡಿಸಬಾರದು. ಮೈಸೂರು ದೇಶದಲ್ಲಿ 2 ಕೋಟಿ 40 ಲಕ್ಷ ಎಲ್ಲರಿಗೂ ಒಂದೇ ಸಮನಾದ ಸಮಯವಿರಬೇಕು. ಅವತ್ತಿನ ದಿವಸ ನೀವು ಮಂತ್ರಿಗಳು ಎಂದು ಹೇಳಿಕೊಳ್ಳುವ ಹೆಸರು ಲಾಯಕ್ ಆಗುತ್ತದೆ. ಖಂಡಿತವಾಗಿಯೂ ಮಂತ್ರಿಗಳಾಗುವುದಕ್ಕೆ ನೀವು ಲಾಯಕ್ಕಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ದೇಶದಲ್ಲಿ ಎಷ್ಟರಮಟ್ಟಿಗೆ ಸಾಮಾನ್ಯ ಆಡಳಿತ ಕುಸಿದು ಬೀಳುತ್ತಿದೆ, ನೋಡಿ.

Sri B. D. JATTI.—May I request the Chair, what is the Demand No. and what is the cut motion on which the Hon'ble Member, the Leader of the Opposition is speaking? I do not follow.

ಶ್ರೀ ಎಸ್. ಶಿವಪ್ಪ.—ಇಲ್ಲಿರತಕ್ಕಂಥ ಕಟ್‌ಮೋಷನ್ಸ್‌ನಲ್ಲಿ, ಡಿಮ್ಯಾಂಡಿನಲ್ಲಿ ಎಲ್ಲವೂ ಕೂಡ ಅಡಕವಾಗಿದೆ: ನಿಮ್ಮ ಆಡಳಿತ ಬಿಗಿ ಇಲ್ಲದೆ ಕುಸಿದುಬೀಳುತ್ತಿದೆ. ಅಡ್ಮಿನಿಸ್ಟ್ರೇಷನ್ ಬಿಗಿಯಾಗಿರಬೇಕಾದರೆ, ನಿಮ್ಮಲ್ಲಿ ಬಿಗಿ ಇರಬೇಕು. ನಿಮ್ಮಲ್ಲಿ ಬಿಗಿ ಇಲ್ಲದೆ ನಾವು ಈ 2-4 ಕೋಟಿ ರೂಪಾಯಿ ಕೊಟ್ಟರೆ ಏನು ಪ್ರಯೋಜನ? ರೆವಿನ್ಯೂ ಮಂತ್ರಿ ಶ್ರೀ ಕೃಷ್ಣಪ್ಪನವರು ಬಿಗಿಯಾಗಿ ಇಲ್ಲದೆಹೋದರೆ, ಇನ್ನು 20 ವರ್ಷವಾದರೂ ಕೂಡ ಅವರ ಉದ್ದೇಶ ಎಲ್ಲಿ ಸಾಧನೆಯಾಗುತ್ತದೆ?

Mr. SPEAKER.—The Hon'ble Member has taken half an hour. On Revenue Demand, I will give a special chance to speak.

ಶ್ರೀ ಎಸ್. ಶಿವಪ್ಪ.—ಇದರಲ್ಲಿರತಕ್ಕಂಥ ಬಹುತೇಕವಾದ ಹಣ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು. ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು ರೆವಿನ್ಯೂ ಇಲಾಖೆಯಲ್ಲಿದ್ದಾರೆ. ರೆವಿನ್ಯೂ ಮಂತ್ರಿಗಳ ಶಾಖೆಯ ಮೇಲೆ ಬಹಳ ಅಪಪ್ರಚಾರ

(ಶ್ರೀ ಎಸ್. ಶಿವಪ್ಪ)

ನಡೆಯುತ್ತಿದೆ. ಅವರ ಮುಖದ ಮುಂದೆಯೇ ಹೇಳುತ್ತೇನೆ. ಕೃಷ್ಣಪ್ಪನವರ ಮೇಲೆ ಅಲ್ಲ, ರೆವಿನ್ಯೂ ಇಲಾಖೆ ಮೇಲೆ ಅನೇಕ ಸದಸ್ಯರು ವರ್ಷೇ ವರ್ಷೆ ಚರ್ಚೆಯಲ್ಲಿ ರೆವಿನ್ಯೂ ಇಲಾಖೆ ಅಧಿಕಾರಿಗಳಮೇಲೆ ಅಪಾದನೆಗಳನ್ನು ಮಾಡುತ್ತಿದ್ದಾರೆ. ಈ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಭೂಮಿ ಹಂಚುವುದರಲ್ಲಿ ಮತ್ತು ಇನ್ನಿತರ ವಿಚಾರಗಳಲ್ಲಿ, ಕಾಂಗ್ರೆಸ್ಸಿನವರ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನವರು ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಕಾಂಗ್ರೆಸ್ಸಿನ ಪರವಾಗಿ ಬಹಿರಂಗವಾಗಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ರೆವಿನ್ಯೂ ಮಂತ್ರಿಗಳು ಇದನ್ನು ತಡೆಗಟ್ಟದಿದ್ದರೆ, ದೇಶಕ್ಕೆ ದೊಡ್ಡ ಅನ್ಯಾಯವಾಗುತ್ತದೆ. ಶ್ರೀ ಕೃಷ್ಣಪ್ಪನವರು ಯುವಕರು, ದೆಹಲಿಯಿಂದ ಬಂದಿದ್ದಾರೆ, ಹುರುಪಿನಿಂದ ಕೂಡಿದ್ದಾರೆ. ನಾನು ಅವರ ಹತ್ತಿರ ಬಂದರೂ ನನ್ನ ದಾಕ್ಷಿಣ್ಯಕ್ಕೆ ಒಳಗಾಗಬೇಕಾಗಿಲ್ಲ. ನನಗೂ ಬರಬೇಡಿ ಅಂತ ಹೇಳಲಿ. I will search my own heart and I will not come to you again. ದಯೆಯಿಟ್ಟು ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತವಾಗಿ ಅಧಿಕಾರಿಗಳಿಂದ ಕೆಲಸ ನಡೆಯುವಂತೆ ಮಾಡಬೇಕು ಎಂದು ಶ್ರೀ ಕೃಷ್ಣಪ್ಪನವರಿಗೆ ಹೇಳುತ್ತೇನೆ. ಈ ರೆವಿನ್ಯೂ ಮಂತ್ರಿಗಳ ಕಾಲದಲ್ಲಿ ಬಹಳ ಕೆಲಸವಾಗಬೇಕು. ಅವರಿಗೆ ಪ್ರೀತಿಯಿಂದ ಹೇಳುತ್ತೇನೆ. ರೆವಿನ್ಯೂ ಇಲಾಖೆಯ ಆಡಳಿತದ ವಿಚಾರ ಎಲ್ಲಿ ಹೋದರೂ ಬೀದಿ ಬೀದಿ ಮಾತು ಆಗಿದೆ. ಮೈಸೂರು ದೇಶದ ಹಿತ ಅವರಿಗೆಷ್ಟು ಇದೆಯೋ, ನಮಗೂ ಅಷ್ಟೇ ಇದೆ. ಒಂದು ದೇಶದ ಉದ್ದೇಶ ಸಾಧನೆಯಾಗಬೇಕಾದರೆ, ನಮ್ಮ ಅಧಿಕಾರಿಗಳು ನಿಷ್ಪಕ್ಷಪಾತ ದೃಷ್ಟಿಯಿಂದ ಕೆಲಸ ಮಾಡತಕ್ಕ ಅವಕಾಶಗಳನ್ನು ಕಲ್ಪಿಸಿಕೊಡಬೇಕು ; ಕಲ್ಪಿಸಿಕೊಡದೆ ಹೋದರೆ ನೀವು ಎಷ್ಟೋ ಕಡೆ ಕೊಟ್ಟಿರತಕ್ಕ ಮಾತು ಸಫಲವಾಗುವುದಿಲ್ಲ. ಈ ದೃಷ್ಟಿಯಿಂದ ನಿಷ್ಪಕ್ಷಪಾತ ಆಡಳಿತ ನೆಲಸುವಂತೆ ಮಾಡಬೇಕು.

ಸಭಾಧ್ಯಕ್ಷರಿಗೆ ವಂದನೆ ಅರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—May I know what time will be required by the Hon'ble Ministers ? How many Ministers are replying ? One is the Chief Minister and the other is the Minister for Law. The Chief Minister is not there, but the Finance Minister will do.

Sri M. V. RAMA RAO (Minister for Law).—I do not propose to take more than half an hour.

Sri B. D. JATTI.—I want 45 minutes.

Mr. SPEAKER.—Are there many who want to participate ? Should I apportion time and fix a time limit of 10 or 15 minutes for a speech ? For those that have participated more than once, if it is possible and if time is left over, I will give time.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ ಅಧ್ಯಕ್ಷರೆ..........

Sri SANJEEVANATH IKALA (Suratkal).—The Ruling Party Members have not sent cut-motions. They have to send cut-motions;

Mr. SPEAKER.—Does the member want them to send cut-motion and am I to compel them ?

Sri SANJEEVANATH IKALA.—They have not sent the cut-motions.

Does he want me to compel them ? All right.—

Mr. SPEAKER.—I will think over.

ಶ್ರೀ ವಿ. ಎಂ. ದೇವ್.—ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯದ ಮೇಲೆ ತಮ್ಮ ಮೂಲಕ ಸ್ವಲ್ಪ ರಚನಾತ್ಮಕ ಸಲಹೆ ಕೊಡಬೇಕೆಂದು ಬಯಸುತ್ತೇನೆ, ನೋಡಿ ಮೊದಲನೆಯದಾಗಿ, ಇಲ್ಲಿ ಆಗುತ್ತಾ ಇರುವ ಕೆಲಸ ಸರಿಯಾಗಿ ನಡೆಯುತ್ತಾ ಇದೆಯೋ ? ಒಟ್ಟಿನಲ್ಲಿ ಲೆಜಿಸ್ಲೇಚರಿಗೆ ವರ್ಷೆ ವರ್ಷೆ ಖರ್ಚು ಮಾಡುತ್ತಾ ಇರುವುದು 25 ಲಕ್ಷ ರೂಪಾಯಿ ; ಅದರಲ್ಲಿ ಸುಮಾರು 5 ಲಕ್ಷ ರೂಪಾಯಿ ಪಾರ್ಲಿಮೆಂಟ್ ಎಲೆಕ್ಷನ್ಸ್, ಅದಕ್ಕೆ ಇದಕ್ಕೆ ಹೋಗುತ್ತದೆ ; ಮಿಕ್ಕದ್ದು 20 ಲಕ್ಷ ರೂಪಾಯಿನಲ್ಲಿ ಲೆಜಸ್ಲೇ

ಚರು ಸ್ವ್ಯಾಫಿಗೆ, ತಮಗೆ, ನಮಗೆ ಸಂಬಳ ಬರುತ್ತದೆ. ಬಿಸಿನೆಸ್ ಸರಿಯಾಗಿ conduct ಆಗು ತ್ತಿದೆಯೋ, ಇಲ್ಲವೇ.......... ...

Mr. SPEAKER.—I have disallowed the cut-motions with regard to the Legislature Secretariat. My friends will bear me out and I tell the Hon'ble Member that the cut-motions relating to the Secretariat are not moved by convention.

Sri C. J. MUCKANNAPPA.—If there is anything left, what is the way out for a Member to bring it to your notice?

Mr. SPEAKER.—When a contingency arises, I will deal with it. The Hon'ble Member has never come and told me. Please come and tell me when there is a contingency. Parliamentary convention is for all Parliaments.

Sri C. J. MUCKANNAPPA.—If there is any contingency, what is to be done?

Mr. SPEAKER.—The Speaker is there and if he does not heed, throw him out.

† ಶ್ರೀ ವಿ. ಎಂ. ದೇವ್.—ನಾನು ಹೇಳುವುದು ಇಷ್ಟೆ ಸ್ವಾಮಿ. ಈವಾಗ ಇಲ್ಲಿ ಮಂತ್ರಿಗಳು ಕೂತುಕೊಂಡು ಇದ್ದಾರೆ; ಅವರು ರಾಜ್ಯಭಾರ ಮಾಡಿಕೊಂಡು ಹೋಗಬೇಕಾಗಿದೆ. ಹಿಂದೆ ಇವರು ಇರಲಿಲ್ಲ; ಕಾಲಕ್ರಮದಲ್ಲಿ ಯಾವುದೋ ಒಂದು set-up ಆಯಿತು, ಇಲ್ಲಿಗೆ ಬಂದಿದ್ದಾರೆ. ಈಗ ಮೂಲ ಪ್ರಶ್ನೆಗೆ ಹೋಗಬೇಕಾಗುತ್ತದೆ: ಇಲ್ಲಿಗೆ ಏಕೆ ಬಂದೆವು? ಏಕೆ ಬಂದೆವು ಎಂದರೆ ಒಬ್ಬ ಮನುಷ್ಯನ ಬುದ್ಧಿಗಿಂತ ಸಾಮೂಹಿಕ ಬುದ್ಧಿವಂತಿಕೆ ಉಪಯೋಗಿಸಿ ದೇಶಕ್ಕೆ ಒಳ್ಳೆಯದು ಮಾಡ ಬೇಕೆಂದು. ಹೀಗೆ ಒಳ್ಳೆಯದು ಆಗಬೇಕಾದರೆ ನಿಜವಾಗಿ ನಮ್ಮ ಸಭಾಧ್ಯಕ್ಷರ ಕೆಲಸ ಏನು ಅಂತ ನೋಡಬೇಕು; ನಾವು ತೆಗೆದುಕೊಳ್ಳುತ್ತಾ ಇರುವ ಸಂಬಳ, ಅವರು ತೆಗೆದುಕೊಳ್ಳುತ್ತಾ ಇರುವ ಸಂಬಳ ಇದಕ್ಕೆ ನಿಜವಾಗಿಯೂ ಪ್ರತಿಫಲ ಬಂತೇ ಇಲ್ಲವೇ ಎಂಬುದು ಮುಖ್ಯವಾದ ಪ್ರಶ್ನೆ ಎಂದು ಹೇಳಿ ಈ ಐಟಂನ್ನು ನೋಡುತ್ತೇನೆ. ಒಟ್ಟಿನಲ್ಲಿ ಸಾಮೂಹಿಕ ಬುದ್ಧಿವಂತಿಕೆ ಹೇಗೆ ಕೂಡಿಸುವುದು ಎಂಬುದು ಮುಖ್ಯವಾದ ಪ್ರಶ್ನೆ. ನಾವು ಒಂದು ಕೆಲಸ ಮಾಡಬಹುದು ಏನೆಂದರೆ, ಸಭಾಧ್ಯಕ್ಷರು ಅಲ್ಲಿಂದ ಆಟೋಮ್ಯಾಟಿಕ್ ಆಗಿ ಟರ್ ಅಂತ ಅನ್ನಿಸಿ ಮಾತನಾಡಿ ಅಥವಾ ಕುಳಿತುಕೊಳ್ಳಿ ಎಂದು ಸೂಚಿಸಬಹುದು. ಅದು ಒಂದು ತರಹ, ಆಗ ಏನಾಗುತ್ತದೆ ಎಂದರೆ, ನಿಜವಾಗಿಯೂ ನಮ್ಮ ಸಭಾಧ್ಯಕ್ಷರು ಅಲ್ಲಿರುವುದೇ ಬೇಕಾಗುವುದಿಲ್ಲ. ಅವರಿಗೆ ಸಂಬಳ ಸಾರಿಗೆ ಕೊಡುವುದು ದಂಡ ವಾಗುತ್ತದೆ.

Mr. SPEAKER.—The Hon'ble Member is reading on very bad ground.

Sri V. M. DEO.—I am going to the grass root of the matter. I want to tell the chair in the way the chair will appreciate.

Mr. SPEAKER.—He is not only going to the root, but to the grass root. Please do not do that.

Sri V. M. DEO.—We shall agree to differ.

ಈಗ ಏನಾಗಿದೆ ಎಂದರೆ ನಮ್ಮ ಸಭಾಧ್ಯಕ್ಷರು ಅವರ ಕೆಲಸ ಬಹಳ ಸುಲಭ ಮಾಡಿಕೊಂಡಿ ದ್ದಾರೆ. 15 ನಿಮಿಷ, 10 ನಿಮಿಷ ಅಂತ ಟೈಂ ಲಿಮಿಟ್ ಹಾಕಿದ್ದಾರೆ. ಒಳ್ಳೆಯದು. ಇದರಿಂದ ಏನಾಗುತ್ತದೆ? ಸಾಮೂಹಿಕ ಬುದ್ಧಿವಂತಿಕೆ ಉಪಯೋಗಿಸಿಕೊಂಡು ಹೊಸ ಹೊಸ ಐಡಿಯಾಸ್ ಬರಬೇಕು. Various phases, ಬೇರೆ ಬೇರೆ problems ಯಾವುದೂ ನಾವು ಹೇಳದೇ ಇದ್ದರೂ ಕೂಡ ಇಂಟಲಿಜೆಂಟ್ questions ಹಾಕಿ ಅದನ್ನು ಹೇಳುವಂತೆ ಮಾಡಬೇಕು. ಈ ಒಂದು ಪ್ರಶ್ನೆ ಬಹುಮುಖವಾಗಿ ತೋರುತ್ತದೆ.

ಅಧ್ಯಕ್ಷರು.— ಅಧ್ಯಕ್ಷರಿಗೆ ಅಸಾಧ್ಯವಾದರೆ ಏನು ಮಾಡಬೇಕು ?

ಶ್ರೀ ವಿ. ಎಂ. ದೇವ್.—ಕಷ್ಟ ಎಂದು ಒಪ್ಪಿಕೊಳ್ಳುತ್ತೇನೆ. ನನಗೆ ತಿಳಿದಮಟ್ಟಿಗೆ ತಾವು ವಿದ್ಯಾವಂತರು, ಬುದ್ಧಿವಂತರು. ಆದರೂ ಸೋಮಾರಿತನ ಏನಾದರೂ ಬಂದಿದೆಯೋ ಏನೋ ನನಗೆ ಚನ್ನಾಗಿ ಗೊತ್ತಿಲ್ಲ (ಸಭೆಯಲ್ಲಿ ನಗು!) ಅಂಥಾದ್ದು ಏನೂ ಆಗದೇ ಇದ್ದರೆ ಸರಿ.

Mr. SPEAKER.—I cannot allow this kind of debate. It is not fair to the Hon'ble Member or to the House. If I had doubted his *bona fides*, I would have dealt with him in some other manner. Kindly proceed to the next point.

ಶ್ರೀ ವಿ. ಎಂ. ದೇವ್.—ನಾನು ಹೇಳುವುದು ಏನೆಂದರೆ ಇದನ್ನು ನಾನು ತಮಾಷೆಗೆ ಹೇಳುತ್ತಾ ಇಲ್ಲ. ಇದು ಬಹಳ ಗುರುತರವಾದ ಕೆಲಸ. ಸಾಮೂಹಿಕ ಬುದ್ಧಿವಂತಿಕೆಯಿಂದ ಮಾಡಬೇಕಾದರೆ ನಾವು ಒಬ್ಬರನ್ನು ಒಬ್ಬರು ಪ್ರತಿಬಿಂಬಿಸುತ್ತೇವೆ. ನಿಜ, ಏಕೆಂದರೆ ಪ್ರತಿಯೊಬ್ಬ ಮನುಷ್ಯನಲ್ಲೂ ರಾಗ, ದ್ವೇಷ ಇರುತ್ತದೆ. Ultimately, I feel this Legislature's job is one of realistically enriching human thought so that it will lead to good legislation. ಅದು ಏನಾದರೂ ಆಗಬೇಕಾದರೆ ತಮ್ಮ. ನಮ್ಮ ಇಬ್ಬರ ಜವಾಬ್ದಾರಿಯೂ ಇದೆ. ನನಗೆ ಚೆನ್ನಾಗಿ ಗೊತ್ತಿದೆ, ತಮ್ಮನ್ನು ಚೆನ್ನಾಗಿ ಬಲ್ಲೆ, you can take me more seriously. When you really apply your mind, you can do it well. ಇದನ್ನೆಲ್ಲಾ ನನಗೆ ಜಾಸ್ತಿ ಟೈಂಕೊಡಿ ಎಂದು ಹೇಳುವುದಕ್ಕೆ ಹೇಳುತ್ತೇನೆ ಎಂದು ತಿಳಿದುಕೊಳ್ಳಬೇಡಿ (ನಗು!) ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದೆ ಅಷ್ಟೆ. ತಾತ್ವಿಕವಾಗಿ ನೋಡಿದರೂಕೂಡ ಆ point conceed ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಹಾಗೆ ಮಾಡುವಾಗ ಬರಬರುತ್ತಾ ಏನಾಗುತ್ತದೆ? ನಾವು ಶಿಲ್ಪಿ ಇದ್ದಹಾಗೆ ಕೆಲವು ಜನ ಇರಬಹುದು. ತಾವು ಶಿಲೆ ಇದ್ದಹಾಗೆ ಅದರಲ್ಲೂ excellent-jode stone, (laughter!)

ಶ್ರೀ ಬಿ. ಡಿ. ಜತ್ತಿ.—ಶಿಲ್ಪಿ ಇದ್ದಹಾಗೆ ಇದ್ದೇವೆ ಎಂದು ಹೇಳುತ್ತೀರಿ. ನೀವು ಏನು ಮಾಡಬಹುದು?

ಶ್ರೀ ವಿ. ಎಂ. ದೇವ್.—ಒಳ್ಳೆಯ ಕೆತ್ತನೆ ವಿಗ್ರಹ ಮಾಡಬಹುದು.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಅಧ್ಯಕ್ಷರು ಶಿಲೆ ನಾವು ಶಿಲ್ಪಿಗಳು ಎಂದು ಹೇಳಿದಿರಿ. ನಾವು ಶಿಲೆ, ಅವರು ಶಿಲ್ಪಿ ಎಂದು ಹೇಳಿ!

ಶ್ರೀ ವಿ. ಎಂ. ದೇವ್.— ಗೋಪಾಲಗೌಡರಿಗೆ ಕೇಳಿಕೊಳ್ಳುವುದು ಇಷ್ಟೆ. ನಿಮ್ಮ ಅಭಿಪ್ರಾಯ ಏನಾದರೂ ಇರಲಿ, ನಾನು ಏನು ಹೇಳುತ್ತೇನೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಡಿ. ಹೆಚ್ಚು ಕಡಿಮೆ ಇದು ಒಬ್ಬರಿಗೆ ಅನ್ವಯಿಸುತ್ತದೆ ಎಂದು ಕಾಣುತ್ತದೆ. ದಿನ ದಿನಕ್ಕೆ ಬರಬರುತ್ತಾ ಅಧ್ಯಕ್ಷರು ಯಾರು ಆಗಿರಬೇಕು ಎಂಬ ಪ್ರಶ್ನೆ ಬರುತ್ತದೆ. ಈಗ ಇರುವವರು. He is a good reader of human nature and trained amongst of character. ಇದು ಬರಬೇಕಾದರೆ ನಮ್ಮನ್ನು ಚೆನ್ನಾಗಿ ಅರ್ಥಮಾಡಿಕೊಂಡು ಇರಬೇಕು, ನಡವಳಿಕೆ ಗೊತ್ತಿರಬೇಕು. prepare ಆಗಿ ಬರುತ್ತಾನೆಯೇ, ಸುಮ್ಮನೆ ಮಾತನಾಡಿ, ಹೊತ್ತು ಹೋಗುವುದಕ್ಕೆ ಮಾತನಾಡುತ್ತಾನೆಯೇ, ಎಂಬುದನ್ನು ತಿಳಿದುಕೊಳ್ಳ ಬೇಕಾದರೆ........

Mr. SPEAKER.—I have got the highest respect for the Hon'ble Member. That is why I am giving him so many chances.

ಶ್ರೀ ವಿ. ಎಂ. ದೇವ್.—ನೀವು ನಮ್ಮನ್ನು ಕರೆದಾಗ ನಮಗೆ ಒಂದು ಕರ್ತವ್ಯ ಇದೆ. ಏನೆಂದರೆ ನಿಮ್ಮ ಜೊತೆ ಮಾತನಾಡುವಾಗ ನಮಗೆ ಒಂದು ರೀತಿಯ ಜ್ಞಾನ ಬರುವ ಹಾಗೆ ಆಗಬೇಕು, ನಿಮ್ಮ ಡ್ಯೂಟಿ ವಿಚಾರ, ನಮ್ಮ ವಿಚಾರ, ನಮ್ಮ ಕಷ್ಟ, ನಿಮ್ಮ ಕಷ್ಟ ಎಲ್ಲವನ್ನು .....

Mr. SPEAKER.—If he wants to give any good advice, I will receive it. But do not give it in the presence of others. It is a matter between him and me.

Sri V. M. DEO.—You are beginning to lose temper.

Mr. SPEAKER.—Some people tell me that I have no temper to lose. My difficulty is that I am too soft. That is what others say, I do not feel like that. Please come to the budget proper.

Sri V. M. DEO.—I only want to say that the Minister for Health has not done his job.

For aged people they require some treatment so that they may not lose their temper. Do not mistake me as funny. I am saying that is what the latest modern medicine say and it will do good for both of us.

The other aspect is—the Speaker is getting a sumptuary allowance of Rs. 5,000/-. Whether that is made good use of or not ;

Mr. SPEAKER.—I do not know how many times I have to tell the Hon'ble Member.

Sri V. M. DEO.—It is a new idea you are not grasping it. You are treat ng it as a joke, whereas it is not a joke.

Mr. SPEAKER.—Why should the Hon'ble Member feel like that ? I am most serious.

Sri V. M. DEO.—One thing is, when you invite people to tea and spend money out of sumptuary allowance, the Speaker must be a good conversationalist and see that good conversation is carried on properly. Otherwise Rs. 5000 is a loss. ಆದರೆ ಏನಾಗುತ್ತದೆ ಎಂದರೆ ಅಲ್ಲಿಗೆ ಬಂದಾಗ ನಿಮ್ಮನ್ನು ನೋಡಿದರೆ ಸಂತೋಷವಾಗುತ್ತದೆ. ಸ್ನೇಹಿತರೆಲ್ಲಾ ಸೇರಿ ತಿಂಡಿ ತಿಂದು ಒಂದು ಮಾತು ಆಡದೇ ಆಚೆಗೆ ಬರುತ್ತೇವೆ ಯಲ್ಲಾ, ಆ 5,000 ರೂಪಾಯಿ ನಷ್ಟವಾಗುತ್ತದೆಯಲ್ಲವೇ ? (ನಗು !) ಇದರಲ್ಲಿ ಒಂದು ಸ್ವಲ್ಪ ಸಂಸ್ಕೃತಿಯ ಪ್ರಶ್ನೆ ಇದೆ.

ಇನ್ನೊಂದು ವಿಚಾರವೇನೆಂದರೆ-ಮೈಸೂರು ಸರ್ಕಾರದ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಕೆಲವು ಮಹತ್ವದ ವಿಚಾರಗಳನ್ನು ಎಕಾನಮಿ ಅಂಡ್ ರಿಸೋರ್ಸ್ ಕಮಿಟಿಯ ವರದಿಯಲ್ಲಿ ಹೇಳಿರುವುದ ರಿಂದ ಆ ಪುಸ್ತಕ ಬಹಳ ಮಹತ್ವ ಉಳ್ಳದ್ದೆಂದು ನನಗೆ ಅನಿಸುತ್ತದೆ. ಇಲ್ಲಿ 14ನೆಯ ಪುಟದಲ್ಲಿ ಓದಿದರೆ ಇಂಡಿಯಾ ಸರ್ಕಾರದವರು ಅಲ್ಲಿ ಹೀಗೆ ಈ ಪಂಚವಾರ್ಷಿಕ ಯೋಜನೆಗಳನ್ನು ತಂದು ತನ್ಮೂಲಕ ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಪ್ ಸೊಸೈಟಿಯನ್ನು ತರುತ್ತೇವೆಂದು ಕೆಲಸ ಮಾಡುತ್ತಿದ್ದಾರೆ, ಇಲ್ಲಿ ರಾಜ್ಯ ಸರ್ಕಾರದವರೇನು ಮಾಡುತ್ತಿದ್ದಾರೆ ಎಂಬುದರ ಮೂಲತತ್ವಕ್ಕೆ ನಾನೀಗ ಹೋಗುತ್ತಿದ್ದೇನೆ. ಮನುಷ್ಯನ ಕೃತ್ಯಗಳೆಲ್ಲಕ್ಕೂ ಮೂಲ ಅವನ ಭಾವನಾ ತರಂಗಗಳು. ಆದುದರಿಂದ ಮನುಷ್ಯನ ಭಾವನಾ ತರಂಗಗಳು ಯಾವರೀತಿ ಇದ್ದರೆ ಅವನು ಅವುಗಳ ಪಾತ್ರಕ್ಕೆ ಅನ್ವಯಿಸಿ ಒಳ್ಳೆಯ ಭಾವನೆಗಳಿದ್ದರೆ ಒಳ್ಳೆಯದನ್ನು ಮಾಡುತ್ತಾನೆ, ಕೆಟ್ಟ ಭಾವನಾ ತರಂಗ ಗಳಿದ್ದರೆ ಅವನು ಕೆಟ್ಟದ್ದನ್ನೇ ಮಾಡುತ್ತಾನೆ. ಹೀಗೆ ನಮ್ಮ ಮಂತ್ರಿ ಮಂಡಲದಲ್ಲೂ ಒಬ್ಬ ಹಣವನ್ನು ಹೊಡೆದುಕೊಂಡು ಹೋಗಿರಬಹುದು, ಇನ್ನೊಬ್ಬ ಹಾಗೆ ಮಾಡದೆ ಇರಬಹುದು. ಆದರೆ ನಾನೀಗ ಈ ವಿಚಾರಕ್ಕೆ ಹೋಗುವುದಿಲ್ಲ. ಈ ಎಕಾನಮಿ ಅಂಡ್ ರಿಸೋರ್ಸ್ ಸಮಿತಿಯವರ ವರದಿಯಲ್ಲಿ 2ನೇ ಪ್ಯಾರಾದಲ್ಲಿ 7ನೆಯ ಐಟಂನಲ್ಲಿ ಹೀಗೆ ಹೇಳಿದೆ.

> " ...the objectives set out in the National plans appear to be large and too ambitious, they are so, only in relation to the past but not to the present needs or capacity of the nation for achievement ".

ಆದರೆ ಅವರು ಆ ಯೋಜನೆಗಳ ಬಗ್ಗೆ ಇರತಕ್ಕ ಅಪೋಸಿಟ್‌ವ್ಯೂವುಗಳನ್ನೂ ಅಲ್ಲಿ ಕೊಟ್ಟು ಅವರು ಪೂರಾ ಕನ್‌ಫ್ಯೂಜನ್ ಮಾಡಿಕೊಂಡಿದ್ದಾರೆ. ಆದರೆ ಅವರು ಈ ಟ್ಯಾಕ್ಸಿನ ಸ್ವರೂಪ ವೇನೆಂಬುದನ್ನೇ ಸರಿಯಾಗಿ ತಿಳಿದುಕೊಂಡಿಲ್ಲ. ಯಾರು ಸತ್ಯವಂತರೋ ಅವರು ಸರಿಯಾಗಿ ಟ್ಯಾಕ್ಸ್ ಕೊಡುತ್ತಾರೆ. ಮೋಸಗಾರರು ಟ್ಯಾಕ್ಸನ್ನು ಸರಿಯಾಗಿ ಕೊಡುವುದಿಲ್ಲ. ಹೀಗೆ ಈ ಸಮಿತಿಯ ವರದಿಯಲ್ಲಿ ಬಹಳ ಪ್ರಾಮಾಣ್ಯವಾದ ವಿಚಾರಗಳಿವೆ. ಆದರೆ ಅವರು ಸರಿಯಾಗಿ ಅರ್ಥಮಾಡಿ ಕೊಂಡಿಲ್ಲ ಆದಾಗ್ಯೂ ಈ ಲಿಟ್ರೇಚರೇನೋ ಬಹಳ ದಪ್ಪನಾಗಿ ಸುಂದರವಾಗಿ ಚೆನ್ನಾಗಿದೆ. ಆದರೆ ಇದರ ಮೂಲಭೂತ ಅಂಶಗಳಲ್ಲಿ ಬಹಳ ಡಿಫೆಕ್ಟುಗಳಿವೆ. ಮುಂದೆ ಹೋಗುತ್ತಾ 15ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ :—

> " a system of precise indices to indicate progress one measure successes or failures." He goes on to make a series of observation as follows :—" the people including the members of the Parliament are not in a position to know with any degree of accuracy how far achievements have come up to expectations, to

(SRI M. V. DEO)

what extent they have fallen short or whether the causes for either were unavoidable"

ಆದರೆ ನಿಜವಾಗಿಯೂ ಇವರು ಗಂಡಸರಾಗಿದ್ದರೆ ಈ ಪ್ರಾಬ್ಲಮ್ಮನ್ನು ಎದುರಿಸುವುದಕ್ಕೆ ಹೋದಾಗ ಹೀಗೆಲ್ಲ ಹೇಳುತ್ತಿದ್ದರೇನು ? ಇದನ್ನು ಹೇಳಿರತಕ್ಕವರು ಶ್ರೀ ಸಂತಾನಂ ಅವರು A great Economist ಇದನ್ನೆಲ್ಲ ನಮ್ಮ ಸರ್ಕಾರದವರ ಮನಸ್ಸಿನಲ್ಲಿಟ್ಟುಕೊಂಡು ಕೆಲಸ ನಡೆಸದಿದ್ದರೆ ಮೊನ್ನೆ ಈ ಸಭೆಗೆ ಒಪ್ಪಿಸಿದ ಆ ಗೌರ್ನರ್ ಅವರ ಅಡ್ರೆಸ್ ಮತ್ತು ಈ ಬಡ್ಜೆಟ್‌ಗಳೆಲ್ಲ ಹೀಗಿರುತ್ತಿರಲಿಲ್ಲ. ಈಗ ನಮ್ಮ ರಾಜ್ಯ ಸರ್ಕಾರದ ಪಂಚವಾರ್ಷಿಕ ಯೋಜನೆಯನ್ನು ಪರಿಶೀಲನೆ ಮಾಡುವುದಾದರೆ "The Third Plan will demand dedicated leadership......" ಹೀಗೆ ಆಗಬೇಕಾಗಿತ್ತು. ಆದರೆ ಈಗ ನಮ್ಮ ಸರ್ಕಾರದವರು ಮಾಡಿರತಕ್ಕ ಈ ಪ್ಲಾನಿನ ಕೆಲಸ ಕಾರ್ಯಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಗಳು ಹೀಗೆ ಮುಂದುವರಿದಿವೆಯೋ ಹಾಗೇ ಇಲ್ಲಿಯೂ ಮುಂದುವರಿದಿವೆ ಎಂತ ಹೇಳುತ್ತಿದ್ದಾರೆ. ಆದರೆ ಇದು ಸರಿಯಲ್ಲ ತಪ್ಪಾಗಿರುವುದನ್ನು ತಪ್ಪಾಗಿದೆ ಎಂತ ಇವರು ಒಪ್ಪಿಕೊಳ್ಳಬೇಕು. ಇದರಲ್ಲೇನಿದೆ ? ಆದರೆ ಈಗ ನನಗೆ ಇಷ್ಟೇನಿಸುತ್ತಿದೆ : ಇದರ ಬಗ್ಗೆ ಒಬ್ಬ ಕವಿ ಒಂದು ಮಾತನ್ನು ಹೇಳಿದ್ದಾನೆ. ಅದು ಬಹಳ ಚೆನ್ನಾಗಿದೆ. ಅದನ್ನೀಗ ಇಲ್ಲಿ ಹೇಳುವುದು ಬಹಳ ಚೆನ್ನಾಗಿದೆ ಎಂತ ಕಾಣುತ್ತದೆ. There is no evil or ugliness or wickedness in this world. If you see any evil or ugliness or wickedness, it means, your soul is corrupt without any charm. That is what a great writer says. ನೀವು ಹೀಗೆ ಮಾಡಲು ಕಾರಣವೇನೆಂದರೆ–ನಿಮ್ಮಲ್ಲಿ ಆ Pains taking ವಿಚಾರ ಇಲ್ಲ. ಆದರೂ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಸೊಸೈಟಿಯಲ್ಲಿ ಸ್ಥಾಪಿಸುವ ಕಡೆಗೆ ಹೋಗುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಈಗ ಪೇ-ಸ್ಟ್ರಕ್ಚರಿನಲ್ಲಿ ಎರಡು ಭಾಗಮಾಡಿದ್ದಾರೆ. ಒಂದು ಸಬ್‌ಸಿಸ್ಟೇನ್ಸ್ ಲೆವಲ್ಲಿನ ಪೇ ಇನ್ನೊಂದು ವರ್ಕ್‌ಲೋಡಿಗೆ ಸರಿಯಾದ ಪೇ ಇರಬೇಕು ಎಂದು ನಿಗದಿಯಾದ ಕೆಲಸಕ್ಕಿಂತ ಮತ್ತು ಕಾಲಕ್ಕಿಂತ ಯಾರು ಹೆಚ್ಚು ಕೆಲಸವನ್ನು–ಹೆಚ್ಚು ಕಾಲ ಮಾಡುತ್ತಾರೋ ಅವರಿಗೆ ಓವರ್ ಟೈಂ ಪೇ ಕೊಡಲು ಒಂದು ಮಾರ್ಗವಿದೆ. ಆದರೆ ನಮ್ಮ ಇಡೀ ಇಂಡಿಯಾ ದೇಶದಲ್ಲಿ ಎಲ್ಲಿಯೂ ಆಗದಂಥ ಕೆಲಸ ಈಗ ಇಲ್ಲಿ ಆಗಿದೆ. ಇಲ್ಲಿ ಮುಖ್ಯವಾಗಿ ವಿದ್ಯೆಗೆ ಪುರಸ್ಕಾರವಿಲ್ಲ. ದೇಶದ ಆಡಳಿತ ಅವಿದ್ಯಾವಂತನ ಕೈಗೆ ಬಂದರೆ ಅವನೂ ಹಾಳಾಗುತ್ತಾನೆ, ಆ ದೇಶವೂ ಹಾಳಾಗುತ್ತದೆ.

ಈ ದಿವಸ ನಮ್ಮ ಸರ್ಕಾರ ಪೋಲೀಸ್ ಇಲಾಖೆಯಿಂದ ಹಾಗೂ ಅಗ್ರಿಕಲ್‌ಚರಲ್ ಇಲಾಖೆಯಿಂದ ಶಿಕ್ಷಣಕ್ಕಾಗಿ ಕೆಲವರನ್ನು ಪರದೇಶಕ್ಕೆ ಕಳುಹಿಸುತ್ತಾರೆ. ಆದರೆ ಅಲ್ಲಿಂದ ಶಿಕ್ಷಣ ಪಡೆದುಕೊಂಡು ಬಂದವರನ್ನು ಮೋಚಿ ಕೆಲಸಕ್ಕೆ ಹಾಕುತ್ತಾರೆ! ಹೀಗಾಗಿ ಇಲ್ಲಿರತಕ್ಕ ಮನುಷ್ಯನ ವಿದ್ಯೆಗೆ ಪುರಸ್ಕಾರವಿಲ್ಲ. ಈಗ ಅಗ್ರಿಕಲ್‌ಚರಲ್ ಇಲಾಖೆಯಲ್ಲಿ ಡೆಪ್ಯುಟಿ ಡೈರಕ್ಟರ......

The Deputy Director was equivalent to the Scientific Sectional Heads before Re-organisation. It is not so, after re-organisation. ಇಂಥಾ ನಿದರ್ಶನಗಳು ಎಷ್ಟೋ ಇವೆ. ಆದರೆ ಇಷ್ಟನ್ನು ಮಾತ್ರವಾದರೂ ಜ್ಞಾಪಕದಲ್ಲಿಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ವಿದ್ಯಾವಂತರನ್ನು ಕೆಲಸಕ್ಕೆ ನೋಡಿ ಕೆಲಸಕ್ಕೆ ತಕ್ಕವರನ್ನು ನೇಮಿಸಿಕೊಳ್ಳಬೇಕು. ಈ ಕೆಲಸವನ್ನು ಕೂಡಲೇ ಕೈಗೊಳ್ಳಬೇಕು. ಇಲ್ಲವಾದರೆ ಅಧಿಕಾರಿಗಳ ಮನಸ್ಸಿನಲ್ಲಿ ಒಂದು ನೆಮ್ಮದಿಯಿರುವುದಿಲ್ಲ. ವಿದ್ಯಾವಂತರಾದ ಜನರಿಗೆ ತಕ್ಕ ಸ್ಥಾನಮಾನಗಳನ್ನು ಕೊಡದೆ ಸುಮ್ಮನೆ ಅಡ್ಮಿನಿಸ್ಟ್ರೇಷನ್ ಸೈಡಿನಲ್ಲಿ ಜನರನ್ನು ಜಾಸ್ತಿ ನೇಮಕಮಾಡುತ್ತ ಹೋದರೆ ಅವರ ಮನಸ್ಸಿನಲ್ಲಿ ಈ Love of the State ಎಂಬ ಭಾವನೆ ಮಾಯವಾಗಬಹುದು. ಇದರಿಂದ ದೇಶದ ಪ್ರಗತಿಗೆ ತುಂಬ ಅಡ್ಡಿ ಬರುತ್ತದೆ.

ಇನ್ನು ಈಗ ಈ ಪಬ್ಲಿಸಿಟಿ-ಇನ್‌ಫರ್ಮೇಷನ್ ಇಲಾಖೆಗೆ 14 ಲಕ್ಷ ರೂ.ಗಳನ್ನು ಖರ್ಚುಮಾಡಲಾಗುತ್ತಿದೆ. ಅದರ ವಿವರಗಳೆಲ್ಲ ಇಲ್ಲಿದೆ. ಹೀಗೇ ಈ ಇಲಾಖೆಗೆ ಹಣವನ್ನು ಖರ್ಚುಮಾಡುತ್ತಾ ಹೋದರೆ-ಈ ಇಂಡಿಯಾ-ಪಾಕೀಸ್ಥಾನ ಹಾಗೂ ಚೈನಾ ಅಗ್ರೆಷನ್ ಗೊಂದಲದಲ್ಲಿ ಆ ಪಾಕೀಸ್ಥಾನ ಬಿದ್ದು ಹೋದರೆ It is Ilsamic ಗೆ ಸೇರಿದ್ದು ಅಂತ ಹೇಳಿ ಮೈಮೇಲೆ ಬಿದ್ದರೆ 500 ಲಕ್ಷ ಮುಸ್ಲಿಮರ ಅದೃಷ್ಟದ ತಕ್ಕಡಿ ಮೇಲಕ್ಕೇಳುತ್ತೆಂದು ಹೇಳುತ್ತಾರೆ. ಆದರೆ ಶೇ 99ರಷ್ಟು ಇದು good news ಅಲ್ಲ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಒಂಟೆ ವ್ಯಾಪಾರಿ ಬಹಳ ದೂರದಿಂದ ಬಾಯಾರಿಕೆಯಿಂದ ಬಂದು ಕುಡಿಯುವುದಕ್ಕೆ ನೀರು ಕೊಡಿ ಎಂತ

ಕೇಳಿದನಂತೆ. ಆಗ ಅವನಿಗೆ ಯಾರೋ ನೀರನ್ನು ಕೊಟ್ಟರು. ಆದರೆ ಅವನ ಹಾಗೇ ಅವನ ಒಂಟೆಗೂ ಬಹಳ ಬಾಯಾರಿಕೆಯಾಗಿತ್ತು. ಆದುದರಿಂದ ಅವನು ಮೊದಲು ಆ ನೀರನ್ನು ತಲೆಗೂ-ಎದೆಗೂ ಸೀರನ್ನು ತಟ್ಟಿ......

(*Interruption*)

ಅದರ ಫಲಿತಾಂಶವೇನೆಂದರೆ, ಭಕ್ತರು ಎಂದು ಎಷ್ಟು ಜನ ತಿಳಿದುಕೊಂಡಿದ್ದರೋ ಅವರೆಲ್ಲ ನರಕಕ್ಕೆ ಹೋದರು. ಈ ಮನುಷ್ಯ ಸ್ವರ್ಗಕ್ಕೆ ಹೋಗುತ್ತಾನೆ. ಕಾರಣವೇನೆಂದರೆ ಅವರ ಧರ್ಮ ಗ್ರಂಥದ ಪ್ರಕಾರ ಯಾವನು ಕಾಫರ್, ಯಾರು ದೇಶದ್ರೋಹಿ ಎಂದು ನೋಡಿಕೊಳ್ಳಬೇಕಾಗಿದೆ. ನನ್ನ ದೃಷ್ಟಿಯಲ್ಲಿ ಪ್ರೆಸಿಡೆಂಟ್ ಅಯೂಬ್‌ಖಾನರೂ ಸಹ ಕಾಫರ್. ನಾನು ಹೇಳುವುದಿಷ್ಟೆ. Publicity and Information ವಿಚಾರದಲ್ಲಿ ಚೆನ್ನಾಗಿ ಓದಿ ಪ್ರಶ್ನೆಗಳನ್ನು ಬಗೆಹರಿಸಲು ಇಂಥ ಸಣ್ಣ ಕಥೆಗಳನ್ನು ಹೇಳಿ ಅದಕ್ಕೆ ತಕ್ಕ publicity ಗೆ ಯಾರು ಗಮನ ಕೊಡಬೇಕೋ ಅವರು ಗಮನ ಕೊಟ್ಟರೆ ಈಗಿನ ತುರ್ತು ಪರಿಸ್ಥಿತಿಯಲ್ಲಿ ಒಳ್ಳೆಯದಾಗುತ್ತದೆಂದು ನಾನು ಹೇಳುತ್ತೇನೆ.

ಸೈನಿಕ್ ಸ್ಕೂಲು ಗೃಹಮಂತ್ರಿಗಳಿಗೆ ಕೊಡುವುದರ ಬದಲು ವಿದ್ಯಾಮಂತ್ರಿಗಳಿಗೆ ಕೊಟ್ಟಿದ್ದಾರೆ. ಇದು ಸರಿಬರುವುದಿಲ್ಲ. ಇದನ್ನು ಬದಲಾಯಿಸಬೇಕು.

— ನಮಸ್ಕಾರ —

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

Mr. SPEAKER.—Before the debate begins, I would like to say that hardly 2 Members have participated in the debate so far. Therefore I think the time may be extended by one hour. We may sit till 7 P.M.

Sri M. V. RAMA RAO.—If it is unavoidable, I would not stand in the way.

Sri K. S. SURYANARAYANA RAO (Mysore City).—The Ministers want 1½ hours for their reply. If that be so, very little would be left for Members to speak.

Mr. SPEAKER.—That is why I suggested an extension by one hour.

Sri K. S. SURYANARAYANA RAO.—One hour may not be sufficient.

Mr. SPEAKER.—We will see as the debate progresses.

Sri B. D. JATTI.—Tomorrow and day-after we have to discuss both Education and Commercial Taxes. I suggest that we discuss Education one full day and Commercial Taxes another day and the two may not be mixed up.

Mr. SPEAKER.—The suggestion is that Demand No. 17 pertaining to Education be discussed on the 15th and the other items be discussed on the 14th. Is the House agreeable ?

(*Members indicated assent*)

ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸನ್ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದಿರತಕ್ಕ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಡಿಮಾಂಡ್‌ಗಳಿಗೆ ಬೆಂಬಲವನ್ನು ಕೊಟ್ಟು ಎರಡು ಸೂಚನೆಗಳನ್ನು ಮಾಡಬೇಕೆಂದಿದ್ದೇನೆ.

ಸ್ವಾಮಿ, ಈ ಸರ್ಕಾರದ ಆಡಳಿತದಲ್ಲಿ ನಮ್ಮ ಸೆಕ್ರೆಟೇರಿಯಟ್ ಆಡಳಿತ ಭಾಗವನ್ನು re-organise ಮಾಡಬೇಕೆಂದು ಹಿಂದೆ ಎರಡು ಮೂರು ಕಮಿಟಿಗಳ ವರದಿಗಳು ಬಂದಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಅದರಲ್ಲಿಯೂ ಬಹು ಪ್ರಾಮುಖ್ಯವಾದುವು ಶ್ರೀಯುತ ಗೋರವಾಲಾ ಮತ್ತು ಎ. ಜಿ. ಆರ್, ಕಮಿಟಿ ರಿಪೋರ್ಟ್‌ಗಳು. ಈ ರಿಪೋರ್ಟ್‌ಗಳಲ್ಲಿ ಇರುವ ಸಲಹೆಗಳಲ್ಲಿ ಸ್ವಲ್ಪ ಭಾಗವನ್ನು ಈ ಸೆಕ್ರೆಟೇರಿಯಟ್‌ನಲ್ಲಿ ಅಳವಡಿಸಿದ್ದಾರೆ. ಅದರಲ್ಲಿಯೂ ಗೋರವಾಲಾ ರಿಪೋರ್ಟ್ ಏನಿದೆ ಅದನ್ನು ಈ ಸೆಕ್ರೆಟೇರಿಯಟ್ಟಿನ ಮೂರು ನಾಲ್ಕು ಖಾತೆಗಳಲ್ಲಿ ಅಳವಡಿಸಿ ಅದರ ಸಾಧ್ಯಾ ಸಾಧ್ಯತೆಯನ್ನು ಪರಿಶೀಲನೆ ಮಾಡಿ ನಂತರ ಇತರ ಇಲಾಖೆಗಳಿಗೆ ಅನ್ವಯಿಸಬೇಕೆಂದಿದ್ದಾರೆ. ಈಗ ಅರ್ಥಿಕ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಜತ್ತಿಯವರು ಸರ್ಕಾರ ಹಿಂದೆ ಏನು ಇತ್ತು ಅವರು ಸಾಕಾದಷ್ಟು ಆಲೋಚನೆ ಮಾಡಿ ಜಾರಿಗೆ ತಂದ ಪದ್ಧತಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಿಂದೆ ಏನೊಂದು ವಿಧಾನವಿತ್ತು, ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಸೂಪರಿಂಟೆಂಡೆಂಟ್, ಎಂದು ಏನಿತ್ತು ಅದರ ಪ್ರಕಾರ ಕೆಲಸಕಾರ್ಯಗಳು ಚೆನ್ನಾಗಿ ನಡೆದು, ಫೈಲ್‌ವಗೈರೆ ಎಲ್ಲಿ ಹೋದರೂ ಸಹ ಯಾವ ವಿಧವಾದ ವ್ಯತ್ಯಾಸವೂ ಆಗದಂತೆ ಇರುವ ಕಾಲವಿತ್ತು. ಗೋರವಾಲಾ ರಿಪೋರ್ಟ್ ಪ್ರಕಾರ ಏನು ಬದಲಾವಣೆಗಳನ್ನು ಮಾಡಿದರೋ ಅದರಲ್ಲಿ ಕೆಲವು ಸಂದರ್ಭಗಳಲ್ಲಿ ಫೈಲ್‌ಗಳು ಎಲ್ಲಿ ಹೋಗಿವೆ ಎಂದು ಕಂಡುಹಿಡಿಯುವುದಕ್ಕೇ ಕಷ್ಟ ವಾಗಿದೆ ಎಂದು ಅವರೇ ಸೂಚನೆ ಮಾಡಿದ್ದಾರೆ. ಒಂದೇ ಸೆಕ್ರೆಟೇರಿಯಟ್ಟಿನಲ್ಲಿ ಎರಡು ಮೂರು ರೀತಿಯ ಆಡಳಿತವಿರತಕ್ಕದ್ದು ಯೋಗ್ಯವಾದುದಲ್ಲ. ಸರಿಯಾದುದಲ್ಲವೆಂದು ಕಾಣುತ್ತದೆ. ಇದನ್ನು ಕೂಡಲೇ ಸರಿಪಡಿಸಿ ಒಂದೇ ವಿಧವಾದ ಆಡಳಿತವನ್ನು ನಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಇಡತಕ್ಕದ್ದು ಒಳ್ಳೆಯದು.

ಸರ್ಕಾರಿ ಸೆಕ್ರೆಟೇರಿಯಟ್ಟಿನಿಂದ ಹಿಡಿದು ತಾಲ್ಲೂಕಿನ ಮಟ್ಟಕ್ಕೆ ಹೋಗುವುದಕೆ ಹಂತ ಹಂತದಲ್ಲಿ ಸಿಕ್ಕಿಹಾಕಿಕೊಂಡು ತಡವಾಗತಕ್ಕದ್ದು ಅನೇಕ ಮಾನ್ಯ ಸದಸ್ಯರ ಗಮನಕ್ಕೆ ಬಂದು ಅದನ್ನು ಸರ್ಕಾರದ ಗಮನಕ್ಕೆ ಸಾಕಾದಷ್ಟು ಸಂದರ್ಭದಲ್ಲಿ ತಂದಿದ್ದೇವೆ. ಒಂದು ಸಲಹೆಯನ್ನು ನಾನು ಇಲ್ಲಿ ಕೊಡಬೇಕು ಎಂದು ಇಚ್ಛಿಸುತ್ತೇನೆ. ದೇಶದ ಎಲ್ಲ ಭಾಗಗಳಿಗಿಂತಲೂ ಗ್ರಾಮಾಂತರ ಪ್ರದೇಶದ ಜನಗಳೇನಿದ್ದಾರೆ ಅವರಿಗೆ ತಾಲ್ಲೂಕು ಸಬ್‌ಡಿವಿಷನ್ ಮತ್ತು ಡೆಪ್ಯುಟಿ ಕಮಿಷನರ ಆಫೀಸು ಗಳಿಂದ ಏನು ಕೆಲಸವಾಗಬೇಕಾಗಿದೆಯೋ ಆ ಕೆಲಸ ತ್ವರಿತವಾಗಿ ಆಗದೆ, ಅನಗತ್ಯವಾಗಬೇಕಾದಷ್ಟು querries ಹಾಕುವುದರಲ್ಲಿ, record build up ಮಾಡುವುದರಲ್ಲಿ ನಿಧಾನ ಮಾಡದೆ ಬೇಗ ಇತ್ಯರ್ಥ ಮಾಡಿದರೆ ಆ ಜನಗಳಿಗೆ ಸಹಾಯ ಮಾಡಿದಂತಾಗುವುದೆಂದು ಹೇಳುತ್ತೇನೆ.

ನಾನು ಹಿಂದೊಮ್ಮೆ ಹೇಳಿದ್ದೇನೆ ; ಅರ್ಜಿ ಕೊಡತಕ್ಕ ರೈತ ಏನೊಂದು ನಿರೀಕ್ಷೆ ಮಾಡಿಕೊಂಡು ಕೊಡುತ್ತಾನೆ. ಆಯಾ ಖಾತೆಗಳಲ್ಲಿರುವ ಅಧಿಕಾರಿಗಳಿಗೆ ಅದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ಕೇಳಿರತಕ್ಕದ್ದು ಸಾಧ್ಯವಿಲ್ಲವೆಂದು ನೇರವಾಗಿ ಆ ಸಂದರ್ಭದಲ್ಲಿ ಆ ಆಫೀಸಿನಲ್ಲಿ ಏನು ಮಾಹಿತಿ ಒದಗಬಹುದೋ ಆ ಮಾಹಿತಿಯಿಂದ ತಿಳಿಸಿದರೆ ಅವರ ಎಷ್ಟೋ ಕಷ್ಟಗಳು ನಿವಾರಣೆಯಾಗು ತ್ತವೆ. ಆ ರೀತಿ ಮಾಡದೆ ಕೆಳಗಿನ ಅಂತಸ್ತು ಯಾವುದಿದೆಯೋ ಅಲ್ಲಿಯವರೆಗೂ ಕಳಿಸಿ ಆಮೇಲೆ 'ಆಗುವುದಿಲ್ಲ' ಎಂದು ಹೇಳುವಂಥ ಸಂದರ್ಭಗಳನ್ನು ಹತ್ತಾರು ಬಾರಿ ಸರ್ಕಾರದ ಗಮನಕ್ಕೆ ತಂದಿ ದ್ದೇನೆ. ಇದನ್ನು ತೀಕ್ಷ್ಣವಾಗಿ ಆಲೋಚನೆ ಮಾಡಿ ಸರ್ಕಾರದವರು ಪರಿಹಾರ ಮಾಡದೆ ಹೋದರೆ ರೈತರಿಗೆ ಬಹಳ ಕಷ್ಟವಾಗುತ್ತಿದೆ.

ಅಡಿಷನಲ್ ಡೆಪ್ಯುಟಿ ಕಮಿಷನರುಗಳೆಂದು ನಾವು ಏನು ನೇಮಿಸಬೇಕೆಂದಿದ್ದೇವೆ, ಆ ಹುದ್ದೆ ಗಳನ್ನು ಎಲ್ಲ ಕಡೆಯೂ ಹಾಕಬೇಕಾಗಿರತಕ್ಕ ಅವಶ್ಯಕತೆಯಿದೆಯೇ ಎಂದು ಆಲೋಚನೆ ಮಾಡ ಬೇಕಾಗಿದೆ. ಬೆಂಗಳೂರು, ಮೈಸೂರು ಇಂಥ ನಗರಗಳಲ್ಲಿ ನೇಮಕ ಮಾಡಬಹುದು ; ಎಲ್ಲ ಕಡೆ ಗಳಲ್ಲಿಯೂ ನೇಮಕ ಮಾಡತಕ್ಕ ಪ್ರಮೇಯವಿಲ್ಲ. ಅವರನ್ನು ನೇಮಕ ಮಾಡಿದರೆ ಅದಕ್ಕೆ ಹೆಚ್ಚಿನ ಹಣ ಖರ್ಚಾಗುತ್ತದೆ. ಈ ವಿಚಾರದಲ್ಲಿ ಸರಿಯಾಗಿ ಆಲೋಚನೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ.

ಶ್ರೀಯುತ ಎ. ಜಿ. ರಾಮಚಂದ್ರರಾವ್ ಕಮಿಟಿ ರಿಪೋರ್ಟಿನಲ್ಲಿ ಸಾಕಾದಷ್ಟು ಮಿತವ್ಯಯವನ್ನು ಮಾಡಬಹುದೆಂದು ಹೇಳುತ್ತ ಸಾಮಾನ್ಯ ಆಡಳಿತದ ವಿಷಯದಲ್ಲಿ ಒಳ್ಳೆಯ ಸಲಹೆಗಳನ್ನು ಕೊಟ್ಟಿ ದ್ದಾರೆ. ಅವುಗಳನ್ನು ಇನ್ನೂ ತಡಮಾಡಿಕೊಂಡೇ ಆಲೋಚನೆ ಮಾಡುತ್ತಿದ್ದಾರೆ. ಪೂರ್ಣವಾಗಿ ಕಾರ್ಯಗತ ಮಾಡಿಲ್ಲ. ಎಲ್ಲಿ ಮಿತವ್ಯಯ ಮಾಡಬೇಕಾಗಿರುತ್ತದೆಯೋ ಅಲ್ಲಿ ಮಾಡದೆ ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ವರದಿಯನ್ನು ಮಾಡುವುದಕ್ಕೆ ಎಷ್ಟು ಹಣವನ್ನು

ಖರ್ಚು ಮಾಡಿದ್ದಾರೆ, ಎಷ್ಟು ಕಾಲವನ್ನು ನಮ್ಮ ಸ್ನೇಹಿತರು ಆ ವರದಿಯನ್ನು ತಯಾರುಮಾಡ ವುದಕ್ಕೆ ವ್ಯಯಮಾಡಿದ್ದಾರೆ. ಅದರಿಂದ ಆಗಿರತಕ್ಕ ಪ್ರಯೋಜನವೇನು ಎಂದು ಯೋಚನೆ ಮಾಡಿ ಆ ವರದಿಯಲ್ಲಿರತಕ್ಕ ಮುಖ್ಯವಾದ ವಿಷಯಗಳನ್ನು, ಸೂಕ್ತವಾದ ಸಲಹೆಗಳನ್ನು ಕೂಡಲೇ ಕಾರ್ಯಗತ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು.

ಇವೊತ್ತಿನ ದಿವಸ conversion ಮುಂತಾದ ಕೆಲಸಗಳು ಬೆಂಗಳೂರು ಜಿಲ್ಲೆಯಲ್ಲಿ ಬಹು ಮಟ್ಟಿಗೆ ತಡವಾಗುತ್ತಿವೆ. ಒಂದಲ್ಲ ನೂರಾರು ಕೇಸುಗಳು ಪೆಂಡಿಂಗ್‌ನಲ್ಲಿವೆ. ಆ ರೀತಿ ಬೇಗ ಮಾಡದೆ ಹೋದರೆ, ಬೆಂಗಳೂರಿನ ಸುತ್ತಮುತ್ತ ಮತ್ತು ಇತರ ಕಡೆ ನಗರಗಳು ಬೆಳೆಯುತ್ತಿರುವೆಡೆ ಗಳಲ್ಲಿ ಇದರಿಂದ ಕಷ್ಟವನ್ನು ಜನರು ಅನುಭವಿಸುತ್ತಿದ್ದಾರೆ. ವ್ಯವಸಾಯ ಭೂಮಿಯನ್ನು conversion ಮಾಡಿ ತಮಗೆ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ, farmer's house ಕಟ್ಟಬೇಕಾದರೆ conversion ಮಾಡಲು ಮಂಜೂರಾತಿ ಅಗತ್ಯವಾಗಿ ಆಗಬೇಕಾಗಿದೆ, ಆ ಒಂದು ಕ್ರಮ ಬಹಳ ತಡವಾಗಿ ಏನೊಂದು ಕೆಲಸವಾಗಬೇಕಾಗಿದೆ, ಏನು ಅನುಕೂಲವಾಗಬೇಕಾಗಿದೆ, ಆದಾಗದೆ, ಬಿಸಿಲಿನಲ್ಲಿ ಸುತ್ತಾಡುತ್ತ ಕಷ್ಟವಾಗುತ್ತಿದೆ. ಇದನ್ನೂ ಕೂಡ ಬೇಗ ಪರಿಹಾರ ಮಾಡಿಕೊಡಬೇಕು.

ಬಂಡೆಗಳು, quarry ವಿಷಯ. ಸರ್ಕಾರದ ವ್ಯವಸ್ಥೆಯಲ್ಲಿ ಕೆಲವು ವರ್ಷ Geological Department, ಕೆಲವು ವರ್ಷ ರೆವೆನ್ಯೂ ಇಲಾಖೆ ಇವಕ್ಕೆ ಸೇರಿದ್ದುವು. ಈ ಕೆಲಸದಲ್ಲಿ ನಿರತ ರಾಗಿದ್ದ ಜನಗಳಿಗೆ ಬಹಳ ತೊಂದರೆಯಾಗಿದೆ. ಇಂಥಿಂಥ ಇಲಾಖೆಯವರು ಇಂಥಿಂಥ ಕೆಲಸ ಮಾಡಬೇಕು ಎಂದು confuse ಆಗಿರುವ ಸಂದರ್ಭಗಳಲ್ಲಿ ಸ್ಪಷ್ಟವಾಗಿ ತಿಳಿಸಬೇಕು. ಇಲ್ಲದೆ ಹೋದರೆ ಯಾರಿಗೆ ಅನ್ಯಾಯವಾಗುತ್ತದೆಯೋ ಆ ಜನರು ಹೈಕೋರ್ಟಿನವರೆಗೆ ಹೋಗಿರತಕ್ಕ ಸಂದರ್ಭಗಳು ಬಂದಿವೆ.

ಇದನ್ನು ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡಿಲ್ಲ. ಇದರ ಕಡೆಗೆ ಗಮನಕೊಡಬೇಕು. ಇವೊತ್ತಿನ ದಿನ ಜನ ಏನು ನಿರೀಕ್ಷೆ ಮಾಡುತ್ತಾರೆ ಎಂದರೆ, ಸರಕಾರದಲ್ಲಿ ತಮ್ಮ ಕೆಲಸ ಕಾರ್ಯಗಳು ಬೇಗ ಆಗಬೇಕೆಂದು. ಹಾಗಾದರೆ ಅವರ ಮನಸ್ಸಿಗೆ ಸಂತೋಷವಾಗುತ್ತದೆ. ಆ ರೀತಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ನಾನೂ ಕೇಳುತ್ತೇನೆ. ಹಿಂದೆ ಪಾಶ್ಚಿಮಾತ್ಯರ ಒಂದು ಆಡಳಿತ ವಿತ್ತು. ಅದೇ ರೀತಿಯಾಗಿ ಇಂದಿನ ಆಡಳಿತದಲ್ಲೂ ನಡೆದುಕೊಂಡು ಬರುತ್ತಿದೆ. ಅಧಿಕಾರಿಗಳಿಗೆ ಒಂದು ಅರ್ಜಿ ಬಂದ ಮೇಲೆ ಅದನ್ನು ಬೇಗ ಇತ್ಯರ್ಥ ಮಾಡಿ ಸಹಾಯ ಮಾಡೋಣ, ಯಾವ ರೀತಿ ಅವರ ಕುಂದುಕೊರತೆಗಳನ್ನು ಪರಿಹಾರ ಮಾಡೋಣ, ಅದಕ್ಕೆ ತಕ್ಕಂತೆ ನಮ್ಮ ಆಡಳಿತವ್ಯವಸ್ಥೆ ಒಂದು ಉತ್ತಮ ರೀತಿಯಲ್ಲಿರುವಂತೆ ಮಾಡಬೇಕು. ಜನಗಳ ಕಷ್ಟಗಳನ್ನು ತೊಂದರೆಯಿಲ್ಲದ ರೀತಿಯಲ್ಲಿ ಪರಿಹಾರ ಮಾಡಬೇಕು. ಇದರ ಮೇಲೆ ಸಾಧ್ಯವಾದಷ್ಟು Quick disposal of files ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಫೈಲ್ಸ್‌ಗಳನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಅವರೂ ಕೊಡಬಾರದು ಆಗಬೇಕಾದ ಕೆಲಸವನ್ನು ಆಗುತ್ತೆ ಎಂದು ಹೇಳಬೇಕು, ಇಲ್ಲದೇ ಇದ್ದರೆ ಇಲ್ಲ ಎಂದು ತಿಳಿಸಬೇಕು. ಇದನ್ನು ಮಾಡದೇ ಸುಮ್ಮನೆ ಜನ ಕಾಲಹರಣ ಮಾಡಿಕೊಂಡು ತಮ್ಮ ಕೆಲಸವನ್ನು ಮುಂದೂಡ ಬೇಕಾಗುತ್ತದೆ. ಈಗ ಏನಾಗಿದೆ ಎಂದರೆ ಕಾಗದ ಬಂದ ಕೂಡಲೆ ಅದಕ್ಕೆ Qurries ಗಳನ್ನು ಹಾಕಿ ಆಗಬೇಕಾದ ಕೆಲಸಕ್ಕೂ ತೊಂದರೆ ಉತ್ಪನ್ನವಾಗುತ್ತಿದೆ. ಈ ರೀತಿಯಾದ ಪರಿಸ್ಥಿತಿ ಸಾಮಾನ್ಯ ಆಡಳಿತದಲ್ಲಿ ಕಂಡು ಬರುತ್ತಿದೆ. ತ್ವರಿತವಾಗಿ ಫೈಲ್‌ಗಳನ್ನು ಇತ್ಯರ್ಥ ಮಾಡುವ ಪದ್ಧತಿಗೆ ಗಮನ ಕೊಟ್ಟು ಸಾಧ್ಯವಿದೆ, ಸಾಧ್ಯವಿಲ್ಲವೆಂದು ಹೇಳಲು ಅದಕ್ಕೆ ಬೇಕಾದ ವಿವರಗಳನ್ನು ತರಿಸಿಕೊಂಡು ತೀರ್ಮಾನ ಮಾಡುವುದಕ್ಕೆ ಪ್ರಯತ್ನಮಾಡಿದರೆ ನಮ್ಮ ಜನತೆಗೆ ಅನುಕೂಲ ಮಾಡಿ ಕೊಟ್ಟ ಹಾಗಾಗು ತ್ತದೆ.

ಇಷ್ಟು ಹೇಳಿ ಈ ಬೇಡಿಕೆಗಳನ್ನು ಸಮರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ,

† [SRI Vidhyadhara Guruji Sayann (Gurmitkal) Spoke in Hindustani]

ಶ್ರೀ ಬಿ. ಜೆ. ಲಿಂಗೇಗೌಡ.—(ಚನ್ನಪಟ್ಟಣ) ಮಾನ್ಯಸಭಾಪತಿಗಳೇ, 1963-64ನೇ ಸಾಲಿಗೆ ಸಂಬಂಧಿಸಿದ ರಾಜ್ಯದ ಸಾಮಾನ್ಯ ಆಡಳಿತ, ಸಂಪತ್ತಿನ ಮತ್ತು ವಿಧಾನ ಮಂಡಲದ ಬೇಡಿಕೆಗಳ ಮೇಲೆ ಕೆಲವು ಸೂಚನೆಗಳನ್ನು ಕೊಡಬೇಕೆಂದು ಇಚ್ಛೆ ಪಡುತ್ತೇನೆ. ಸರಕಾರದವರು ನಮ್ಮ ಮುಂದಿಟ್ಟಿ ರುವ ಬೇಡಿಕೆಗಳನ್ನು ತುಂಬಾ ಅವಶ್ಯವಾದವುಗಳು ಆದಕಾರಣ ಈ ಬೇಡಿಕೆಗಳನ್ನು ನಾನು ಸಮರ್ಥನೆ ಮಾಡಲು ಸಂತೋಷಿಸುತ್ತೇನೆ. ಸ್ವಾಮಿ, ಎಲ್ಲರೂ ಕೂಡ ನಮ್ಮ ಆಡಳಿತವರ್ಗದಲ್ಲಿ ಕೆಲಸಕಾರ್ಯಗಳು ತುಂಬಾ ತಡವಾಗುತ್ತಿದೆ ಎಂದು ಹೇಳುವ ಕೂಗನ್ನು ನಾವು ಒಪ್ಪಿಕೊಳ್ಳಲೇ ಬೇಕು. ಏತಕ್ಕೋಸ್ಕರತಡ ವಾಗುತ್ತದೆ ಎನ್ನುವುದನ್ನು ನಾವು ಪರಿಶೀಲನೆ ಮಾಡಿದರೆ ಕೆಳಗಿನ ದರ್ಜೆಯಿಂದ ಮೇಲಿನ ದರ್ಜೆಯ ಅಧಿಕಾರವರ್ಗದವರೆಲ್ಲರಲ್ಲು ಆ ಶಿಸ್ತು ತೋರುತ್ತದೆ. ಇದನ್ನು ಹೋಗಲಾಡಿಸಬೇಕಾದರೆ ಏನು ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕು. ಎನ್ನುವುದನ್ನು ನಾವು ಆಲೋಚಿಸಬೇಕು. ಸರಕಾರಿ

ಶ್ರೀ ಬಿ. ಜೆ. ಲಿಂಗೇಗೌಡ

ಕಚೇರಿಗಳಲ್ಲಿ ಯಾವ ಕೆಲಸಗಳಿಗಾಗಿ ಹೋದರೂ ಕೂಡ ಕಾಗದ ಪತ್ರಗಳ ವಿಲೇವಾರಿ ತುಂಬಾ ತಡವಾಗುತ್ತ ಇರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ನಿಜವಾಗಿಯೂ ಜನತೆ ನಿರೀಕ್ಷಿಸುವ ಸಹಾಯವನ್ನು ಕಾಲಕ್ಕೆ ಸರಿಯಾಗಿ ಒದಗಿಸಿ ಕೊಡದೇ ಹೋದರೆ ಸರಕಾರದಿಂದ ನಾವೆಷ್ಟೇ ಸಾಕರ್ಯಗಳನ್ನು ಆವೇಳೆಯಲ್ಲಿ ಒದಗಿಸಿದರೂ ಅಷ್ಟು ಪ್ರಯೋಜನ ಯಾರಿಗೂ ಆಗುವುದಿಲ್ಲ. ತಾಲ್ಲೂಕು ಆಫೀಸುಗಳಲ್ಲಿ ಹೋಗಿ ನೋಡಿದರೆ, ಒಂದು ಕಾಗದ ಹೋಗಿ ಅದು ಹೊರಕ್ಕೆ ಬರಬೇಕಾದರೆ, ಯಾರಾದರೂ ಪ್ರಭಾವವನ್ನು ಬೀರುವವರು ಅಲ್ಲಿಗೆ ಹೋಗಿ ಅದನ್ನು ಹೊರಗಡೆಬರುವಂತೆ ಮಾಡಬೇಕು. ಅಥವಾ ಇನ್ನಾವುದಾದರೂ ರೀತಿಯಲ್ಲಿ ತರಬೇಕು ಎನ್ನುವುದು ನಮ್ಮ ಕಣ್ಣಿಗೆ ಕಾಣುತ್ತದೆ ಇದನ್ನು ಸಮರ್ಥಿಸಲು ಅನೇಕ ಉದಾಹರಣೆಗಳನ್ನು ಸಭಾಪತಿಗಳ ಮುಂದೆ ಇಡುವುದಕ್ಕೆ ತಯಾರಾಗಿದ್ದೇನೆ. ಸೆಕ್ರೆಟೇರಿಯಟ್ಟಿನಲ್ಲಿಯೂ ಕೂಡ ಕಾಗದ ಪತ್ರಗಳ ವಿಲೇವಾರಿ ತುಂಬಾ ತಡವಾಗುತ್ತಿರುವುದು ಶೋಚನೀಯವೆಂದು ಹೇಳಬೇಕಾಗಿದೆ. ಇತ್ತೀಚೆಗೆ ಗೆಜೆಟ್ಟಿನಲ್ಲಿ ಒಂದು ನೋಟಿಫಿಕೇಷನ್ನು ಚೀಫ್ ಸೆಕ್ರೆಟರಿಯವರಿಂದ ಹೊರ ಬಿದ್ದಿದೆ; ಇದರ ಪ್ರಕಾರ ಸಾರ್ವಜನಿಕರಾಗಲೀ, ಅಥವಾ ವಿಧಾನ ಸಭಾ ಸದಸ್ಯರುಗಳಾಗಲೀ ಸೆಕ್ರೆಟೇರಿಯಟ್ಟಿನಲ್ಲಿರುವ ಅಂಡರ್ ಸೆಕ್ರೆಟರಿಗಳನ್ನು ನೋಡಲು ಅವಕಾಶವಿಲ್ಲವಂತೆ. ಆದರೆ ಅವರಿಗೆ ಮೇಲ್ಪಟ್ಟ ಡೆಪ್ಯುಟೀ ಸೆಕ್ರೆಟೇರಿಗಳನ್ನೊ ಅಥವಾ ಸೆಕ್ರೆಟೇರಿಗಳನ್ನು ನೋಡೋಣ ಎಂದು ಪ್ರಯತ್ನಪಟ್ಟರೆ ಅದು ಕೂಡ ಕಷ್ಟ. ನಾನೇನೋ ಸುಮಾರು ನಲವತ್ತು ಮೈಲಿ ದೂರದಲ್ಲಿರುವುದರಿಂದಲೂ, ಖರ್ಚುಕೂಡ ದುಬಾರಿಯಾಗದಿದ್ದುದರಿಂದಲೂ ನಾನು ನಾಲ್ಕೈದು ಸಾರಿ ಸೆಕ್ರೆಟೇರಿಯಟ್ಟಿಗೆ ಭೇಟಿಕೊಟ್ಟರೂ ಈ ಅಧಿಕಾರಿಗಳನ್ನು ನೋಡಲು ಸಾಧ್ಯವಾಗಲಿಲ್ಲ. ಅವರನ್ನು ನೋಡಬೇಕಾದರೆ ಮಧ್ಯಾಹ್ನ ನಾಲ್ಕರಿಂದ ಐದುಗಂಟೆಯೊಳಗೆ ಮಾತ್ರ ಅವಕಾಶ. ಈ ಸಮಯದಲ್ಲಿ ಅವರುಗಳೇನಾದರೂ ಮೀಟಿಂಗುಗಳಲ್ಲಿದ್ದರೆ ನಾವು ನೋಡುವ ಹಾಗಿಲ್ಲ. ಮಂತ್ರಿಗಳನ್ನು ಯಾವಾಗಬೇಕಾದರೂ ನೋಡಲು ಅವಕಾಶವಿದೆ. ಆದರೆ ಡೆಪ್ಯುಟಿಸೆಕ್ರೆಟರಿಗಳು ಮತ್ತು ಸೆಕ್ರೆಟರಿಗಳನ್ನೂ ನೋಡುವುದಕ್ಕೆ ಹೋಗಲು ಇಷ್ಟು ಅಡ್ಡಿ ಆತಂಕಗಳಿರುತ್ತವೆ. ಹೋಗಲಿ, ಈ ಡೆಪ್ಯುಟಿ ಸೆಕ್ರೆಟರಿಗಳು ಏನಾದರೂ ನೆರವಾಗುತ್ತಾರೆಯೇ! ಇಲ್ಲಾ ಅವರು ಅಂಡರ್ ಸೆಕ್ರೆಟರಿಗಳ ಹತ್ತಿರ ಕಳಿಹಿಸುತ್ತಾರೆ. ಅಂಡರ್ ಸೆಕ್ರೆಟರಿಯನ್ನು ಭೇಟಿ ಮಾಡುವುದಕ್ಕೆ ಪ್ರಯತ್ನಪಟ್ಟರೆ ಅವರು ಭೇಟಿ ಮಾಡಲು ಸಾಧ್ಯವಿಲ್ಲವೆಂದು ಹೇಳಿ ಗೆಜೆಟ್ ನೋಟಿಫಿಕೇಷನ್ ತೋರಿಸಿದಾಗ ನಾನು ಹೇಳಿದೆ; "ನಾನು ವಿಧಾನ ಸಭಾ ಸದಸ್ಯನಾಗಿ ಬಂದಿಲ್ಲ. ನಾನು ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯದ ಸೆಕ್ರೆಟರಿಯಾಗಿ ಬಂದಿದ್ದೇನೆ ಮತ್ತು ನಾನೂ ಸರ್ಕಾರದಿಂದ ನೇಮಕ ಮಾಡಲ್ಪಟ್ಟ ಗೌರವ ಕಾರ್ಯದರ್ಶಿ ಎಂದು ಎಷ್ಟೇ ಪ್ರಯತ್ನ ಪಟ್ಟರೂ ಅಂಡರ್ ಸೆಕ್ರೆಟರಿಗಳನ್ನು ಭೇಟಿಮಾಡಲು ಸಾಧ್ಯವಾಗಲಿಲ್ಲ ನಾನು ಇದ್ದುದು ಇದ್ದ ಹಾಗೆ ಹೇಳುತ್ತಿದ್ದೇನೆ. ನಂತರ ನಾನು ಮಂತ್ರಿಗಳೊಬ್ಬರನ್ನು ಭೇಟಿ ಮಾಡಿದೆ. ಆ ಮಂತ್ರಿಗಳು ಹೇಳಿದರು; ನಿಮ್ಮ ಒಂದು ಕಾಗದ ಹೋದರೆ, ಅದರ ಜೊತೆಯಲ್ಲಿ ನೀವು ಪ್ರತಿಯೊಬ್ಬರ ಹತ್ತಿರವೂ ಹೋಗಿ, ಅದು ನನ್ನಲ್ಲಿ ಬರುವಹಾಗೆ ಮಾಡಿ, ಆಮೇಲೆ ಅದಷ್ಟು ಜಾಗ್ರತೆ ಕಾರ್ಯಕ್ರಮತೆಗೆದುಕೊಳ್ಳುತ್ತೇನೆ ಎಂದು, ನನಗೆ ಇಷ್ಟು ಕಷ್ಟವಾಗಿರುವಾಗ, ಇನ್ನೂ ಸಾಧಾರಣ ಜನರಿಗೆ ಸೆಕ್ರೆಟೇರಿಯಟ್ಟಿನಲ್ಲಿ ಎಷ್ಟು ಕಷ್ಟವಾಗುತ್ತದೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕಾದ್ದು ಅವರ ಕರ್ತವ್ಯವೆಂದು ನಾನು ಭಾವಿಸಿಕೊಂಡಿದ್ದೇನೆ.

4-00 P. M.

ಸ್ವಾಮಿ, ಈಗ ಈ ಸೆಕ್ರೆಟೇರಿಯಟ್ಟಿನಲ್ಲಿ ಎಷ್ಟರ ಮಟ್ಟಿಗೆ ಕಾಗದಗಳ ವಿಳಂಬವಾಗುತ್ತಿದೆ ಅನ್ನುವುದಕ್ಕೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ ಒಂದು 'ಅಕ್ವಿಜಿಷನ್ ರಿಕಾರ್ಡಿನಲ್ಲಿ 17ನೇ ಎಮರ್ಜನ್ಸಿ ಸೆಕ್ಷನ್ ಪ್ರಕಾರ ಗೌರ್ನಮೆಂಟ್ ಆರ್ಡರ್ ಹೊರಟಿರುವುದು 16-12-1959ರಲ್ಲು, ಮೂರು ವರ್ಷಗಳ ಮೇಲೆ ಆಗಿಹೋಯಿತು ಆದರೂ ಇವತ್ತಿನತನಕ ಯಾವ ಕಾರ್ಯಕ್ರಮವನ್ನು ಯಾವ ಅಧಿಕಾರಿಗಳೂ ತೆಗೆದುಕೊಂಡಿಲ್ಲ. ಈ ವಿಷಯದಲ್ಲಿ ರೆವಿನ್ಯೂ ಮಂತ್ರಿಗಳಿಗೆ ಕಾಗದಗಳನ್ನು ನಾನು ಪದೇ ಪದೇ 8-15 ದಿವಸಕ್ಕೆ, ಒಂದು ತಿಂಗಳಿಗೆ ಬರೆಯುತ್ತಲಿದ್ದೇನೆ. ಅವರು prompt ಆಗಿ ಒಂದು ಉತ್ತರ ಹೀಗೆ ಕೊಟ್ಟು ಬಿಡುತ್ತಾರೆ: ನಿಮ್ಮ ಕಾಗದ ಬಂದಿದೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೂಡಲೇ ತೆಗೆದುಕೊಳ್ಳುತ್ತೇನೆ ಎಂದು ನಮೂನೆಯ ಸುಮಾರು 4-5 ಕಾಗದಗಳು ಬಂದಿವೆ; ಆದರೆ ಕಾರ್ಯಕ್ರಮ ಮಾತ್ರ ತೆಗೆದುಕೊಳ್ಳಲಿಲ್ಲ. ಈ ರೀತಿ ನಮ್ಮ ಮಂತ್ರಿಗಳು ತಡವಾಗುವುದಕ್ಕೆ ಅವಕಾಶ ಮಾಡಿಕೊಟ್ಟರೆ. ಜನಗಳಿಗೆ ಸರ್ಕಾರದ ಬಗ್ಗೆ ಭಿನ್ನಾಭಿಪ್ರಾಯ ಬಂದೇ ಬರುತ್ತದೆ.

ನಮ್ಮ ವಿರೋಧ ಪಕ್ಷದವರು ಅನೇಕ ಸಂದರ್ಭಗಳಲ್ಲಿ, ಮಂತ್ರಿಗಳು ಸಂಚಾರಗಳನ್ನು ಕಡಿಮೆ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ. ಖಂಡಿತ ಆ ರೀತಿ ಮಾಡಿಕೊಳ್ಳಬೇಡಿ ಎಂದು ನಾನು ಹೇಳುತ್ತೇನೆ

ಹಾಗೂ ನೀವು ನಿಮ್ಮ ಸಂಚಾರಗಳನ್ನು ಕಮ್ಮಿ ಮಾಡಿಕೊಂಡರೆ ಈಗಿರುವ ವಿಶಾಲ ಮಂತ್ರಿ ಮಂಡಳದ ಅವಶ್ಯಕತೆಯನ್ನೇ ಪ್ರಶ್ನಿಸಿದಂತಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಮಂತ್ರಿ ಮಂಡಲದಲ್ಲಿರುವ ಪ್ರತಿಯೊಬ್ಬರೂ ಕೂಡ ಅದಷ್ಟು ಹೆಚ್ಚಿಗೆ ಸಂಚಾರ ಮಾಡುವುದರಿಂದ ಜನತೆಗೆ ಹೆಚ್ಚಿನ ಸಹಾಯ ಮಾಡಬಹುದು; ಆದರೆ ಎಲ್ಲಿ ಹೋದರೂ ಪ್ರತಿಯೊಂದು ಆಫೀಸಿಗೂ ಹೋಗಿ ಯಾವ ರೀತಿ ಅಲ್ಲಿಯ ಕೆಲಸಗಳು ನಡೆಯುತ್ತಿವೆ ಅನ್ನುವುದನ್ನು ನೋಡಬೇಕೆಂದು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಫಾರೆಷ್ಟು ಇಲಾಖಾ ಮಂತ್ರಿ ಶ್ರೀಮಾನ್ ಬಿ. ರಾಚಯ್ಯನವರು ಕೆಲವು ಸಂದರ್ಭಗಳಲ್ಲಿ surprise visits ಕೂಡ ಕೊಟ್ಟಿದ್ದಾರೆ ಹೋದ ಕಡೆಗಳಲ್ಲೆಲ್ಲಾ ಬೇರೆ ಇಲಾಖೆಗಳ ಕೆಲಸಗಳನ್ನು ವಿಮರ್ಶಿಸಿದ್ದಾರೆ. ಈ ರೀತಿ ಕೆಲಸ ಮಾಡಿದರೆ ಮಂತ್ರಿಗಳಿಗೆ ಕೊಡತಕ್ಕಂಥ T. A. ಖಂಡಿತ ನಿರರ್ಥಕವಾಗುವುದಿಲ್ಲ. ಇಂತಹ ಉಪಯುಕ್ತ ಭೇಟಿಗಳಿಂದ ಬಡ ಜನತೆಗೆ ಹೆಚ್ಚಿನ ಸಹಾಯ ಪಡೆದುಕೊಳ್ಳಬಹುದು ಎಂದು ನಾನು ಹೇಳುತ್ತೇನೆ.

ಪಬ್ಲಿಕ್ ಸರ್ವೀಸ್ ಕಮೀಷನ್ನಿನಲ್ಲಿ ಚೇರ್ಮನ್ ಸಮೇತ ಐದು ಜನ ಮೆಂಬರುಗಳನ್ನು ಸರ್ಕಾರ ನೇಮಕ ಮಾಡಿದ್ದಾರೆ. ಆದರೆ ಕೆಲಸಗಳ ಹಂಚಿಕೆ ವಿಷಯದಲ್ಲಿ ಸರ್ಕಾರದವರು ಕೆಲವು ದರ್ಜೆ ನೌಕರರ ನೇಮಕಗಳನ್ನು ತಾನೇ ಇಟ್ಟು ಕೊಂಡಿದ್ದಾರೆ ಅದು ಸಾಧುವಾದುದಲ್ಲ. ಹೀಗೆ ಮಾಡುವುದರಿಂದ ನಮ್ಮ ವಿರೋಧ ಪಕ್ಷದವರಿಗೂ ಸರ್ಕಾರವನ್ನು ದೂಷಿಸುವ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗಾಗಿದೆ ಎಲ್ಲಾ ವರ್ಗದ ನೇಮಕಗಳನ್ನೂ ಪಬ್ಲಿಕ್ ಸರ್ವಿಸ್ ಕಮೀಷನ್ನಿಗೇ ಬಿಟ್ಟು ಬಿಟ್ಟರೆ, ತೃಪ್ತಿಕರವಾದ ಏರ್ಪಾಟನ್ನು ಮಾಡಿದ ಹಾಗಾಗುತ್ತದೆ. ಸರ್ಕಾರದವರೂ ಬೇರೆ ಕೆಲಸಗಳಿಗೆ ಆ ಕಾಲವನ್ನು ಉಪಯೋಗಿಸುವುದಕ್ಕೆ ಅನುಕೂಲವಾಗುತ್ತದೆ. ಮೈಸೂರು ರಾಜ್ಯದಲ್ಲಿ ಏನೇನು ನೌಕರಿಗಳಿವೆಯೋ ಆ ನೌಕರಿಗಳ (ಜವಾನರುಗಳ ನೇಮಕದ (Class IV) ಬಿಟ್ಟು ಇತರ ನೌಕರುಗಳೆಲ್ಲರ) ನೇಮಕವನ್ನು ಕೂಡ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಬಿಡುವುದು ಸೂಕ್ತ ಮತ್ತು ನ್ಯಾಯವೆಂದು ನನ್ನ ಅಭಿಪ್ರಾಯ

ಲಂಚ ನಿರೋದ ಶಾಖೆಗೆ (Anticurruption Department) ಸುಮಾರು ರೂ. 4,66,600 ಸರ್ಕಾರದವರು ಖರ್ಚುಮಾಡುತ್ತಾ ಇದ್ದಾರೆ ಈ ಇಲಾಖೆಯನ್ನು ಆದಷ್ಟು ಜಾಗ್ರತೆ ತೆಗೆದು ಹಾಕಿದರೆ ಜನಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ನನ್ನ ಖಚಿತವಾದ ಅಭಿಪ್ರಾಯ. ಲಂಚ ನಿರೋಧದ ಕೆಲಸವನ್ನು ತೃಪ್ತಿಕರವಾಗಿ ಮಾಡಬೇಕಾದರೆ ನಾವು ಸರಿಯಾದ ಜನರನ್ನು ನೇಮಕ ಮಾಡುವ ಅವಶ್ಯಕತೆ ಇದೆ. ಆಯಾ ಇಲಾಖೆಯಲ್ಲಿರುವ ಸತ್ಯವಂತರಾದ ಆಫೀಸರುಗಳನ್ನು ಆರಿಸಿಕೊಂಡು ಲಂಚ ನಿರೋಧದ ಸೇವೆಯನ್ನು ಆಯಾಯ ಇಲಾಖೆಗಳ ಮುಖ್ಯಾಧಿಕಾರಿಗಳಿಗೇ ವಹಿಸುವುದು ಕ್ಷೇಮಕರ. ಈಗಿನ ಲಂಚ ನಿರೋಧ ಶಾಖೆಯವರು ಲಂಚಕೋರ ಅಧಿಕಾರಿಗಳನ್ನು ಪತ್ತೆ ಹಚ್ಚುತ್ತಿಲ್ಲಾ. ಲಂಚ ತೆಗೆದುಕೊಳ್ಳದೆ, ಯಾರು ಸತ್ಯವಂತರಾಗಿದ್ದಾರೆಯೋ, ಅವರಿಗೆ ''ನೀವು ಲಂಚ ತೆಗೆದುಕೊಳ್ಳಿ. ಏಕೆ ಸುಮ್ಮನಿದ್ದೀರಿ? ಅಂಥ ಸಂದರ್ಭಗಳನ್ನು ಕಲ್ಪಿಸಿಕೊಡುತ್ತೇವೆಂದು'' ಈ ಲಂಚನಿರೋಧ ಶಾಖೆಯವರು ಕಾರ್ಯಚಟುವಟಿಕೆಗಳಿಂದ ವ್ಯಕ್ತಪಡುತ್ತದೆ. ಉದಾಹರಣೆಗಳನ್ನು ಬೇಕಾದರೆ ಮಂತ್ರಿಗಳಿಗೆ ಕೊಡಬಲ್ಲೆ. ಈಗಲೇ ಈ ಸಭೆಯಲ್ಲಿ ಉದಾಹರಣೆಗಳನ್ನು ಕೊಟ್ಟರೆ ಬಹುಷಃ ಆಭಾಸವಾಗುತ್ತದೆಂದು ತಿಳಿದುಕೊಂಡು ಈಗಲೇ ತಿಳಿಸಲು ಇಷ್ಟಪಡುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದೇ ಒಂದು ಕೊಡಿ.

ಶ್ರೀ ಬಿ. ಜೆ. ಲಿಂಗೇಗೌಡ.—ಸತ್ಯವಂತರಾದ ಅಧಿಕಾರಿಗಳಿಗೆ ಕಿರುಕುಳ ಕೊಡುತ್ತಿರುವುದು ಶೋಚನೀಯ. ಈ ಶಾಖೆಯ ಕೆಲಸವನ್ನು ಆಯಾ ಇಲಾಖೆಯವರೇ ಮಾಡುವ ಹಾಗೆ ಏರ್ಪಾಡು ಮಾಡಬೇಕೆಂದು ಸರ್ಕಾರವನ್ನು ಮತ್ತೊಮ್ಮೆ ಪ್ರಾರ್ಥಿಸಿಕೊಳ್ಳುತ್ತೇನೆ.

ಸರ್ಕಾರೀನೌಕರರ ವಿಚಾರದಲ್ಲಿಯೂ ಕೂಡ ಶಿಸ್ತನ್ನು ಕಾಪಾಡುವುದಕ್ಕೋಸ್ಕರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮೊದಲೇ ತಮ್ಮಲ್ಲಿ ಭಿನ್ನೈಸಿಕೊಂಡೆ. ಸರ್ಕಾರಿ ನೌಕರರು C. C. A. ರೂಲ್ಸ್ ನೆಪದಲ್ಲಿ ಅನೇಕ ತಪ್ಪುಗಳನ್ನು ಮಾಡಿ ತಪ್ಪಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ. ಈ ರೂಲ್ಸ್ ಪ್ರಕಾರ ಮೇಲಿನ ಅಧಿಕಾರಿಗಳು ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಅನೇಕ ನೌಕರ ವರ್ಗದವರು ಅಂದುಕೊಂಡಿದ್ದಾರೆ. ಆದರೆ ಈ C. C. A. Rulesನ್ನು ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಹಾಗೆ ಬಿಗಿಮಾಡಿ, ಸರ್ಕಾರದ ಕೆಲಸಕಾರ್ಯಗಳು ಶಿಸ್ತಿನಿಂದ ನಡೆಯುವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಈ ದಿವಸ ನಮ್ಮ ಮಾನ್ಯ ಮಿತ್ರರು ಅನೇಕರು ಹೇಳಿದರು; ರಿಟ್ಟುಗಳು ಹೈಕೋರ್ಟಿಗೆ ಹೋಗುವುದು ಬಹಳ ಜಾಸ್ತಿಯಾಗಿದೆ ಎಂದು. ನಾವೇ ನಮ್ಮ ಕಾನೂನುಗಳಲ್ಲಿ ಅವಕಾಶಮಾಡಿಕೊಟ್ಟಿದ್ದೇವೆ. ಕೊಡುತ್ತಲೂ ಇದ್ದಾರೆ. ಸ್ವಾಮಿ ''ಸರ್ವೀಸಸ್‌ನಲ್ಲಿ'' ವಿಚಾರದಲ್ಲಿ ಮಾತ್ರ ನನ್ನ ಒಂದು ಮನವಿಯನ್ನು ಮಾನ್ಯ ಸಭೆಗೆ ಸಲ್ಲಿಸಲು ಅಪ್ಪಣೆ ಬೇಡುತ್ತೇನೆ. ನಮ್ಮ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಏನು ಬದಲಾವಣೆ ಬೇಕೋ ಆ ಬದಲಾವಣೆಗಳನ್ನು ಮಾಡಿ ಸರ್ಕಾರಿ ನೌಕರರಿಗೆ ವಿಧಿಸಿದ ಶಿಕ್ಷೆಗಳ ವಿಚಾರದಲ್ಲಿ

(ಶ್ರೀ ಬಿ.ಜೆ. ಲಿಂಗೇಗೌಡ)

ಹೈಕೋರ್ಟಿಗೆ ಹೋಗಲು ಅವಕಾಶವಿಲ್ಲದಿರುವ ಹಾಗೂ ಮತ್ತು "promotions"ಗೆ ಸಂಬಂಧಪಟ್ಟ ವಿಷಯಗಳ ವಿಚಾರಗಳಲ್ಲಿ ಮಾತ್ರ ರಿಟ್ ಹಾಕಲು ಅವಕಾಶವಿರುವ ರೀತಿಯಲ್ಲಿ ಮಾರ್ಪಾಡಾಗಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಸರ್ಕಾರದವರು ಶಿಸ್ತನ್ನು ಕಾಪಾಡಲು ಅಲ್ಪ ಸ್ವಲ್ಪ ಶಿಕ್ಷೆ ವಿಧಿಸಿದರೂ ಹೈಕೋರ್ಟಿಗೆ "ರಿಟ್" ಹೋಗುವುದರಿಂದ ನೌಕರ ವರ್ಗದಲ್ಲಿ ಭೀತಿ ಕಮ್ಮಿಯಾಗಿ ಆಡಳಿತದ ಬಿಗಿಯನ್ನು ಕಾಪಾಡಲು ಆಗುವುದಿಲ್ಲ. ಈ ಕಠಿಣವಾದ ಸಮಸ್ಯೆಯ ವಿಚಾರದಲ್ಲಿ ಸರ್ಕಾರದವರು ದೀರ್ಘಾಲೋಚನೆ ಮಾಡಬೇಕೆಂದು ಅವರನ್ನು ಪ್ರಾರ್ಥಿಸುತ್ತೇನೆ. ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಟಿ. ಎಚ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈವರೆಗೂ ನನ್ನ ಮಾನ್ಯ ಮಿತ್ರರು ಅನೇಕರು ಕೆಲವು ಸಲಹೆಗಳನ್ನು ತಮಗೆ ಕೊಟ್ಟಿದ್ದಾರೆ. ನಾನಾದರೂ ಕೆಲವು ವಿಚಾರಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಹಿಂದೆ ನಮ್ಮ ರಾಜ್ಯದಲ್ಲಿ ಜಮಾಬಂದಿ ಇದ್ದದ್ದು ನಾನು ಚಿಕ್ಕವನಾಗಿದ್ದಾಗ ತಾಲ್ಲೂಕು ಅಮಲ್ದಾರರು ಮತ್ತು ಸಬ್-ಡಿವಿಜನ್ ಅಧಿಕಾರಿಗಳು ಆಯಾಯ ಸ್ಥಳದಲ್ಲೇ ಬಂದು ಅಲ್ಲಿ ತಂಗಿದ್ದು ರೈತರಿಂದ ಬರತಕ್ಕ ಎಲ್ಲಾ ಅರ್ಜಿಗಳನ್ನೂ ಬಹಳಮಟ್ಟಿಗೆ ಅಲ್ಲೇ ವಿಲೆಮಾಡುತ್ತಾ ಇದ್ದರು. ಯಾರಿಗೂ ತೀರಬಾರದ ಕೆಲಸ ಅವರ ಮೇಲ್ಪಟ್ಟ ಅಧಿಕಾರಿಗಳಿಗೆ ಹೋಗುತ್ತಾ ಇತ್ತು. ಇವತ್ತು ಇದು ಬರೀ ಒಂದು ನಗುಪಾಟಲು ಆಗಿದೆ. ಜಮಾಬಂದಿ ಹೇಗೆ ಆಗುತ್ತಾ ಇದೆ ಎಂದರೆ ತಾಲ್ಲೂಕು ಜಮಾಬಂದಿಯಾಗಲಿ, ಹುಜೂರು ಜಮಾಬಂದಿ ಆಗಲೀ ಯಾವುದೋ ಒಂದು ದಿವಸ ಆ ಸಾಹೇಬರು ತಾಲ್ಲೂಕು ಹೆಡ್ ಕ್ವಾರ್ಟ್ರಿನಲ್ಲಿ ಇರುತ್ತಾರೆ. ರಾತ್ರಿ 9 ಗಂಟೆ ಮೇಲೆ ಹಳ್ಳಿ ಜನರೆಲ್ಲಾ ಅಲ್ಲಿ ಕೂಡಿಕೊಂಡಿರಬೇಕೆಂದು ಹೇಳುತ್ತಾರೆ. ಅನೇಕ ಸಾರಿ ಅವರು ಬರುವುದೇ ಇಲ್ಲ. ರೈತರಿಗೆ ಜಮಾಬಂದಿ ಆಗತಕ್ಕ ತಾರೀಖೇ ಅರ್ಥವಾಗುವುದಿಲ್ಲ. ಪಟೇಲ್ ಶ್ಯಾನುಭೋಗರು ಏನು ಕೊಟ್ಟಿರುತ್ತಾರೆ ಅದರ ಮೇಲೆ ಜಮಾಬಂದಿ ಮಾಡಿ ಮುಗಿಸುತ್ತಾರೆ. ಈಗಲಾದರೂ ಸರ್ಕಾರದಲ್ಲಿ ನನ್ನ ಒಂದು ಪ್ರಾರ್ಥನೆ, ಹಿಂದೆ ಯಾವ ಒಂದು ಒಳ್ಳೆಯ ಪದ್ಧತಿ ಇತ್ತು, ಅದನ್ನು ಕಡ್ಡಾಯವಾಗಿ ಜಾರಿ ತರಬೇಕು. ಎಲ್ಲಾ ರೆವಿನ್ಯೂ ಅಧಿಕಾರಿಗಳು ಆಯಾಯಾ ಹಳ್ಳಿಗೆ ಹೋಗಿ ಅಲ್ಲೇ ಕುಳಿತು ಫಿರ್ಕಾವಾರಾಗಿ ಅಲ್ಲಿ ಬರತಕ್ಕ ಎಲ್ಲ ವಿದ್ಯಮಾನಗಳನ್ನು ಅಲ್ಲೇ ತೀರ್ಮಾನಮಾಡತಕ್ಕ ಒಂದು ಪ್ರಯತ್ನಮಾಡಿದರೆ ಈ ಕಾಗದಪತ್ರಗಳು ಹೋಗಿ ನಿಮ್ಮ ಗುರೂಜಿಯವರು ಹೇಳಿದಂತೆ ಅಭಿಮನ್ಯು ಯುದ್ಧಮಾಡುತ್ತಾ ಮಾಡುತ್ತಾ ತಿರುಗಿ ಬರಲಾರದೆ ಹೇಗೆ ಸತ್ತನೋ ಹಾಗೆ ಈ ರೆಕಾರ್ಡುಗಳೂ ಸಾಯುವ ಒಂದು ಪರಿಸ್ಥಿತಿ ಬರುವುದಿಲ್ಲ ಎಂದು ನನಗೆ ಅನಿಸುತ್ತದೆ.

ಕೆಲವು ಕಡೆ, ಈ ಪ್ರಜಾಪ್ರಭುತ್ವದ ಈ ಕಾಲದಲ್ಲಿ ಪಾರ್ಟಿ ಇರಬೇಕು, ಸರಿ, ಪಾರ್ಟಿಧ್ಯೇಯ ಉದ್ದೇಶದ ಪ್ರಕಾರ ಆಡಳಿತ ಸೂತ್ರಗಳನ್ನು ತಾವು ನಡೆಸುವುದು ಸರಿ. ಆದರೆ ಇವತ್ತು ಏನಾಗಿದೆ? ನೀವು, ಸರ್ಕಾರ ವಹಿಸಿಕೊಂಡಂಥ ಜನ, ಚುನಾವಣೆ ಆಗುವವರೆಗೂ ಒಂದು ಪಕ್ಷದ ಸದಸ್ಯರಾಗಿರುತ್ತೀರಿ. ಯಾವತ್ತು ನೀವು ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದಿರೋ ಆಗ ನಿಮಗೆ ಯಾವ ಪಾರ್ಟಿಯೂ ಇಲ್ಲ. ನೀವು ದೇಶದ ಸಮಸ್ತ ಜನಗಳ ಕಷ್ಟಸುಖಗಳನ್ನು ವಿಚಾರಮಾಡತಕ್ಕಂಥ ನ್ಯಾಯ ಮೂರ್ತಿಗಳಾಗಬೇಕೇವಿನಾ ಒಂದು ಪಕ್ಷದ ಹಿತಕ್ಕೆ ಕೆಲವು ಅಹಿತಕಾರಿ ಜನಗಳ ಮಾತಿಗೆ ಪುರಸ್ಕಾರ ಕೊಟ್ಟುಕೊಂಡು ಬಹಳ ಅನ್ಯಾಯವಾಗತಕ್ಕ ಒಂದಲ್ಲ ಹತ್ತಾರು ನಿದರ್ಶನಗಳು ಈ ದೇಶದಲ್ಲಿ ಆಗಿಹೋಗಿವೆ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡಬೇಕೆಂದು ಹೇಳಿ ನಾನು ಇಷ್ಟ ಪಡುತ್ತೇನೆ. ಮಂಡ್ಯ ಒಂದು ದೊಡ್ಡ ಪಟ್ಟಣ ಎಂದರೆ ಬೆಂಗಳೂರು ಮೈಸೂರಿನಂತೆ ಅಲ್ಲದೇ ಇದ್ದರೂ ಕೂಡ ಜಿಲ್ಲಾ ಮುಖ್ಯ ಪಟ್ಟಣ. ಅಲ್ಲಿ ಒಂದು ಪೌರಸಭೆ ಇದೆ, ಆ ಪೌರಸಭೆಯವರು ಅವರ ಉಪಯೋಗಕ್ಕೆ ಆಕ್ಟ್ರಾಯಿ ವಸೂಲಿ ಸರಿಯಾಗಿ ಮಾಡಬೇಕೆಂದು ಹೇಳಿ ಒಂದು ವ್ಯಾನ್ ತೆಗೆದು ಕೊಂಡಿದ್ದರು ಅಲ್ಲಿ ಕೆಲವು ಜನ ಸರ್ಕಾರಕ್ಕೆ ಮತ್ತು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ಕೊಟ್ಟು ಹಾಗೆ ಮಾಡಿದ್ದು ತಪ್ಪು, ಸರ್‌ಚಾರ್ಜು ಹಾಕಿ ವಸೂಲು ಮಾಡಬೇಕೆಂದು ಹೇಳಿ ಬಹಳ ಬಲವಂತದಿಂದ ನಡೆದುಕೊಳ್ಳುತ್ತಾ ಇರತಕ್ಕ ರೀತಿ, ನೀತಿ, ಇದು ಮಾಡತಕ್ಕದಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಕೋ-ಅಪರೇಟೀವ್ ಸೊಸೈಟಿಗಳಲ್ಲೂ ಕೂಡ ಒಂದಲ್ಲ ಎರಡು ಮೂರು ಮೋಟಾರು ವಾಹನಗಳನ್ನು ತಮ್ಮ ಉಪಯೋಗಕ್ಕೆ ಇಟ್ಟುಕೊಂಡಿರುವಾಗ, ಖಾಸಗಿ ಜನರಿಂದ ಚುನಾಯಿತರಾಗಿ, ಒಂದು ದೊಡ್ಡ ಪಟ್ಟಣದ ಪೌರರಾಗಿ ಅವರ ಉಪಯೋಗಕ್ಕೆ ಒಂದು ವ್ಯಾನ್ ಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಇದು ಎಷ್ಟು ಮಟ್ಟಿನ ಒಂದು ಅಧಿಕಾರ ಚಲಾಯಿಸುತ್ತಾ ಇದ್ದಾರೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕಾಗಿದೆ. ಇದು ಪ್ರಜಾಪ್ರಭುತ್ವ. ಸ್ವಾಮಿ, ಉಳಿತಾಯ ಮಾಡುತ್ತೇವೆ. ಉಳಿತಾಯಕ್ಕೆ ಶ್ರೀಮಾನ್ ಬೈರೇಗೌಡರು ಹೇಳಿದ ಹಾಗೆ

ಗೋರ್‌ವಾಲಾ ರಿಪೋರ್ಟು ಮತ್ತು ಎ. ಜಿ. ಆರ್. ಸಮಿತಿಯವರ ರಿಪೋರ್ಟಿನಲ್ಲಿ ಅವರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟರು. ಅವರು ಕೊಡುವುದು ಕೊಡುತ್ತಾ ಇದ್ದಾರೆ. ನಾಳೆ ಮತ್ತೊಂದು ಕಮಿಟಿ ಮಾಡುತ್ತೇವೆ ಅಂತ ಮಾಡುತ್ತೀರಿ. ಅವರು ಹೇಳಿದ್ದೇ ಹೇಳುತ್ತಾರೆ. ನೀವು ಮಾಡಿದ್ದೇ ಮಾಡುತ್ತೀರಿ. ಯಾವುದರಲ್ಲೂ ಉಳಿತಾಯ ಮಾಡತಕ್ಕ ಮನಸ್ಸು ನಿಮಗೆ ಬರುತ್ತಾ ಇಲ್ಲ.

ಶ್ರೀ ಬಿ. ಡಿ. ಜತ್ತಿ.—ಶ್ರೀಮಾನ್ ಬೈರೇಗೌಡರು ಹೇಳಿದ್ದು ಗೋರ್‌ವಾಲಾ ಸಿಸ್ಟಂ ಪ್ರಕಾರ ಏನು ನಡೆದಿವೆ ಅದು ಚೆನ್ನಾಗಿಲ್ಲ. ಅದನ್ನು ಅನುಸರಿಸಬಾರದು ಎಂದು ಹೇಳಿದರು. ಅದನ್ನು ನೀವು ಕೇಳಲಿಲ್ಲ ಎಂದು ಕಾಣುತ್ತದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಕೇಳಿದೆ. ಆ ರಿಪೋರ್ಟಿನಂತೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಉಳಿತಾಯಕ್ಕೆ ಏನುಬೇಕೋ ಅದನ್ನು ಮಾಡುತ್ತಾ ಇಲ್ಲ ಎಂದು ಹೇಳಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗ ಖರ್ಚು ಕಡಮೆ ಮಾಡುತ್ತೇವೆ ಎಂದು ಹೇಳಿ ಪಟೇಲ್ ಶ್ಯಾನುಭೋಗರನ್ನು ತೆಗೆದುಹಾಕಿದಿರಿ. ವಂಶ ಪಾರಂಪರ್ಯವಾಗಿ ಬಂದ ಒಂದು ಹಕ್ಕು ಅವರಿಗೆ ಇತ್ತು, ಇಲ್ಲಿಯವರೆಗೂ ಪಟೇಲ್ ಶ್ಯಾನುಭೋಗರು ಆಯಾಯಾ ಸ್ಥಳದ ಗೌರವಸ್ಥರು ಆಗಿದ್ದರು. ಅವರಿಗೆ ಒಂದು ಜವಾಬ್ದಾರಿ ಇತ್ತು. ಅವರಿಗೆ ಒಂದು ಮಾನ ಮರ್ಯಾದೆ ಇದ್ದು ಸರ್ಕಾರದ ಹಣಕ್ಕೆ ಜವಾಬ್ದಾರರಾಗಿರುತ್ತಾ ಇದ್ದರೂ, ನಾಳೆ ಏನಾದರೂ ಅದು ಪೋಲಾಗುವುದಾದರೆ ನನ್ನ ಮಾನ ಹೋಗುತ್ತದೆ ಎಂದು ಹೇಳಿ ಬಹಳ ಕಷ್ಟಪಟ್ಟು ಸರ್ಕಾರದ ಹಣವನ್ನು ಖಜಾನೆಗೆ ಬರುವ ಹಾಗೆ ಮಾಡುತ್ತಾ ಇದ್ದರು. ಈಗ ನೂರಾರು, ಸಾವಿರಾರು ಜನಗಳನ್ನು ಹೊಸದಾಗಿ ತೆಗೆದು ಕೊಳ್ಳುತ್ತೀರಿ. ಅವನು ಯಾರೋ ಎಂಥವನೋ ಏನೋ, ಅವನನ್ನು ಇಟ್ಟುಕೊಂಡರೆ ಅವನು ಯಾರಿಗೆ ಜವಾಬ್ದಾರ? ಹೇಗೆ ಅವನು ಹಣವನ್ನು ವಸೂಲು ಮಾಡಬಲ್ಲ? ಅಥವಾ ನಾಳೆ ಏನಾದರೂ ಅವನು ಆ ಹಣವನ್ನು ಎತ್ತಿಕೊಂಡು ಓಡಿದರೆ ಅದಕ್ಕೆ ಜವಾಬ್ದಾರಿ ಯಾರು? ಅಂತ ಹೇಳಿ ತಾವು ಯೋಚನೆಮಾಡಿದ ಹಾಗೆ ಕಾಣಲಿಲ್ಲ. ಈ ಪಟೇಲ್ ಶ್ಯಾನುಭೋಗರಿಗೆ ಕೊಡುತ್ತಾ ಇದ್ದಂಥ ಪೋಟ್ಟಿಗೆ ಬಹಳ ಅತ್ಯಲ್ಪ ಇವತ್ತು ಪ್ರತಿಯೊಂದು ಗ್ರಾಮ ಪಂಚಾಯ್ತಿಗೂ ಕೂಡ ಒಬ್ಬೊಬ್ಬ ಅಕೌಂಟೆಂಟು, ಅವನೇ ಕಾರ್ಯದರ್ಶಿ. ಅದೂ ಕೂಡ ಅವನಿಗೆ ನೀವು 75 ರೂಪಾಯಿ ಸಂಬಳ ಕೊಟ್ಟರೂ ನಮ್ಮ ಈ ದೇಶದಲ್ಲಿರತಕ್ಕ ಎಲ್ಲಾ ಪಂಚಾಯ್ತಿಗಳಿಗೂ ನೇಮಕಮಾಡತಕ್ಕವರಿಗೆ ಸಂಬಳ ಸಾರಿಗೆ ಎಷ್ಟಾಗುತ್ತದೆ? ಈಗ ಗ್ರಾಮ ಪಂಚಾಯ್ತಿಗಳಿಗೆ ಅವರವರ ಕೆಲಸ ಅವರೇ ಮಾಡಿಕೊಳ್ಳು ವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ತಾಲ್ಲೂಕು ಬೋರ್ಡು ವಗೈರೆ ಮಾಡಿದ್ದೇವೆ ಆದ್ದರಿಂದ ಅವರೇ ಈ ಅಭಿವೃದ್ಧಿ ಕೆಲಸಗಳನ್ನೆಲ್ಲಾ ಮಾಡಿಕೊಂಡು ಹೋಗುತ್ತಾರೆ ಎಂದು ತಾವು ಹೇಳುತ್ತೀರಿ. ಸಂಬಳ ಸಾರಿಗೆ ಕೊಟ್ಟನಂತರ ಆ ಪಂಚಾಯ್ತಿಗಳಲ್ಲಿ ಉಳಿಯತಕ್ಕ ಹಣ ಎಷ್ಟು? ಆ ಹಣದಲ್ಲಿ ಗ್ರಾಮದ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಹೋಗುವುದಕ್ಕೆ ಆ ಪಂಚಾಯ್ತಿಗಳಿಗೆ ಸಾಧ್ಯ ವಾಗುತ್ತದೆಯೇ ಎನ್ನುವ ವಿಚಾರವನ್ನು ಈಗಲೂ ಕಾಲ ಮಿಂಚಿಲ್ಲ ಸರ್ಕಾರ ಯೋಚನೆ ಮಾಡ ಬೇಕಾಗಿದೆ.

[MR. DEPUTY SPEAKER.—in the Chair].

ಅಲ್ಲದೆ ಈಗ ಯಾವ ಒಂದು ಆಫೀಸಿಗೇ ಹೋಗಲಿ ಅಲ್ಲಿ ಕೆಲಸಮಾಡತಕ್ಕ ಜನರಲ್ಲಿ ಒಂದು ತೃಪ್ತಿಯೆಂಬುದೇ ಇಲ್ಲ. ಒಂದು ಇಲಾಖೆಗೆ ಕೊಡತಕ್ಕ ಸಂಬಳದ ಸ್ಕೇಲಿಗೂ ಇನ್ನೊಂದು ಇಲಾ ಖೆಗೆ ಕೊಡತಕ್ಕ ಸಂಬಳದ ಸ್ಕೇಲಿಗೂ ಬಹಳ ಏರುಪೇರುಗಳಿರುವುದರಿಂದ ನಾವು ಉತ್ತಮ ರೀತಿ ಯಲ್ಲಿ ಕೆಲಸಮಾಡುವುದಕ್ಕಾಗುವುದಿಲ್ಲ ಅದು ಸಾಧ್ಯವೇ ಇಲ್ಲ ಅಂತ ಈ ಒಂದು ಗೊಣಗಾಟ ಪ್ರತಿ ಯೊಂದು ಇಲಾಖೆಯಲ್ಲೂ ಇದೆ. ಸರ್ಕಾರದವರಿಗೆ ದಕ್ಷತೆಯಿಂದ ಆಡಳಿತ ನಡೆಸಬೇಕೆಂಬ ಇರಾದೆ ಇದ್ದರೆ ಒಂದೇವಿಧವಾದ ಕೆಲಸಮಾಡತಕ್ಕ ನೌಕರರುಗಳಿಗೆಲ್ಲ ಒಂದೇಸಮನಾದ ಸಂಬಳದ ಸ್ಕೇಲನ್ನು ಕೊಡಬೇಕು. ಈಗ ಉದಾಹರಣೆ ಹೇಳುವುದಾದರೆ-ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಆಫೀಸರು, ಅಗ್ರಿಕಲ್‌ಚರಲ್ ಎಕ್ಸ್‌ಟೆನ್ಷನ್ ಆಫೀಸರು ಮತ್ತು ಕೋ-ಅಪರೇಟಿವ್ ಎಕ್ಸ್‌ಟೆನ್ಷನ್ ಎಂತ ಮೂರು ಅಧಿಕಾರಿಗಳಿದ್ದಾರೆ-ಹೀಗೆ ಮೂರು ತರಹ ಯೋಜನೆಯ ಕೆಲಸಗಳಿವೆ. ಇದರಲ್ಲಿ ಹೆಚ್ಚಿಗೆ ಮಾಡತಕ್ಕವರೆಂದರೆ ಅದು ಅಗ್ರಿಕಲ್‌ಚರ್ ಎಕ್ಸ್‌ಟೆನ್ಷನ್ ಆಫೀಸರೂ ಮತ್ತು ಕೋ-ಆಪರೇ ಟೀವ್ ಎಕ್ಸ್‌ಟೆನ್ಷನ್ ಆಫೀಸರು. ಈ ಇಬ್ಬರಿಗೂ ಕೆಲಸ ಮತ್ತು ಜವಾಬ್ದಾರಿಗಳು ಜಾಸ್ತಿಯಾಗಿರು ತ್ತವೆ. ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಆಫೀಸರಿಗೆ ಏನಂದ್ರೆ ಏನೂ ಕೆಲಸ ಇಲ್ಲ. ಆದರೆ ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಆಫೀಸರಿಗೆ ಕೊಡತಕ್ಕ ಸಂಬಳಕ್ಕೂ ಕೋ-ಅಪರೇಟೀವ್ ಎಕ್ಸ್‌ಟೆನ್ಷನ್ ಆಫೀಸರಿಗೆ ಕೊಡತಕ್ಕ ಸಂಬಳಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇನ್ನಾದರೂ ಒಂದೇತರಹ ಕೆಲಸ ಮಾಡತಕ್ಕವರಿಗೆ ಅವರು ಎಲ್ಲೇ ಇರಲಿ ಒಂದೇತರಹೆಯ ಸಂಬಳದ ಸ್ಕೇಲು ಗಳು ಇರುವಂತೆ ಮಾಡಿದರೆ ಆಗೇನಾದರೂ ಈ ಕೆಲಸ ಕಾರ್ಯಗಳು ಉತ್ತಮವಾಗಬಹುದೇನೊ ಅಂತ ಅನಿಸುತ್ತದೆ.

(ಶ್ರೀ ಟಿ. ಎಚ್. ಮಾದಪ್ಪಗೌಡ)

ಈಗ ಡಿ. ಸಿ. ಮತ್ತು ಅಡಿಷನಲ್ ಡಿ. ಸಿ. ಗಳನ್ನು ನೇಮಿಸಲಾಗಿದೆ. ಆದರೆ ಹೀಗೆ ಒಂದೇ ಕಡೆ ಇಬ್ಬರು ಅಧಿಕಾರಿಗಳಿರಲು ಅವಕಾಶ ಅವಶ್ಯಕತೆ ಇದೆಯೇ-ಇಲ್ಲವೇ ಅನ್ನುವವಿಚಾರ ನನಗೊಬ್ಬನಿಗೇ ಏಕೆ ಹೀಗೆ ಒಬ್ಬರು ಇರುವ ಕಡೆ ಇಬ್ಬರಿದ್ದರೆ ತೊಂದರೆ ಏನಾಗುತ್ತದೆ ಎಂಬ ವಿಚಾರ ಕೇವಲ ಒಬ್ಬಂಟಿಗರಾಗಿ ಗಂಡ ಹೆಂಡತಿಯರು ಇರುವ ಸಂಸಾರಗಳನ್ನು ಬಿಟ್ಟು ಇನ್ನು ಹತ್ತಾರು ಜನಗಳಿಗತಕ್ಕಂಥಾ ತುಂಬ ಕುಟುಂಬದವರಿಗೆಲ್ಲ ಇದು ಅರ್ಥವಾಗುತ್ತದೆ. ಅದ್ದರಿಂದ ಈಗ ಈ ಅಡಿಷನಲ್ ಡಿ. ಸಿ. ಗಳನ್ನು ತೆಗೆದುಬಿಡುವುದು ಒಳ್ಳೆಯದೆಂತ ಹೇಳಬೇಕೆಂಬುದಾಗಿ ನಾನು ತಿಳಿಸಲು ಇಷ್ಟಪಡುತ್ತೇನೆ.

ಇನ್ನು ಅಂಟಿಕರ್‌ಪ್‌ಷನ್ ಡಿಪಾರ್ಟ್‌ಮೆಂಟ್ ಏನಿದೆ ಇದಕ್ಕೆ ಜನರನ್ನು ರೆಕ್ರುಯಿಟ್‌ಮೆಂಟ್ ಮಾಡಿಕೊಳ್ಳುವ ಪದ್ಧತಿ ಸುತ್ರಾಂ ಸರಿಯಿಲ್ಲ. ಯಾರು ಪೋಲೀಸ್ ಇಲಾಖೆಯಲ್ಲೂ-ಇಂಜಿನಿಯರಿಂಗ್ ಇತ್ಯಾದಿ ಇಲಾಖೆಗಳಲ್ಲಿ ಲಂಚತೆಗೆದುಕೊಳ್ಳುವುದರಲ್ಲಿ ಪಳಗಿದ ಧೀರರಿದ್ದಾರೋ ಅಂಥಾವರನ್ನೇ ಆರಿಸಿ ಈ ಇಲಾಖೆಗೆ ಹಾಕುತ್ತಿದ್ದಾರೆ. ಇದು ತೋಳ ಕುರಿಕಾಯುವುದಕ್ಕೆ ಸಂಬಳವೇ ಬೇಡ ಎಂತ ಹೇಳಿದಹಾಗಿದೆ.'

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮಾನ್ಯ ಮಂತ್ರಿಗಳು ಇತ್ತಕಡೆಗೆ ಸ್ವಲ್ಪ ಗಮನ ಕೊಡಬೇಕು. ಮಹತ್ವದ ವಿಚಾರ ಹೇಳುತ್ತಿದ್ದಾರೆ........

ಶ್ರೀ ಬಿ. ಡಿ. ಜತ್ತಿ.—ನಮ್ಮ ಜವಾಬ್ದಾರಿಯೇನೆಂಬುದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರಿಂದ ನಾವು ಪಾಠಕಲಿಯುವ ಅವಶ್ಯಕತೆಯಿಲ್ಲ.

ಶ್ರೀ ಟಿ. ಎಚ್. ಮಾದಪ್ಪಗೌಡ.—ಈ ಇಲಾಖೆಯನ್ನು ಸರ್ಕಾರದವರು ಇಟ್ಟುಕೊಳ್ಳಲೇಬೇಕೆಂದಿದ್ದರೆ-ಈ ಇಲಾಖೆಗೆ ಯಾರು ಮಾನಸಿಕವಾಗಿ, ಧರ್ಮ-ನೀತಿ ನ್ಯಾಯಗಳ ಕಡೆಗೆ ಹೆಚ್ಚು ದೃಷ್ಟಿಯಿರುತ್ತದೋ ಅಂಥವರನ್ನೇ ಆರಿಸಿ ಹಾಕದೆ ಹೋದರೆ ಈ ಲಂಚಗುಳಿತನವನ್ನು ತಪ್ಪಿಸುವುದು ಬಹಳ ಕಷ್ಟವೆಂತಲೇ ನನಗೆ ಕಾಣುತ್ತದೆ. ಈ ಇಲಾಖೆಗೆ ಆರಿಸಿಕೊಳ್ಳತಕ್ಕ ಬುದ್ಧಿವಂತ ಜನಗಳು ಧರ್ಮ-ನೀತಿ-ನ್ಯಾಯದಲ್ಲಿ ನಡೆಯತಕ್ಕವರು ಯಾರಿದ್ದಾರೋ ಅಂಥವರಿಗೆ ಕೈತುಂಬ ಸಂಬಳ ಕೊಟ್ಟು ಇಲ್ಲಿ ಕೆಲಸಕ್ಕೆ ನೇಮಿಸಿದಲ್ಲಿ ಆಗೇನಾದರೂ ಸ್ವಲ್ಪ ಮಟ್ಟಿಗೆ ಈ ಇಲಾಖೆ ಉತ್ತಮ ರೀತಿಯಲ್ಲಿ ಕೆಲಸ ನಡಿಸೀತೋ ಅದೂ ಇಲ್ಲವೊ ಎನ್ನುವುದನ್ನು ಹೇಳುವುದಕ್ಕೆ ಪೂರಾ ಅನುಮಾನವಾಗುತ್ತದೆ. ಆದರೆ ಈ ಆಂಟಿಕರಪ್‌ಷನ್ ಇಲಾಖೆಯನ್ನು ತಾವು ಎಲ್ಲೀವರೆಗೆ ಅಸ್ತಿತ್ವದಲ್ಲಿ ಇಟ್ಟುಕೊಂಡಿರುತ್ತೀರೋ ಅಲ್ಲಿಯವರೆಗೂ ನಮ್ಮ ಜನರಲ್ಲಿ ನಮಗೇ ವಿಶ್ವಾಸವಿಲ್ಲ ಎಂಬುದನ್ನು ನಾವೂ ಅವರೂ ಹೊರಗಿನವರಿಗೆ ಹೇಳಿಕೊಟ್ಟಂತೆ ಆಗುವುದು. ಇದನ್ನು ಬೇರೆದೇಶದವರು ನೋಡಿದರೆ ನಮಗೆ ನಾಚಿಗೆಗೇಡಿನ ಪ್ರಶ್ನೆಯಾಗಿದೆ ಇದು.

ಇನ್ನು ನಮ್ಮ ಸರ್ಕಾರದವರು ಈ ಎಕಾನಮಿ ಮೆಷರ್ಸ್‌ಗಳನ್ನು ಬಹಳ ಕಟ್ಟುನಿಟ್ಟಾಗಿ ಜಾರಿಗೆ ತರುವುದರ ಮೂಲಕ ಅನಾವೃತ್ತ ವೆಚ್ಚಗಳನ್ನು ನಿಲ್ಲಿಸಿ ರೈತರಮೇಲೆ ಹೆಚ್ಚಿನ ತೆರಿಗೆ ಭಾರ ಹೇರತಕ್ಕದ್ದನ್ನು ಸಂಪೂರ್ಣವಾಗಿ ಕೈಬಿಟ್ಟು ಹಣವನ್ನುಳಿಸಿ ದೇಶಕ್ಕೆ ಒಳ್ಳೆಯದನ್ನು ಮಾಡಬೇಕೆಂದು ಹೇಳಿ ನನಗಿಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri V. S. PATIL** (Belgaum-I).—This subject of 'General Administration' covers practically every Department of administration. It is a very big affair and as it is too big, it has become too chaotic. All the speakers on the floor of this House since 1956, that is, the integration of State, have been complaining against the general administration with one voice. Several Committees and efficient men were appointed to tone up the working of the administration. They have gone through the records, examined cases and have given their opinions and those opinions are to be found in several books. One such Committee was the Resources and Economy Committee. On that Committee, Government have spent about Rs. 80,000. That document was discussed on the floor of this House.

Sir, the main grievance about the General Administration starts from the Secretariat or I must say the Chief Secretary and runs down to the Shanbogue. It has become very difficult for the Government servants serving or who have spent their lives or their whole energy in the service of the State and they also complain against this particular Government. We have made several suggestions on the floor of this House in order to improve the work in this department which is the controlling authority for the administration of the whole State. I had put a question about the number of writ petitions filed by Government servants and those who sought Government service since Reorganisation of States. Unfortunately it has not been answered. I would like to know whether the Government have complied with the orders passed by the Government and in how many cases. That question is yet to come before the House. If that question had been answered, then certainly, Sir, some enlightenment would have been thrown on the position of this particular department.

4-30 P.M.

Sir, I know of a particular case from my own place, where an efficient officer was superseded. He was forced to go to a Court of Law to get his rights established.

MR. DEPUTY SPEAKER.—I suppose it is not pending in the Court.

SRI V. S. PATIL.—It is not pendi. It has been decided. I am not such a person as to take up a matter which is prevented by law from speaking here. The High Court has gone through the whole case, studied the merits and demerits and have given a direction to the Government to ractify the mistake committed by them. Have they done it? I should like to ask the Hon'ble Minister in charge of this department. I should like to refer, not in name, but only to the number of the petition, under which the Government have been directed to do a particular thing. The number of the Writ Petition is 1456/61. In this the Hon'ble High Court has given a specific direction to do a particular thing and I should like to ask this Government whether they have complied with this request as yet, and, if not, why should there be no order from the High Court to prosecute either the Chief Minister or the Chief Secretary for contempt of Court. If these things are not done by the Court, I think there will be no remedy or the orders passed by the High Court will have no validity at all. So, the High Court must be empowered by some law—I feel my friend the Hon'ble Minister for Law will agree with me that the orders of the High Court or the Judiciary must be executed by the......

SRI M. V. RAMA RAO.—On a point of clarification, I may assure the Hon'ble Member in particular and the House in general that every order of the High Court which is not taken up in appeal to the Supreme Court is carried out. There is no question of any public authority disregarding the direction of the High Court in the exercise of its judicial authority.

Sri V. S. PATIL.—In this particular matter, even though the High Court has given a mandamus to do a particular thing, up till now, the Government have not done it. They want to take this matter piecemeal. I submit that the orders must be carried out to its spirit and to its letter. It must be carried out fully. By these things, what I am hinting at is, that they have not only displeased the persons who are concerned with the matters in the administration, they are displeasing everybody who is working here. That is the whole thing that has come out of it. Everybody is displeased, whether he is a servant, whether he is a legislator or whether he is a man of the public. Everybody has become displeased with administration. I do not understand when our Ministers are going to look into such serious matters, which are hampering the prestige of administration. If they do not—I have suggested several times to look into these matters early to rectify these mistakes—then the result will be that the people will have to choose somebody else. When we were children, we have read this story. A clerk came late to the office. George Washington said that he was late. The clerk replied that he had not come late and that according to his watch, he had come in time. Then what he said was—'either you will have to change the watch or we will have to change the clerk'.

[MR. SPEAKER in the Chair]

Similarly, if the Ministers or the present Government do not do their duty properly, if they don't improve, then the people will have to say—'we will have to change Ministry or you change your ways'. The matter has gone to this stage. I appeal to the Ministers concerned to set the matters right. Several times, I have said on the floor of the House that a rule should be made in the Secretariat that no paper or file remains on the table of a particular individual for more than a particular prescribed time, say two or three days, one week or two weeks, a prescribed time limit as is done in the Bombay Secretariat. If you do it, certainly matters will move automatically and no complaints will be received. But here, as several Hon'ble Members have stated, papers do not appear on the table unless, some under hand dealing is done. This has become too much. We are tired of attacking the Government on this count. For the last six years, everybody is denied something. That is why, I should like to request the Government to rectify the mistakes, at least in the case of those where there is an order of the Hon'ble High Court. Similarly Sir, some probationery candidates for services were not cared for and they approached the High Court. The High Court has given an order. I think the Government have given an undertaking to the High Court to make provision for these persons. Uptill now, nothing has been done. Why is this going on? Is this the way in which we expect to respect the orders of the Judiciary? If we neglect the Judiciary, then there is nothing. Yesterday our friend the Hon'ble Law Minister stated that there are three independent bodies and their orders must be carried out. Even now, he has stated..........

Sri M. V. RAMA RAO.—If Hon'ble Member wants to quote me, he must take the pains to remember what was said. I did not say that there were three independent bodies.

Sri V. S. PATIL.—Sir, our whole structure of the administration depends on three bodies, the Judical, the Executive and the Ligislature. The powers of these three bodies are distinct. It is defined in the Constitution as well as by law. That was the stand taken by him. That is why one body should not go on criticising the other. That was the main theme which my friend had argued on yesterday. When a judiciary passes orders, gives a directive to the Executive, and the Executive has undertaken to carry out those orders, then why should the administration keep quiet for months together, and ask the people to come here, not once or twice but hundreds of times to see the secretaries and under-secretaries ? This is nothing else but hampering and lowering down the prestige of the Government. I am not saying this with a view to criticise the Government, but to see that such things are carried out immediately without any sort of hindrance and without any trouble. What the present administration is doing is known to everybody. It is not like an electric light here. It is just like sunlight outside. These matters must be rectified immediately. Otherwise, there is no other go but to say—push out the present Treasury Benches and appoint somebody else here. That is the position to which you have come. That should not happen, because all of them are our friends. That is why I say that they should rectify these things, because it is within their power. Why should they not do it ? That is why I am saying these words.

I would like to say one word regarding our Legislature. I have stressed the point of making our Legislature more important, more independent and more responsible. There is a provision in the Constitution to pass a law, making this Legislature independent body of the Executive. At present, we are practically a branch of the Law Secretariat for all appearance. We hear......

Mr. SPEAKER.—The Hon'ble Member need not develop that point much, because I have taken up the matter with the Government and it agrees that the Legislature should be independent.

Sri V. S. PATIL—That was my request for the last three years and if it is carried out, I will be most thankful to you, Sir. as well as to the Government.

Mr. SPEAKER.—Please thank the Government and not me.

Sri V. S. PATIL.—One more thing is, a few minutes before our friend, Sri Vidydhar Guruji spoke in Hindi in such an excellent language that his speech should be in someway recorded. Unfortunately, our Government has become indifferent to provide a Hindi Reporter.

Mr. SPEAKER.—The Hon'ble member can ask him to give me the gist of his speech and we will record it.

With regard to the reporting of Marathi and Hindi speeches, I have been desirous of having a Reporter. In fact, one of the Members from the Hyderabad-Karnatak area had stated that these Reporters were available. Get him to me and I will employ him.

Sri N. O. SAMAJI (Belgaum II).—(Marathi)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಟೇಪ್ ರಿಕಾರ್ಡಿಂಗ್ ಮಾಡಿದರೆ ಅನುಕೂಲವಾಗುವುದಿಲ್ಲವೆ, ಸ್ವಾಮಿ ?

Sri V. S. PATIL.—The difficulty is that unless the Government moves in the matter no private effort will be successful, because somebody is to be brought either from Hyderabad area or from Bombay area.

Mr. SPEAKER.—I will see that the post is advertised and we will get......

Sri V. S. PATIL.—My submission is that somebody must be there to record speeches in Hindi and Marathi, as the script is the same for both. This much effort should be made so far as our Marathi and Hindi brothers are concerned.

Regarding the expenditure on Ministers, etc., so many Hon'ble Members are saying. So, I need not take much time of the House.

Mr. SPEAKER.—That is highiy proper.

Sri K. S. SURYANARAYANA RAO (Mysore City).—Sir, My friends have stressed the importance of quick disposal. I do not wish to say much about it, but I would like to bring to the notice of this House things are delayed at times. In one of the Departments, when the matter was brought to the notice of the Head of the Department that a particular report has been received in his office, he politely said: "it may require atleast 25 days for the paper to come to me". It is a small office. It is an office which can dispose of these papers early, but still, it takes for the officer to get at the paper so much time. That shows that there must be something wrong somewhere. It may be that we are not paying as much attention as we ought to, to see to these things. There is so much of over-crowding or over-lapping and the consequence being 'delay'. Therefore, I request the Government to see how far they could go in speeding up matters.

I would like to quote another instance. A teacher of a High School retired some two years ago. Till to-day nothing has been done to settle his pension, etc. He is urging: "give me something substantial", but nothing is done. It is only when the matter was brought to the notice of the Minister - it is yesterday if I may say, he promised that some substantial relief would be given. Why I say is this. He is a person who has put in 25–30 years of loyal service and when he retires if he does not get the emoluments or the pension, gratuity and other things that he is entitled to, in time, what would happen ? He may not have adjusted to the circumstances and under such circumstances, it becomes rather hard for him. I know, the Finance Minister is interested in settling such cases very early. There are instances of this kind, which are inordinatly delayed, and I only wish that some device is thought of whereby such delays could be avoided. Other things, I do not wish to say because our friends have already mentioned about the delay-the circutus way the things move.

The other point, I would like to mention, is this. The Government is making earnest attempts at economy, and of course we see from the

Budget figures that some reduction is shown in every 'Head'. For example, in the Budget estimates of last year-item No. 1-Rs. 18 lakhs and odd had been provided for the President, etc., which has been slightly reduced this year. Likewise, almost in every branch, we find that there has been little reduction. It may be 5 to 10 per cent or even less. This is not sufficient; it is something like a general reduction in a particular way. There is scope for further economy. Even though they provide so much in the Budget-for example, under the head 'Hospitality', the provision made for the maintenance of Guest Houses is about Rs. 3,75,000, they may not spend all that, because in the revised estimate for last year it was Rs. 3,90,000 though Rs. 4,13,000 was provided. I know, they would not spend all that is provided. That is why they come to this House with Supplementary Demands, with Reappropriation and all that. We know all that; but, still if there is provision made in the Budget and if it is not spent, that is all right. But, when there is provision, there is the likelihood, almost in every case, of spending out rather than not using it. In some cases, though we provide, we may not use it, but in a majority of cases, since it is provided, we will spend it. As a matter of fact, in matters of Government House entertainment, hospitality, etc., there is scope for larger economy, if not in other Departments. Those are the things that could be pruned-the Budget could be pruned, and the expenditure could be pruned in many ways.

About the delay, if we look at the report of the Public Service Commission-in one case the report of the Public Service Commission was communicated to this Government as early as 1959 and till to-day the Government have not taken a decision. I would only request the Government to think over......

Sri B. D. JATTI.—What is that delay ?

Sri K. S. SURYANARAYANA RAO.—I will give you, if you want-it is here.

The P.S.C. sent its report on the matter referred to it in respect of, if I remember correctly about an Executive Engineer. In the case of that Executive Engineer, it is said confidential papers were called for by the P.S.C. in the matter of his being promoted; and that was the case referred to the P.S.C. in the year 1959. Till today, things have not moved. The P.S.C. has not been furnished with the confidential records of that Asst. Engineer who was promoted. Sir, I am guided by the report of the year 1960.

Sri B. D. JATTI.—Within these two years that have passed, the Hon'ble Member must know what has happened between the Govt. and the P.S.C. It is not correct to rely upon that old report.

Sri K. S. SURYANARAYANA RAO.—Sir, I am grateful for the correction by the Hon'ble Finance Minister.

Sri B. D. JATTI.—The latest position could be got from the Government. If the Hon'ble Member wants any information, we can give it. There is no difficulty.

Sri K. S. SURYANARAYANA RAO.—It is not a matter of my wanting Sir. It is a matter of right that the Members should be supplied with the copy of the latest report.

Mr. SPEAKER.—If Hon'ble Members want to make any charge against the Government, they must verify the facts, bring their information up to date and then make statements on the floor of the House.

Sri K. S. SURYANARAYANA RAO.—I think the Hon'ble Speaker will kindly pardon me if I say we have our own limitations. We have got to rely on the replies furnished by the Government. So far as I am concerned, so far as the information is concerned, I think I considered that as the latest position. And I spoke on that basis.

But I am only making a suggestion to the Government that if this is the state of affairs, it should be improved.

Mr. SPEAKER.—Now it is clear.

Sri K. S. SURYANARAYANA RAO.—I have got to say this Sir: One book I have got from the library he says that it is the latest. That relates to 1960. Looking at that report, I though there has been a delay of 2 years. That is why I said there has been delay. It has got to be admitted. Let alone the particular case I referred to. What about giving the report to the members. We are voting the grant in connection with the P.S.C. But we do not know what work they have turned out during 1961-62. We are a only guided by the past reports and we are only making *post mortem* examination. That should not happen.

Sir, another thing about the P.S.C. is, this morning I learnt about certain recruitment that was proposed to be outside the P.S.C. Sir, our Constitution has a scheme to work and if I may say so, it has a definite purpose to serve. The Constitution says that there shall be certain offices which are outside the purview of the State Governmental influence. One such is judiciary. We do not interfere with the judiciary because it is expected that the judiciary should point out the mistakes the executive commit or the bad laws that the legislature may pass or the inaccuracies that may be there or the injustices that may have been committed. That is the function of the judiciary and we are not interfering. Likewise, the Constitution makes a provision for the appointment of the P.S.C. The sanctity of the office of the Chairman of the P.S.C. is such that the holder of that office is debarred from holding any position after retirement. That shows that he must be a man above the considerations of influence or prejudicies or he must be beyond approach-above board. Sir, a member of the P.S.C. is likewise is not entitled to hold any office under the State in which he was member of the P.S.C. The idea is that he is entitled to make selection for the services of the State and he is expected to act in a judicious manner in such impartial way that he has got to keep himself away from the influences and forces that might work in matters of selection. Sir, that is the purpose for which the P.S.C. has been

created. If we are to take away from the purview of the P.S.C. and if the P.S.C. is not given the due place it deserves, then the purpose of the Constitution making the P.S.C. away from the approach of the ordinary influence and pulls, is lost. To that extent, if we take away any power of recruitment from the P.S.C. then there is no sanctity attached to it. Otherwise, what happens is we are working under a democratic constitution; there is the association of people at every level of administration; and therefore we cannot expect 100 per cent, selecting officers keeping themselves away from the public opinion. Sir, it is very likely that it may be political influence or it may be personal influence or it may be local influence, because in matters of selection-supposing it is a divisional selection, it is very likely that the public may have access to local officers. The common man has an approach to these officers one way or the other. But the Members of the P.S.C. have got their own advantages that way and that is the reason why the P.S.C. alone should look into these matters. Therefore, if the recruitment is allowed to handled by an agency other than the P.S.C. the chances of fairness may become dim even though they do justice, it is not only that justice should be done but must also appear to be done.

SRI B. D. JATTI.—If the Hon'ble Member yields, the recommendation of the P.S C. is not final. It is the Government which has to take final decision. If you have faith in the Government, why are you bothered about the P.S.C. ?

SRI K. S. SURYANARAYANA RAO.—I understand the logic behind it Sir. I fully share the view of the Government. I don't think they suggest doing away with P.S.C. It is not as if the P.S.C. lists are final. It only makes recommendations to the Government and it is the executive Government that has to actually make the appointments. Why we should rely on a special agency to do it is this: The State Government can justify themselves by saying that what they have done is justice. We have experts to handle this and we have approved it, and if it is challenged in the court we cannot help it. So, Sir, though it is recommendatory in nature, it is also mandatory to a certain extent. I think the State Government will not ordinarily do anything other than what is suggested by the P.S.C. Otherwise what happens is, we are seeing today so many writ petitions being filed-most of them will be in relation to seniority, or demotion or suspension or increment and so forth. Service writs are much more than other things. Why? Because the Executive authorities by themselves may not be able to take decisions correctly as they are persons administering the departments. So, they may not see reason. If it were the agency other than the Executive Government, then they would put their heart and thought and do it. Therefore, it is in the best interest of the State, in the best interest of the services and in the best interest of efficient administration that the Executive authority should have very little to do with the selection of the service personnel and the Public Service Commission should have all the powers. For that matter Sir, if we

(SRI K. S. SURYANARAYANA RAO)

see the Report of 1960, the Public Service Commission has not done much work because they have not been given much work. They say that so many things are held up in the matter of recruitment. If that is so, there is nothing wrong in extending that Body and giving them work if they are over-worked.

5-00 P.M.

Mr. SPEAKER.—The Hon'ble Member may conclude. At 5-30 P.M. the Government will reply; it will give them 1½ hours. Now, Sri Gopala Gowda may speak for only 15 minutes.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ''ಸಾಮಾನ್ಯ ಆಡಳಿತ ಮತ್ತು ಸಂಪತ್ತು ಮತ್ತು ರಾಜ್ಯದ ವಿಧಾನಮಂಡಲಗಳು'' ಈ ಎರಡು ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು ಏನು ಹಣವನ್ನು ಬೇಡಿದ್ದಾರೆಯೋ, ಅದನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಮಾನ್ಯ ಅಧ್ಯಕ್ಷರು ಈಗ ತಾನೆ ಅಪ್ಪಣೆ ಕೊಡಿಸಿದರು. ಶಾಸಕಾಂಗವನ್ನು ಕಾರ್ಯಾಂಗದಿಂದ ಸಂಪೂರ್ಣವಾಗಿ ಬೇರ್ಪಡಿಸಿ ಅದನ್ನು ಸ್ವತಂತ್ರವಾಗಿ ನಾವು ನಡೆಸಿಕೊಂಡು ಹೋಗುವುದಕ್ಕೆ ವ್ಯವಸ್ಥೆಗಳನ್ನು ಮಾಡಲಾಗುತ್ತಾ ಇದೆ ಎಂದು. ಅದು ಬಹಳ ಸ್ವಾಗತಾರ್ಹವಾದ ಒಂದು ಹೆಜ್ಜೆ ಅಂತ ಹೇಳಿ ನಾನು ತಿಳಿದುಕೊಂಡಿದ್ದೇನೆ. ಈ ಗೃಹಕೃತ್ಯದ ಬಗ್ಗೆ ಚರ್ಚೆ ಮಾಡಬಾರದು ಅನ್ನುವ ಒಂದು ಸಂಪ್ರದಾಯ ಬಂದಿದೆ. ಆದ್ದರಿಂದ ನಾನು ಈ ವಿಷಯದ ಬಗ್ಗೆ ಟೀಕೆಯನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ನಾನು ನನ್ನ ಖೋತಾ ನಿರ್ಣಯಗಳನ್ನು ಒಂದೊಂದಾಗಿ ಒತ್ತಾಯಪಡಿಸುವುದಕ್ಕೆ ಇಷ್ಟಪಡುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ನಾನು ಹೇಳಬೇಕೆಂದು ಇಚ್ಛೆಪಡುತ್ತೇನೆ.

ಆ ''ಆಡಳಿತ'' ವಿಷಯದಲ್ಲಿ, ಸಾಮಾನ್ಯವಾಗಿ ತೃಪ್ತಿಕರವಾಗಿಲ್ಲ ಅನ್ನುವ ಒಂದು ಟೀಕೆ ಬಹಳ ದಿವಸದಿಂದ ಬರುತ್ತಾ ಇದೆ. ಸಾಮಾನ್ಯವಾಗಿ ನೋಡಿದ್ದೆ ಆದರೆ, ಪ್ರೊಫೆಸರ್ ಹ್ಯಾರ್ಲ್ಡ್ ಲ್ಯಾಸ್ಕೀ ಎಂಬ ಒಬ್ಬ ಪರಕೀಯರು ಈ ವಿಚಾರದಲ್ಲಿ ಒಂದು ಮಾತು ಹೇಳಿದರು, ಅದನ್ನು ಇಲ್ಲಿ ಉಚ್ಚರಿಸುತ್ತೇನೆ. ನಮ್ಮ ದೇಶದ ಆಡಳಿತ ಹೇಗಿದೆಯೆಂದರೆ, ಬ್ರಿಟಿಷ್ ಸಾಮ್ರಾಜ್ಯಷಾಹಿ ಗೋರಿಮೇಲೆ ಕುಳಿತು ಆಡಳಿತ ಮಾಡುತ್ತಿರುವ ಪ್ರೇತದಂತೆ ಇದೆ. ಅವರು ಬಹಳ ಕಟುವಾಗಿ ನೊಂದು ಹೇಳಿದ್ದಾರೆ. ಇದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಜನತಂತ್ರವಾದ ಮೇಲೆ ಏನು ಬದಲಾವಣೆಯನ್ನು ಕಾಣಬೇಕಾಗಿತ್ತೋ ಅದನ್ನು ನಾವು ನೌಕರ ಷಾಹಿಗಳಲ್ಲಿ ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ಶ್ರೀಮಾನ್ ಅಡಿಗರು ಈ ವ್ಯವಸ್ಥೆಯನ್ನು ನೋಡಿ ತಮ್ಮ ಒಂದು ಕವನದಲ್ಲಿ ತುಂಬ ನಿರಾಶೆಯಿಂದ, ''ಹೆಳವನ ಮೇಲೆ ಕುರುಡ ಕೂತಿದ್ದಾನೆ, ದಾರಿ ಸಾಗುವುದೇ ನೋಡಬೇಕು'' ಎಂದು ಹೇಳುತ್ತಾರೆ. ಅವರು ತೀರ ನಿರಾಶಾದಾಯಕವಾಗಿ ಹೋಗಿದ್ದಾರೆಂದು ಕಾಣುತ್ತದೆ. ಅದಕ್ಕೆ ನಮ್ಮ ಚನ್ನಪಟ್ಟಣದ ಮುಖಂಡರು ಕೆಲವು ವಾಸ್ತವ ವಿಷಯಗಳನ್ನು ತಿಳಿಸಿದರು. ಎ. ಜಿ. ಆರ್. ಸಮಿತಿಯವರು ಈ ನೌಕರ ಷಾಹಿ ಪ್ರೊಸೀಜರಲ್ ವಿಳಂಬ ಮಾಡಿ ಹೇಗೆ ಕೆಲಸವನ್ನು ನಿರ್ವಹಿಸುತ್ತಾ ಇಲ್ಲ ಅನ್ನುವುದನ್ನು ಬರೆದಿದ್ದಾರೆ. ಅದನ್ನು ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಒಟ್ಟಿನಲ್ಲಿ ಇವತ್ತು ಕೆಲಸವಾಗಬೇಕು, ಹೆಚ್ಚು ಜವಾಬ್ದಾರಿಯನ್ನು ಅಧಿಕಾರಿಗಳು ಹೊರಬೇಕು, ಕೆಲಸದ ಹಂಚಿಕೆಯಾಗಬೇಕು ಮತ್ತು ಉತ್ತಮ ಜವಾಬ್ದಾರಿಯಿಂದ ಪ್ರತಿಯೊಬ್ಬರೂ ಕೆಲಸಮಾಡಬೇಕು. ಇದು ಬಹಳ ಅಗತ್ಯವಾದಂಥ, ಈ ಒಂದು ಕಾಲಕ್ಕೆ ಬೇಕಾಗಿರತಕ್ಕಂಥ ಮಾರ್ಪಾಡು ಇಷ್ಟನ್ನಾದರೂ ಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ.

ಮಂತ್ರಿಗಳ ಪ್ರವಾಸದ ಬಗ್ಗೆ, ಬೇರೆ ವಿಷಯದ ಬಗ್ಗೆ, ಒಂದೊಂದರ ಬಗ್ಗೆಯೂ ಬೇರೆ ಮಾನ್ಯ ಸದಸ್ಯರು ಹೇಳಿದ್ದಾರೆ. ಲೋಕಸಭೆಯಲ್ಲಿ ಈಚೆಗೆ ಕೇಂದ್ರ ಮಂತ್ರಿಗಳ ಖರ್ಚಿನಲ್ಲಿ ವಿದ್ಯುಚ್ಛಕ್ತಿ ಬಿಲ್ಲು ಬಹಳವಾಗಿದೆ ಎನ್ನುವುದು ಬಂದಿದೆ. ಈ ಬಗ್ಗೆ ನಾವು ನಮ್ಮ ಟೀಕೆಯನ್ನು ದೇವರ ಮುಂದೆ, ಜಗತ್ತಿನ ಮುಂದೆ ಇಟ್ಟಿದ್ದೇವೆ. ನಮ್ಮ ಪ್ರಧಾನ ಮಂತ್ರಿಯವರ ಖರ್ಚು ಒಂದು ದಿವಸಕ್ಕೆ 25 ಸಾವಿರ ರೂಪಾಯಿಯಾಗುತ್ತದೆ ಅಂತ. ಹಾಗೆಯೇ ನಾನು ಹೇಳುವುದಾದರೆ ಈ ದಿವಸದ ಸ್ಥಿತಿಗತಿಗಳಲ್ಲಿ ನಮ್ಮ ಮುಖ್ಯ ಮಂತ್ರಿಗಳ ಖರ್ಚು ಬಹುಶಃ ದಿವಸಕೆ ಐದು ಸಾವಿರ ರೂಪಾಯಿ

ಆಗಬಹುದು. ಅದನ್ನು ಕೂತು ಲೆಕ್ಕಾಚಾರ ಮಾಡೋಣ. ಈ ಖರ್ಚುಗಳು ಹೆಚ್ಚಾಗಿ ಆಗ ಬಾರದು. ಅದರಲ್ಲಿಯೂ ಗಾಂಧಿ ಹೆಸರಿನಲ್ಲಿ ಮತ್ತು ಕಾಂಗ್ರೆಸ್ಸಿನ ಹೆಸರಿನಲ್ಲಿ ಸರಳ ಜೀವನಕ್ಕೆ ಹೆಸರಾಗಿರತಕ್ಕಂಥವರು, ಮತ್ತು ದುಂದು ವೆಚ್ಚವನ್ನು ಮಾಡುವುದಿಲ್ಲವೆಂದು ಹೇಳತಕ್ಕಂಥವರು ಸಾರ್ವಜನಿಕ ಹಣವನ್ನು ಉಪಯೋಗಿಸುವಾಗ ಖರ್ಚು ಮಾಡುವ ರೀತಿ ನಿಮಗೆ ಸಲ್ಲದು. ವಿಧಾನಸಭಾ ಸದಸ್ಯರು ಮತ್ತು ಸಾರ್ವಜನಿಕ ಜೀವನದಲ್ಲಿರುವವರಿಗೆ ಸಲ್ಲದು. ಮೈಸೂರಿನಲ್ಲಿ ಈಗ ಶಾಸಕರಿಗೆ ಹೆಚ್ಚು ಸವಲತ್ತುಗಳನ್ನು ಕೊಟ್ಟಿದ್ದಾರೆ. ಇಷ್ಟು ಕೊಡುವಾಗ ನಮಗೆ ಪುಕ್ಕಟೆ ಮನೆಗಳನ್ನು ಒದಗಿಸುತ್ತಾರೆ. ಬೇರೆ ಕಡೆಗಳಲ್ಲಿ ನಾನು ನೋಡಿದ್ದೇನೆ. ಮದ್ರಾಸಿನಲ್ಲಿ ಮತ್ತು ಬೇರೆ ಕಡೆ ಇಷ್ಟು ಸೌಲಭ್ಯಗಳಿಲ್ಲವೆಂದು ಕೇಳಿದ್ದೇನೆ. ಶಾಸಕರ ಭವನದಲ್ಲಿ 30 ಸಾವಿರ ರೂಪಾಯಿ ಟೆಲಿಫೋನ್ ಬಿಲ್ ಆಗಿದೆ. ನಮ್ಮ ಹುಡುಗರಿಗೆ ಹೇಳುತ್ತಾ ಇರುತ್ತೇನೆ. ಶಾಸಕರ ಭವನಕ್ಕೆ ಹೋಗಿ ಅದನ್ನು ಹೇಗೆ ನಡೆಸಿಕೊಂಡು ಹೋಗುತ್ತಿದ್ದಾರೆನ್ನುವುದನ್ನು ನೋಡಿಬಿಟ್ಟರೆ, ಮೈಸೂರು ಸರ್ಕಾರ ಹೇಗೆ ನಡೆಯುತ್ತಾ ಇದೆ ಎಂದು ನೀವು ತಿಳಿದುಕೊಳ್ಳಬಹುದು ಎಂದು. ಒಂದು ದೊಡ್ಡ ಟೂರಿಸ್ಟ್ ಹೋಟಲನ್ನು ಒಬ್ಬ ಮೇನೇಜರು ಬಹಳ ಸುಸೂತ್ರರಾಗಿ ನಡೆಸುತ್ತಾನೆ. ಯಾವ ಗಿರಾಕಿಯೂ ಅಲ್ಲಿಗೇ ಬರುವಂತೆ ನೋಡಿಕೊಳ್ಳುತ್ತಾನೆ. ಎಷ್ಟು ಸುಲಭವಾಗಿ ನೋಡಿಕೊಳ್ಳುತ್ತಾನೆ. ಒಂದು ಟೆಲಿಫೋನನ್ನು ಹೇಗೆ ನೋಡಿಕೊಳ್ಳಬೇಕು, ಯಾರಾದರೂ ಬಂದರೆ ಅವರಿಗೆ ಸ್ವಾಗತ (ರಿಸೆಪ್‌ಷನ್) ಹೇಗೆ ಕೊಡಬೇಕು. ಪ್ರತಿಯೊಂದರಲ್ಲಿಯೂ ದಕ್ಷತೆ ತೋರಿಸುತ್ತಾನೆ ? ಅವರ ಲೆಕ್ಕಾಚಾರ ಹೇಗೆ ಚೆಕ್ಕು ಮಾಡುತ್ತಾನೆ. ಸರ್ಕಾರ ಈ ಶಾಸಕರ ಭವನವನ್ನು ಹೇಗೆ ನಡೆಸಿಕೊಂಡು ಹೋಗುತ್ತಿದೆಯೆನ್ನುವುದು ನೋಡಿದರೆ, ಅದರ ಮೇಲೆಯೇ ಅದು ಸರ್ಕಾರ ಹೇಗೆ ನಡೆಸುತ್ತದೆನ್ನುವುದು ಕಾಣುತ್ತದೆ. ಇದಕ್ಕೆ ಒಂದು ಮಾತು ಜೋಡಿಸಿ ಹೇಳುತ್ತೇನೆ.

Mr. SPEAKER.—Legislature Home is not under the control of the Government; it is under my control.

ಶ್ರೀ ಎಸ್. ಗೋಪಾಲಗೌಡ.—ಕ್ಷಮಿಸಬೇಕು ನಮ್ಮ ಶಾಸಕ ಭವನದ ಸವಲತ್ತುಗಳ ಬಗ್ಗೆ ಹೇಳುವಾಗ ಗೃಹಕೃತ್ಯದ ಟೀಕೆ ಮಾಡಿಕೊಳ್ಳಬಾರದು.

Mr. SPEAKER.—Even the heavy expenditure you referred to regarding telephone that is under my consideration and I am trying to control it.

ಶ್ರೀ ಎಸ್. ಗೋಪಾಲಗೌಡ.—ಇನ್ನು ಸರ್ಕಾರದವರು ನಮ್ಮ ದೇಶದಲ್ಲಿ ಬಹಳ ದೊಡ್ಡ ದೊಡ್ಡ ಭವನಗಳನ್ನು ನಡೆಸುತ್ತಾರೆ, ಗೆಸ್ಟ್ ಹೌಸ್ ಇಟ್ಟಿರುತ್ತಾರೆ, ಮೈಸೂರಿನಲ್ಲಿ ಎಷ್ಟೋ ಇವೆ. "ಬೃಂದಾವನ" ಇದೆ. "ಮೆಟ್ರೊಪಾಲಿಟನ್ ಹೋಟಲ್" ಇತ್ತು. ಅದನ್ನು ನಡೆಸಲಾರದೆ ಯಾರೋ ಒಬ್ಬರಿಗೆ ಹರಾಜು ಹಾಕಿ ಅವರು ನಡೆಸಿಕೊಂಡು ಹೋಗುತ್ತಾ ಇದ್ದಾರೆ. ಪ್ರಧಾನ ಮಂತ್ರಿಯವರು ಬಂದಾಗ ಮನೆಗಳನ್ನು (ಬಂಗಲೆಗಳನ್ನು) ಏಕೆ ಮುಚ್ಚಿಟ್ಟಿದ್ದೀರ, ಸಾಮಾನ್ಯ ಜನರಿಗೆ ಕೊಡಬಾರದೇ ಎಂದು ಕೇಳಿದರು. ಎಷ್ಟೋ ಕಡೆ ಹೀಗಿದೆ. "ಕೈಲಾಸ" ಮತ್ತು "ವೈಕುಂಠ" ಗಳಲ್ಲಿ ಸಾಮಾನ್ಯವಾಗಿ ಒಳಕ್ಕೆ ಹೋಗುವುದೇ ಕಷ್ಟ.

Mr. SPEAKER.—I suppose, they are under the Board and not under the Government.

ಶ್ರೀ ಎಸ್. ಗೋಪಾಲಗೌಡ.—"ವೈಕುಂಠ"ದಲ್ಲಿ ಒಬ್ಬ ಇಂಜನಿಯರು ಖಾಯಂ ಆಗಿ ಇದ್ದುಬಿಟ್ಟರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವೈಕುಂಠ, ಕೈಲಾಸಕ್ಕೆ ಹೋಗಬೇಕಾದರೆ, ಸ್ವಲ್ಪ ಪುಣ್ಯಶೇಷ ವಿರಬೇಕು. ಇಷ್ಟು ಪಾಪ ಮಾಡಿದರೆ, ಹೋಗುವುದಕ್ಕೆ ಅವಕಾಶವಿರುತ್ತದೆಯೇ ?

Mr. SPEAKER.—I object; he has not earned any sin; he has earned many good things.

ಶ್ರೀ ಎಸ್. ಗೋಪಾಲಗೌಡ.—ಗೆಸ್ಟ್ ಹೌಸ್‌ಗಳನ್ನು ನಡೆಸಿಕೊಂಡು ಹೋಗುವುದರ ಬಗ್ಗೆ ಸರ್ಕಾರ ಗಮನ ಕೊಡಬೇಕು, ಸಾಮಾನ್ಯ ಜನರಿಗೆ ಎಟಕುವಂತೆ ಇರಬೇಕು ಮತ್ತು ಯಾವ ರೀತಿಯಲ್ಲೂ ಕೆಟ್ಟ ವ್ಯವಹಾರ ನಡೆಯಬಾರದು. ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಬೇಕೆಂದು ಹೇಳಿ ಸರ್ಕಾರದ ಗಮನವನ್ನು ಈ ಕಡೆಗೆ ಸೆಳೆಯುತ್ತೇನೆ.

ಅರಮನೆ ರಿಪೇರಿ ಬಗ್ಗೆ ಒಂದು ಕಟ್ ಮೋಷನ್ ಇದೆ. ಈ ವಿಷಯದಲ್ಲಿ ಹಿಂದೆ ಕೇಳಿದ್ದಕ್ಕೆ ಬೆಂಗಳೂರಿನಲ್ಲಿರತಕ್ಕ ಅರಮನೆಯನ್ನು ಸರ್ಕಾರದವರು ಕೊಂಡುಕೊಳ್ಳಲು ಉದ್ದೇಶಿಸಿದ್ದು 4

(ಶ್ರೀ ಎಸ್. ಗೋಪಾಲ ಗೌಡ)

ಕೋಟಿ ರೂಪಾಯಿಗಳನ್ನು ಕೊಟ್ಟರು ಎಂದು ತಿಳಿಯಿತು. ಈ ವಿಷಯ ಈಗ ನಮಗೆ ಅಷ್ಟು ಸ್ಪಷ್ಟವಾಗಿಲ್ಲ. ಎಷ್ಟು ಮನೆಗಳು ನಮಗೆ ಸೇರುತ್ತವೆ, ಮಾಜಿ ರಾಜರಿಂದ ಎಷ್ಟು ಮನೆಗಳು ಸರ್ಕಾರಕ್ಕೆ ಬಂದಿವೆ. ಯಾವ ಯಾವುವು ನಮ್ಮ ಹತೋಟಿಯಲ್ಲಿ ಇದೆ. ಯಾವ ಯಾವ ಮನೆಗಳಿಗೆ ನಾವು ರಿಪೇರಿ ಮಾಡಿಸಬೇಕು, ಯಾವ ಯಾವ ಗಾರ್ಡನ್ ಸಾರ್ವಜನಿಕರಿಗೆ ಇಟ್ಟುಕೊಂಡಿರಬೇಕು, ಯಾವ ಯಾವ ಮನೆಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಇದನ್ನೆಲ್ಲಾ ಬಹಳ ಸ್ಪಷ್ಟವಾಗಿ ಹೇಳಬೇಕು. ಕೆಲವರು ಈ ವಿಷಯದಲ್ಲಿ ಮಾತನಾಡಿದರೆ ಸ್ವಲ್ಪ ಹೆದರುತ್ತಾರೆ, ಭಯ ಪಡುತ್ತಾರೆ, ಕೆಲವರು ಸ್ವಲ್ಪ ಭ್ರಮೆ ಪಡುತ್ತಾರೆ, ಕಾರಣವೇನೆಂದರೆ ನಾವು ಒಂದು ಕಾಲದಲ್ಲಿ ರಾಜರ ಅಧೀನದಲ್ಲಿ ಅಥವಾ ದಿವಾನರ ಆಡಳಿತದಲ್ಲಿ ಇದ್ದೆವು. ಇವತ್ತು ಪ್ರಜಾತಂತ್ರ ಇದೆ. ಇವತ್ತು ದೇಶದಲ್ಲಿ ಮಂತ್ರಿಮಂಡಲ ಇದೆ. ಜನಕ್ಕೆ ಜವಾಬ್ದಾರರಾಗಿರುವವರು ಇದ್ದಾರೆ. ಆದ್ದರಿಂದ ಹಣದ ಬಗ್ಗೆ ಎಲೆಕ್ಟ್ರಿಸಿಟಿ ಬಿಲ್ ಬಗ್ಗೆ ಸರ್ಕಾರಕ್ಕೂ ಅವರಿಗೂ ಮಧ್ಯೆ ಕೆಲವು ವಾದ ವಿವಾದಗಳು ನಡೆದು ಬಿಟ್ಟಿಯಾಗಿ ವಿದ್ಯುತ್ ದೀಪ ಜಂಬೂ ಸವಾರಿ ಇತ್ಯಾದಿಗಳಿಗೆ ಹಾಕುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ ಮೇಲೆ ಆ ಬಿಲ್ಲು ಹಾಗೆಯೇ ಉಳಿದಿದೆ ಎಂದು ಕೇಳಿದ್ದೇನೆ. ಜಂಬೂ ಸವಾರಿ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದೇನೆ ರಾಜಕೀಯವಾಗಿ ನಾನು ಏನೂ ಹೇಳುವುದಿಲ್ಲ. ಜಂಬೂ ಸವಾರಿ ವಿಷಯದಲ್ಲಿ ನನ್ನ ಸ್ಪಷ್ಟ ಅಭಿಪ್ರಾಯ ಇದು. ಸರ್ಕಾರದವರು ಅದಕ್ಕೆ ನೆರವು ಆಗಿರಬಹುದು ಆದರೆ ಸಾರ್ವಜನಿಕರ ಹಣ ಆ ನೆರವಿಗೆ ಸೇರಬಾರದು, ಖರ್ಚಾಗಬಾರದು. ಅದಕ್ಕೆ ಏನೂ ಸಂಬಂಧ ಇರಬಾರದು. ಪೋಲೀಸ್ ಕಳುಹಿಸುವಾಗ ಲಾ ಅಂಡ್ ಆರ್ಡರ್ maintain ಮಾಡುವುದಕ್ಕೆ ಕಳುಹಿಸುತ್ತೇವೆ ಎಂದು ಹೇಳುತ್ತೀರಿ. ಅದು ಬೇರೆ ಪ್ರಶ್ನೆ. ಸರಕಾರದವರು ಒಂದು ಟ್ಯಾಬ್ಲೋ ಅಂತ ಹನುಮಂತನ ವೇಷ ಹಾಕಿಸಿ ಆನೇ ಹಿಂದೆ ಕಳುಹಿಸುತ್ತಾರೆ ಇದು ತುಂಬಾ ಅಪಹಾಸ್ಯಕರವಾದ ವಿಷಯ. ಎಕ್ಸಿಬಿಷನ್‌ನಲ್ಲಿ ನೀವು ಕೆಲವು ಹೊಗಳುಭಟ್ಟರಿಗೆ ಪ್ರಾಶಸ್ತ್ಯ ಕೊಡುತ್ತೀರಿ. ಇಂಥಾ ಕೆಲಸಗಳನ್ನು ಕೈ ಬಿಡಬೇಕು ಸ್ವಲ್ಪ ಸ್ವಥತೆ ಬರಬೇಕಾದರೆ ಹಿಂದೆ ಕೊಡುತ್ತ ಇದ್ದ ಶಾಲುಜೋಡಿ, ಲೋಕ ಸೇವಾನಿರತ, ದೀನ ಬಂಧು ಎಂಬ ಬಿರುದಾವಳಿಗಳನ್ನೆಲ್ಲಾ ಈಗ ನಿಲ್ಲಿಸಿದ್ದೇವೆ. ಪುನಃ ಮತ್ತೊಂದು ಬಾಗಿಲಿನಲ್ಲಿ ಅಂಥಾದ್ದಕ್ಕೆ ಪ್ರಾಶಸ್ತ್ಯ ಕೊಟ್ಟು ಕೆಲವು ಹೊಗಳುಭಟ್ಟರನ್ನು ಆಕಾಶಕ್ಕೆ ತೆಗೆದುಕೊಂಡು ಹೋಗತಕ್ಕ ವಿಚಾರಗಳನ್ನು ಕೂಡ ಕೈ ಬಿಡಬೇಕೆಂದು ಹೇಳಿ ಕಟುವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಇವತ್ತು ಬೆಳಿಗ್ಗೆ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ಗೃಹ ಮಂತ್ರಿಗಳು ಸಬ್ ಇನ್‌ಸ್ಪೆಕ್ಟರುಗಳನ್ನು ನಾವು ನೇಮಕ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಪಬ್ಲಿಕ್ ಸರ್ವಿಸ್ ಕಮೀಷನ್ ಬಗ್ಗೆ ಟೀಕೆ ಬಂದಿದೆ. ನಮ್ಮ ಮಾನ್ಯ ಸಭೆಯ ಸದಸ್ಯರಾಗಿದ್ದವರೊಬ್ಬರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಅದಕ್ಕೆ ಅಭಿನಂದಿಸುತ್ತೇನೆ ಎಂದು ಹೇಳಿದರು. ನಾನೂ ಕೂಡ ಅವರನ್ನು ಅಭಿನಂದಿಸುತ್ತೇನೆ. ಇದೆಲ್ಲಾ ಆಗಬೇಕು. ಆದರೆ ಇದು ಒಂದು ಪಕ್ಷದವರಿಗೇ ಮೀಸಲಾಗಿರತಕ್ಕ ವಿಷಯವಾಗಿರುವುದು ಬಹಳ ದುಃಖಕರ ಬರಬರುತ್ತಾ ಪಿ. ಎಸ್. ಸಿ. ಎನ್ನುವುದು ಆಡಳಿತ ಪಕ್ಷದ ಕೈಗೂಸಾಗುತ್ತಾ ಇದೆ. ರಾಜ್ಯಾಂಗ ದತ್ತವಾಗಿರತಕ್ಕ ಸೆಮಿ ಜುಡಿಷಿಯಲ್ ಅಥವಾ ಕ್ವಾಸಿ ಜುಡಿಷಿಯಲ್ ಬಾಡಿ ಎಂದು ಹೇಳಬಹುದು. ಯಾರ, ಯಾವ ರಾಜಕೀಯ ಪಕ್ಷದ ಸೋಂಕೂ ಇಲ್ಲದೇ ಇರತಕ್ಕ, ನ್ಯಾಯವಾಗಿ ನಿಷ್ಪಕ್ಷಪಾತವಾಗಿ ನಡೆಯುತಕ್ಕ ಜನರು ಅದರಲ್ಲಿರಬೇಕಾದ್ದು ಬಹಳ ಅವಶ್ಯಕ. ಮತ್ತು ಅಂಥ ಒಂದು ಸಂಸ್ಥೆ ಯಾವತ್ತೂ ಸಾರ್ವಜನಿಕರ ಟೀಕೆಗೆ ಅನಾವಶ್ಯಕವಾಗಿ ಗುರಿಯಾಗಬಾರದು. ಅದನ್ನು ಕೂಡ ನೋಡಿಕೊಳ್ಳಬೇಕಾದ್ದು ಬಹಳ ಅವಶ್ಯಕ ಇದೆ. ಆದರೆ ಇವತ್ತು ಅದನ್ನು ಕ್ರಮ ಕ್ರಮೇಣ ಒಂದು ರೀತಿಯಲ್ಲಿ ತಮ್ಮ ಕೈಕೂಸನ್ನಾಗಿ ಮಾಡಿಕೊಳ್ಳತಕ್ಕ ಪ್ರಯತ್ನವನ್ನು ಕಾಂಗ್ರೆಸ್ ಪಕ್ಷದವರು, ಸರ್ಕಾರದವರು ನಡೆಸಿದ್ದಾರೆ. ಇದು ಬಹಳ ಅಪಾಯವನ್ನುಂಟುಮಾಡುತ್ತದೆ. ಅವರ ಅಧಿಕಾರವನ್ನು ಕ್ರಮ ಕ್ರಮೇಣ ಕಿತ್ತುಕೊಂಡು, ಸಬ್‌ಇನ್‌ಸ್ಪೆಕ್ಟರು ಬೇಡ, ಬಿ. ಡಿ. ಓ ಬೇಡ, ಇನ್ನೊಬ್ಬ ಬೇಡ, ಮತ್ತೊಬ್ಬ ಬೇಡ ಎನ್ನುವುದು ಇದು ಚೆನ್ನಾಗಿರುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ನೀತಿಯನ್ನು ಅನುಸರಿಸಬೇಕು. ಸರ್ಕಾರ ಯಾವುದೇ ಒಂದು ಹುದ್ದೆಯನ್ನು ಭರ್ತಿ ಮಾಡುವಾಗ, ನೇಮಕ ಮಾಡುವಾಗ ಅದು ಪಿ. ಎಸ್. ಸಿ. ಮೂಲಕ್ ವಾಗಿಯೇ ಬರಬೇಕು. ಸ್ವಥತೆ ಇರಬೇಕು, ಸುಮ್ಮನೆ ಈ ಇಂಟರ್‌ವ್ಯೂ ಹಗರಣ ಮಾಡಬಾರದು. ಬಹಳ ಪ್ರಾಮುಖ್ಯ ಉದ್ಯೋಗ ಕೊಡುವಾಗ ಕಟ್ಟು ನಿಟ್ಟಾದ ನಿಯಮ ಅನುಸರಿಸಿ ಯಾರಿಗೂ ನೋವಾಗದಂತೆ, ಅನ್ಯಾಯವಾಗಿದೆ ಎಂದು ದೇಶ ಭಾವಿಸದಂತೆ ಮಾಡಿಕೊಂಡು ಹೋಗಬೇಕು ಎನ್ನುವುದು ನನ್ನ ಅಭಿಪ್ರಾಯ.

ಇನ್ನು anti-corruption ಬಗ್ಯೆ ಹೇಳಿದ್ದಾರೆ. ಇದು ಏನು ಅನಿಸುತ್ತದೆ ಕೈಕಾಲು ಏನೂ ಇಲ್ಲದೇ ಇರತಕ್ಕ ಯಾರಾದರೂ ಬಂದು ತನ್ನನ್ನು ಮುಟ್ಟಿದರೆ ಹಿಡಿದುಕೊಳ್ಳತಕ್ಕ ವೃಕ್ಷ ಇದ್ದ ಹಾಗೆ ಇದೆ ಎಂದು ಕಾಣುತ್ತದೆ. ಎಲ್ಲಿ corruption ನಡೆಯುತ್ತದೆ, ಎಲ್ಲಿ ಹೋಗಿ ಹಿಡಿಯಬೇಕು ಎಂದು ಪ್ರತಿ ವರ್ಷವೂ ಸಲಹೆ ಕೊಡುತ್ತೇವೆ, ಟೀಕೆ ಮಾಡುತ್ತೇವೆ. ಮಾನ್ಯ ಸದಸ್ಯರು ಈ ಇಲಾಖೆ ತೆಗೆದರೆ ದೇಶ ಸುಭಿಕ್ಷವಾಗುತ್ತದೆ ಎಂದು ಹೇಳಿದರು. ಯಾವುದೋ ದೇಶದಲ್ಲಿ ಅನೇಕ ಪೋಲೀಸರನ್ನು ಡಿಸ್‌ಮಿಸ್ ಮಾಡಿದ ಮೇಲೆ ಕಳ್ಳತನ ನಿಂತಿತಂತೆ. ಆ ರೀತಿ ಆಗಬಾರದು. Anti-corruption ಇಲಾಖೆ ಸರಿಯಾಗಿ ಕೆಲಸ ಮಾಡುವುದಕ್ಕೆ ಜನರು ಸಹಾಯ ಮಾಡಬೇಕೆಂದು ಹೇಳುತ್ತಾರೆ. ಸಹಾಯ ಮಾಡಬಹುದು, ದೂರು ಕೊಡಬಹುದು. ಆದರೆ ಎಷ್ಟೋ ಜನ ಹೇಳುತ್ತಾರೆ ಸಿಮೆಂಟ್ ಸಿಕ್ಕುವುದು ಕಷ್ಟವಾಗಿದೆ ಎಂದರೆ ಶರಾವತಿಗೆ ಬನ್ನಿ 14 ರೂಪಾಯಿ ಕೊಡಿ ಕೊಡುತ್ತೇವೆ ಎಂದು ಕೇಳುತ್ತಾರೆ. ಈ ಕಥೆ ಕೇಳಿದರೆ ಭಯವಾಗುತ್ತದೆ. ಇದು ಬುಡಮಟ್ಟ ಹೋಗಬೇಕು. ಇಂಥಾದ್ದೆಷ್ಟೋ ಹಿಡಿದದ್ದು ಉಂಟು ಎಂದು ಹೇಳುತ್ತಾರೆ. ಪತ್ರಿಕೆಗಳಲ್ಲೂ ಬರುವುದು ಉಂಟು ಆದರೆ ಈ ಕಡೆಗೆ ಸರ್ಕಾರ ಲಕ್ಷ್ಯ ತೆಗೆದುಕೊಳ್ಳದಿದ್ದರೆ ಈ ಲಂಚ ಅಥವಾ ಖುಷುವತ್ತಾ ಏನಿದೆ. ಇದು ಎಲ್ಲಾ ಕಡೆಯೂ ತುಂಬಿ ವಿಷ ವೃಕ್ಷದಂತೆ ಬೆಳೆದು ಜನಜೀವನವೇ ವಿಷಮಯವಾಗಿದೆಯೋ ಏನೋ ಎಂದು ಭಾಸವಾಗತಕ್ಕ ಕಾಲ ಬರುತ್ತದೆ. ಇದರ ಕಡೆಗೆ ಗಮನ ಕೊಡಬೇಕು, ಸರ್ಕಾರದವರಿಗೆ ಸಹಾಯ ಮಾಡಲು ಅವರೇ ಮಾರ್ಗದರ್ಶನ ನೀಡಬೇಕು. ದೊಡ್ಡ ದೊಡ್ಡ ಲಂಚ ಖುಷುವತ್ತುಗಳನ್ನು ನಿಲ್ಲಿಸುವುದಕ್ಕೆ ಎಲ್ಲರೂ ಸೇರಿ ಪ್ರಯತ್ನ ಮಾಡಬೇಕೇ ಹೊರತು ಎಲ್ಲೋ ಒಬ್ಬ ಕಾನ್‌ಸ್ಟೇಬಲ್ ಒಬ್ಬ ಶೇಕದಾರ ಒಬ್ಬ ಗುಮಾಸ್ತನನ್ನು ಏನೋ ಒಂದು ಕಾರಣಕ್ಕಾಗಿ ಅವನನ್ನು ಒಂದು ವಾರ, ಒಂದು ತಿಂಗಳು ಸಸ್ಪೆಂಡ್ ಮಾಡಿದ್ದೇವೆ, ಫೈನ್ ಹಾಕಿದ್ದೇವೆ ಎಂದು ಹೇಳಿದರೆ ಆ ರೀತಿ ವರದಿಯನ್ನು ಬರೆಯುವುದಕ್ಕೆ ಶಿಬ್ಬಂದಿ ಇದೆ. ದೇಶದಲ್ಲಿರತಕ್ಕ ಅನ್ಯಾಯವನ್ನು, ಲಂಚಗುಳಿತನವನ್ನು, ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಸಹಾಯವಾಗುವುದಿಲ್ಲ. ಇದನ್ನೆಲ್ಲಾ ನಿಲ್ಲಿಸುವುದಕ್ಕೆ ಸರ್ಕಾರದವರು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಸಾಮಾನ್ಯ ಆಡಳಿತ ಮತ್ತು ಮೈಸೂರು ವಿಧಾನಸಭೆ ಇವುಗಳ ಖರ್ಚಿಗಾಗಿ ಸರ್ಕಾರದವರು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಯಮೇಲೆ ಮಾತನಾಡುತ್ತಾ ಕೆಲವು ವಿಷಯಗಳನ್ನು ತಿಳಿಸಬೇಕೆಂದು ಇದ್ದೇನೆ. ಮೈಸೂರು ಲೆಜಿಸ್ಲೇಚರ್ ವಿಷಯವಾಗಿ ಮಾತನಾಡಕೂಡದು ಅದು ನನ್ನ ಅಧೀನದಲ್ಲದೆ, ನನ್ನ ಹತ್ತಿರ ಬಂದು ಹೇಳಿ, ಅದನ್ನೆಲ್ಲಾ ನೆಟ್ಟಗೆ ಮಾಡುವುದಕ್ಕೆ ನನಗೆ ಅಧಿಕಾರ ಇದೆ ಎಂದು ತಾವು ಅಪ್ಪಣೆ ಕೊಡಿಸಿದಿರಿ. ಬಹಳ ಸಂತೋಷ ನಮಗೆ ತಮ್ಮ ಕೈಕೆಳಗೆ ಇದ್ದು ನಮಗೆ ತಮ್ಮ ಸಹಾಯ ದೊರೆಯುವುದಾದರೆ, ತಮ್ಮ ರಕ್ಷಣೆ ದೊರೆಯುವುದಾದರೆ ಬಹಳ ಸಂತೋಷ. ತಮ್ಮಲ್ಲಿ ಒಂದನ್ನು ಮಾತ್ರ ಹೇಳುತ್ತೇನೆ ಈ ಆಸ್ಪಿರಿಟಿ ಮೆಷರು ಮೆಂಬರುಗಳಿಗೆ ಮಾತ್ರ ಅನ್ವಯವಾಗುತ್ತದೆಯೇ ಅಥವಾ ಆ ಕಡೆಯವರು,ಮಂತ್ರಿಗಳು ಡೆಪ್ಯುಟಿ ಮಿನಿಸ್ಟರುಗಳು, ಸರ್ಕಾರಿ ನೌಕರರಿಗೂ ಅವರಿಗೂ ಅನ್ವಯವಾಗುತ್ತದೆಯೇ? ಮೆಂಬರುಗಳಿಗೆ ಒಂದೊಂದು ಕೋಣೆ ಕೊಡಬೇಕು ಅಂತ ಇರುವಾಗ ಆಸ್ಪಿರಿಟಿ ಮೆಷರು ಅಂತ ಹೇಳಿ ಒಬ್ಬರು ಇರುವ ಕಡೆ 3 ಜನ ಇರಿ ಎಂದು ಹೇಳಿ ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿ, ಬೀಗ ಒಡೆಯುವುದು, ಬಟ್ಟೆ ಕಳವು ಆಗುವುದು ಎಲ್ಲಾ ಆಯಿತು. ನಮ್ಮನ್ನು ಈ ಸ್ಥಿತಿಯಲ್ಲಿ ಇಟ್ಟಿರಲು ಸರ್ಕಾರ ಯಾವ ಮಾರ್ಗ ಅನುಸರಿಸಿದೆ, ಇದಕ್ಕೆ ಕಾರಣರು ಯಾರು ? ತಮ್ಮ ಅಧಿಕಾರಕ್ಕೆ ಎಲ್ಲ ಚ್ಯುತಿ ಆಯಿತು ? You are our guardian you have to take care of us.

Mr. SPEAKER.—The guardian must look after his ward very well. ನನಗೇನೂ ಅಂಥ embrassment ಆಗಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದಕ್ಕೆ ಕಾರಣ ಏನೆಂದರೆ, ಬಹಳ ಇದೆ. ಸರ್ಕಾರದವರು ಇನ್ನೊಬ್ಬರಿಗೆ ನೀತಿ ಹೇಳುವಾಗ ತಾವು ಆ ನೀತಿ ಅನುಸರಿಸಬೇಕು. ಅಸೆಂಬ್ಲಿ, ಶಾಸನ ಸಭಾ ಸದಸ್ಯರಿಗೆ ಸೆಕ್ರೆಟೆರಿಯಿಂದ ಪತ್ರ ಕಳುಹಿಸುವಾಗ ಬರೀ ಕಾಗದ ಬರುತ್ತದೆ, ಕವರು ಇರುವುದಿಲ್ಲ. ಮಂತ್ರಿಗಳು ಟೂರ್ ಹೋಗುತ್ತಾರೆ ಎಂದರೆ 150 ಪ್ರತಿಗಳಿದ್ದರೆ ಅಷ್ಟನ್ನು ಕವರ್‌ನಲ್ಲಿ ಜೋಡಿಸಿ ಕಳುಹಿಸುತ್ತಾರೆ. ಹೀಗೆ ಅನುಸರಿಸುವ ರೀತಿ, ಮಾರ್ಗ ಏನಿದೆ ಇದು ಸರಿಯಾದ ರೀತಿ, ಮಾರ್ಗವೇ ಎಂದು ಕೇಳುತ್ತೇನೆ. ಇಲ್ಲಿರತಕ್ಕ ಆ ಗೆಜೆಟೆಡ್ ಆಫೀಸರ ಮೇಲೆ ಬಹಳ ಆಪಾದನೆಗಳಿವೆ. ಅವುಗಳನ್ನೆಲ್ಲ ನಾನೀಗ ಇಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಅವರ ವಿಷಯದಲ್ಲಿ ಅಧ್ಯಕ್ಷರು ಸ್ವಲ್ಪ ಎಚ್ಚರಿಕೆಯಿಂದಿರಬೇಕೆಂದು ಅಷ್ಟು ಮಾತ್ರ ಹೇಳುತ್ತೇನೆ. ಈ ಮಾತನ್ನು ನಾನು ಮತ್ತೊಮ್ಮೆ ಒತ್ತಿ ಹೇಳಬಯಸುತ್ತೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇನ್ನು ಈ ಮೈಸೂರು ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್ಟಿಗೆ ಪೂರ್ಣವಾಗಿ ಇಂಡಿಪೆಂಡೆನ್ಸ್ ಕೊಡಬೇಕು, ಇದನ್ನು ಆಟನಮಸ್ ಬಾಡಿಯಾಗಿ ಮಾಡಬೇಕು ಎಂತ ಏನೇನೋ ಹೇಳಿದ್ದಾರೆ. ಇವೆಲ್ಲವನ್ನು ನಾನು ಸಹ ಒಪ್ಪುತ್ತೇನೆ. ಆದರೆ ಈ ವಿಚಾರದಲ್ಲಿ ಆ ಎ.ಜಿ.ಆರ್. ಸಮಿತಿ ವರದಿಯಲ್ಲಿ ಏನೋ ಒಂದು ವಾಕ್ಯ ಬರೆದಿದ್ದಾರೆ......

ಅಧ್ಯಕ್ಷರು.—ಅದು ನನಗೇನೂ ಬೈಂಡಿಗಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿ ಅವರು ಆ ವರದಿಯಲ್ಲಿ ಈ ಸೆಕ್ರೆಟೇರಿಯೆಟ್ಟಿಗೆ ಅಷ್ಟೊಂದು ಹಣ ಖರ್ಚಾಗುತ್ತಿದೆ, ಇಷ್ಟೊಂದು ಹಣ ಖರ್ಚಾಗುತ್ತಿದೆ. ಆ ಸೆಕ್ರೆಟರಿಗಳ ವಿಚಾರವಾಗಿ......

Mr. SPEAKER.—On the floor of the House I won't permit it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ಒಂದೇ ಒಂದು ಪಂಕ್ತಿಯನ್ನು ಓದಿ ಬಿಡುತ್ತೇನೆ. ಏತಕ್ಕೆಂದರೆ ಅವರು ಹೇಳಿರತಕ್ಕ ಮಾತುಗಳು ಕೇವಲ ನಮಗೇ ಅಲ್ಲ ಅದು ಎಲ್ಲರಿಗೂ ಅನ್ವಯಿಸುವ ಮಾತಾಗಿದೆ.........

Mr. SPEAKER.—In the guise of reading the report I cannot allow the member to refer to it. ಅವರು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅವರಿಗೆ ಅಧಿಕಾರ ಬರೆಯುವುದಕ್ಕಿತ್ತು; ಬರೆದಿದ್ದಾರೆ. ಆದರೆ ನಾನು ಅದನ್ನು ಒಪ್ಪುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೋಗಲಿ ಸ್ವಾಮಿ, ಇನ್ನು ಆ ವಿಚಾರ ಬಿಡೋಣ. ಇನ್ನು ಈ ಟೆಲಿಫೋನ್ ಬಿಲ್‌ಗಳ ವಿಚಾರದಲ್ಲಿ ಎದ್ದಿರತಕ್ಕ ಗೊಂದಲವನ್ನು ತಪ್ಪಿಸಲು ಬೇರೇನೂ ಮಾರ್ಗಗಳೇ ಇಲ್ಲವೋ? ಮನಸ್ಸಿದ್ದರೆ ಬೇರೆ ಮಾರ್ಗಗಳನ್ನು ಕಂಡುಹಿಡಿಯಬಹುದು. ಹಾಗೆ ಮಾಡುವುದನ್ನು ಕೈಬಿಟ್ಟು ಇದರ ಬಗ್ಗೆ ಹೀಗೆಲ್ಲಾ ಒಂದು ಅಬ್‌ಜೆಕ್ಷನ್ ಹಾಕತಕ್ಕದ್ದು ಸರಿಯಲ್ಲ. ಇದರಿಂದ ಅಂಥಾ ಪ್ರಾಣ ಹೋಗತಕ್ಕ ಸಂದರ್ಭಗಳೇನಿಲ. ಇನ್ನು ಅಲ್ಲಿಗೆ ಸಪ್ಲೈ ಆಗತಕ್ಕ ಒಂದು ಟವಲ್ ಕರ್ಟನ್ ಇತ್ಯಾದಿ ಸಣ್ಣ ಪುಟ್ಟ ವಿಷಯಗಳಿಗೆಲ್ಲ ಅಬ್‌ಜೆಕ್ಷನ್ ಹಾಕುವುದು ಸರಿಯಾದದ್ದಲ್ಲ. ಆದರೆ ನಮ್ಮ ಹಣಕಾಸಿನ ಸಚಿವರು ಇದಕ್ಕೇ ಹಣ ಕೊಡುವುದಿಲ್ಲ ಎಂದು ಹೇಳುತ್ತಾರೆ. ನೋಡೋಣ ಎಂತ ಅವರ ಮನೆಗೆ ಹೋದರೆ ಅಲ್ಲಿ ಅವರು ಈ ಕರ್ಟನ್‌ಗಳನ್ನೇ ಹಾಕಿರುವುದಿಲ್ಲ. ಆದರೆ ನಾನು ಹೇಳುವುದಿಷ್ಟೆ. ಈ ಸಿಂಪ್ಲಿಸಿಟಿ ಮಿತವ್ಯಯ ಇತ್ಯಾದಿ ವಿಷಯಗಳನ್ನು ಸರ್ಕಾರದವರೇನು ಇತರರಿಗೆ ಬೋಧಿಸುತ್ತಾರೋ ಅದರಂತೆ ಅವರೂ ಸಹ ನಡೆಯಬೇಕು. ಹಾಗಿಲ್ಲದೆ ಏನಿದ್ದರೂ ಈ ಶಾಸ್ತ್ರಗಳನ್ನು ಹೇಳುವುದಕ್ಕೆ ಮಾತ್ರವೇ ಮಾಡಿದೆ, ಅನುಸರಿಸುವುದಕ್ಕಲ್ಲ ಎಂದರೆ ಹೇಗೆ ಸರಿ ಹೋಗುತ್ತದೆ? ಆದ್ದರಿಂದ ಈ ಟೆಲಿಫೋನ್ ವಿಚಾರದಲ್ಲಿ ಒಂದು ಕಂಟ್ರೋಲ್ ಬೋರ್ಡ್‌ನ್ನು ಒಂದು ರೂಮಿನಲ್ಲಿಟ್ಟುಕೊಂಡು ವ್ಯವಸ್ಥೆಯಿಂದ ನಡೆಸಬಹುದು. ಅದಕ್ಕೆ ಹಣ ಖರ್ಚಾದರೆ ಅದು ಯಾರ ತಲೆಮೇಲೂ.........

ಶ್ರೀ ಬಿ. ಡಿ. ಜತ್ತಿ.—ಅದರ ಬಗ್ಗೆ ಹಣ ಸ್ಯಾಂಕ್ಷನ್ ಮಾಡಲಾಗಿದೆ ಕೆಲಸ ಪ್ರಾರಂಭವೂ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆದರೆ ಏನು ಮಾಡುವುದು ಸ್ವಾಮಿ ತಮಗೆ ಇಂಡಿಪೆಂಡೆನ್ಸ್ ಇದೆ ಅಂತ ಹೇಳಿ ಇಲ್ಲೀಗ ನಮ್ಮ ಬಾಯಿಗಳಿಗೆಲ್ಲ ಬೀಗ ಹಾಕಿದ್ದೀರ. ಈಗ ಈ ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್ಟಿನಲ್ಲಿ ಇನ್ನೂ ಏನೇನೋ ನಡೆಯುತ್ತಿದೆ ಎಂತ ಕೇಳುತ್ತಿದ್ದೇನೆ ಆದರೆ ಇಲ್ಲಿ ಮಾತನಾಡಲು ಅವಕಾಶವಿಲ್ಲ.

ಇನ್ನು ಈ ಅಧಿಕಾರಿಗಳು ಸರಿಯಾಗಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕಾಗಿದ್ದರೆ ಎಲ್ಲಿಯವರೆಗೆ ಈ ಸರ್ಕಾರ ಅಧಿಕಾರಿಗಳ ಮೇಲೆ ತಮ್ಮ ಕೈವಾಡ ಮಾಡುವುದಿಲ್ಲವೋ, ಎಲ್ಲಿಯತನಕ ಅವರ ಮೇಲೆ ಒಂದು ಇನ್‌ಫ್ಲೂಯೆನ್ಸನ್ನು ಇವರು ಮಾಡುವುದಿಲ್ಲವೋ ಅಲ್ಲಿಯತನಕ ಈ ಸರ್ಕಾರಿ ಕೆಲಸಗಳು ಚೆನ್ನಾಗಿ ನಡೆಯುತ್ತವೆಂದು ಹೇಳುತ್ತೇನೆ. ಆದರೆ ಈ ದಿವಸ ಆ I.A.S. ಮತ್ತು I.P.S. ಹಾಗೂ ಡಿ.ಸಿ.ಗಳು ಇವರ ಹತ್ತಿರ ಹೋದಾಗ ಅವರಿಗೆ ಏನೇನೋ ಹೇಳಿಬಿಡುತ್ತಾರೆ. ಅದರಿಂದ ಅವರಿಗೆ ಏನು ಕೆಲಸ ಮಾಡುವುದಕ್ಕೂ ಆಗುತ್ತಿಲ್ಲ. ಇಂಥಾ ಪರಿಸ್ಥಿತಿ ಇರುವಾಗ ಹತ್ತು ವರ್ಷಗಳಲ್ಲಿ ಇನ್ನೊಂದು ಶತಮಾನ ಕಳೆದರೂ ಈ ಸರ್ಕಾರಕ್ಕೆ ಜನರು ಶಾಪ ಹಾಕುವುದನ್ನು ಬಿಡುವುದಿಲ್ಲ. ಈ ದಿವಸ ಆ I.A.S. ಅಧಿಕಾರಿಗಳು ಗಡಗಡ ನಡುಗುತ್ತಿದ್ದಾರೆ. ಅವರ ಹತ್ತಿರ ಯಾರಾದರೂ ಹೋದರೆ ಅವರಿಗೆ ಬುದ್ಧಿಯೇ ಓಡುವುದಿಲ್ಲ. "ಇವರು ಯಾರ ಕಡೆಯವರೋ?

ಯಾವ ಗುಂಪಿಗೆ ಸೇರಿದವರೋ ? ಇವರಿಗೆ ಕೆಲಸ ಮಾಡಿಕೊಟ್ಟರೆ ಏನು ಮಾಡುತ್ತಾರೋ, ಮಾಡಿ ಕೊಡದಿದ್ದರೇನು ಮಾಡುತ್ತಾರೋ ಎಂಬ ಈ ನಾನಾ ಆಲೋಚನೆಗಳಿಂದ ಅವರು ಗಡಗಡ ನಡುಗುತ್ತಿದ್ದಾರೆ. ಹೀಗಾಗಿ ಕೆಲಸಗಳೊಂದೂ ಸುಗಮವಾಗಿ ಆಗುತ್ತಿಲ್ಲ. ಆದುದರಿಂದ ಸರ್ಕಾರದವರು ಈ ವಿಚಾರವನ್ನು ತೀವ್ರವಾಗಿ ಆಲೋಚನೆ ಮಾಡತಕ್ಕದ್ದಾಗಿದೆ ಎಂತ ಹೇಳ ಬಯಸುತ್ತೇನೆ. ಹೀಗೆ ಇನ್ನು ಮಂತ್ರಿಗಳು ಆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಿಗೆ ಹೋದಾಗ ಟಿ. ಬಿ.ಗಳಲ್ಲಿ ಉಳಿದುಕೊಂಡು ಅಲ್ಲಿಯ ಮುಖ್ಯಾಧಿಕಾರಿಗಳನ್ನೆಲ್ಲ ಕರೆಸಿ ''ನೀವು ಆ ಕೆಲಸಗಳನ್ನು ಮಾಡಬೇಡಿ, ಈ ಕೆಲಸಗಳನ್ನು ಮಾತ್ರ ಮಾಡಿ'' ಎಂತ ಹೇಳುತ್ತಿದ್ದಾರೆಂದರೆ ಇಲ್ಲಿ ನಮಗೆ ಅದರ ಬಗ್ಗೆ ಸಾಕ್ಷಿ ತಂದುಕೊಡಿ ಎಂತ ಕೇಳಿದರೆ ನಾವು ಹೇಗೆ ಸಾಕ್ಷ್ಯ ಒದಗಿಸಲು ಅವಕಾಶವಿದೆ ? ಸಾಕ್ಷಿ ಗಳಿಲ್ಲ ಎಂತ ಹೇಳಿದರೆ ಆಗ ನಾವು ಹೇಳುವುದನ್ನು ಬೇಸ್‌ಲೆಸ್-ವೇಗ್ ಆರ್ಗ್ಯುಮೆಂಟು ಎಂತ ಹೇಳಿ ಹಾರಿಸಿಬಿಡುತ್ತಾರೆ. ಅಲ್ಲಿಗೆ ಹೋದಾಗ ಹಾಗೆಲ್ಲ ಮಾಡಿ ಇಲ್ಲಿಗೆ ಬಂದಾಗ ನೀವೆಲ್ಲರೂ ಹೊಟ್ಟೆ ಕಟ್ಟಿ-ಬಟ್ಟೆ ಕಟ್ಟಿ ದೇಶಾಭಿವೃದ್ಧಿಗೆ ಮಿಗಿಸಬೇಕೆಂದರೆ ಹೀಗೆ ಸಮಂಜಸವಾಗುತ್ತದೆ ? ನಮಗೆ ಹೇಳುತ್ತಿರುವ ಮಾರ್ಗವನ್ನೇನಾದರೂ ಮಂತ್ರಿಗಳು ಅನುಸರಿಸುತ್ತಿದ್ದಾರೆಯೇ ?

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಸ್ವಾಮಿ, ಅವರು......

